# ದಿನಾಂಕ:29–12–2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 3 (153)/2010–11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೆಂಪೇಗೌಡ ವಸ್ತು ಸಂಗ್ರಹಾಲಯದ ಸಲಹಾ ಸಮಿತಿ ಕೆಲಸ ಕಾರ್ಯಗಳು ಸುಗಮವಾಗಿ ನಡೆದುಕೊಂಡು ಹೋಗಲು ವಸ್ತು ಸಂಗ್ರಹಾಲಯದ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ತಾತ್ಕಾಲಿಕವಾಗಿ ರೂ.5.00 ಲಕ್ಷಗಳನ್ನು ಮಂಜೂರು ಮಾಡಲು ಪೂಜ್ಯ ಮಹಾಪೌರರು ದಿನಾಂಕ:23–08–2010 ರ ಟಿಪ್ಪಣಿಯಲ್ಲಿ ಕೋರಿರುತ್ತಾರೆ.

ಈ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೆಂಪೇಗೌಡ ವಸ್ತು ಸಂಗ್ರಹಾಲಯದ ಸಲಹಾ ಸಮಿತಿ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ತಾತ್ಕಾಲಿಕವಾಗಿ ರೂ.5.00 ಲಕ್ಷಗಳನ್ನು ಮಂಜೂರು ಮಾಡಲು ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:04–11–2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26–11–2010 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26–11–2010 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26–11–2010 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ. ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:29-12-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 4 (154)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ ಸತ್ಯನಾರಾಯಣಗೌಡ, ಸಹಾಯಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದಿಂದ ಪಾಲಿಕೆಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ಇವರ ಸೇವೆಯನ್ನು ಪಾಲಿಕೆಯಲ್ಲಿ ವಿಲೀನಗೊಳಿಸುವ ಬಗ್ಗೆ ಪ್ರಸ್ತಾವನೆಯನ್ನು ಪಾಲಿಕೆಯ ಸಭೆಯ ಮುಂದೆ ಮಂಡಿಸಿ ಸಭೆಯ ಆದೇಶದ ನಂತರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಡಲು ದಿನಾಂಕ:31-08-2010 ರಂದು ಟಿಪ್ಪಣಿಯನ್ನು ಬರೆದು ಸನ್ಮಾನ್ಯ ಮುಖ್ಯಮಂತ್ರಿ ರವರು ಸೂಚಿಸಿರುತ್ತಾರೆ.

ಈ ಸಂಬಂಧ ಪರಿಶೀಲಿಸಲಾಗಿ, ಶ್ರೀ ಸತ್ಯನಾರಾಯಣಗೌಡ, ಸಹಾಯಕರು, ಇವರು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದಿಂದ ಪಾಲಿಕೆಯಲ್ಲಿ ಎರವಲು ಸೇವೆಯ ಮೇಲೆ ದಿನಾಂಕ:21-08-2003 ರಿಂದ ದ್ವಿತೀಯ ದರ್ಜೆ ಸಹಾಯಕರಾಗಿ, 6 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಸದರಿ ನೌಕರರಿಗೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ರವರ ಆದೇಶ ಸಂಖ್ಯೆ: ಕ.ಕೈ.ಅ.ನಿ.ಅ. ಆಡಳಿತ 2010-2011/53, ದಿನಾಂಕ: 19-04-2010 ರ ಆದೇಶದಂತೆ ನಿಗಮದ ಕಿರಿಯ ಸಹಾಯಕರ ಹುದ್ದೆಯಿಂದ ಸಹಾಯಕರ ಹುದ್ದೆಗೆ ಮುಂಬಡ್ತಿ ನೀಡಿದ್ದು, ಸರ್ಕಾರದ ದಿನಾಂಕ:19-05-2010ರ ಪತ್ರದ ಅನುಮೋದನೆಯಂತೆ, ಈ ಕಛೇರಿಯ ದಿ: 31-05-2010ರ ಆದೇಶದಂತೆ ಪಾಲಿಕೆಯಲ್ಲಿ ಎರವಲು ಸೇವೆಯ ಮೇಲೆ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದು, ಹಾಲಿ ಅನ್ಯ ಸೇವೆಯ ಮೇಲೆ ಮಾನ್ಯ ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿ ರವರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ವಯ ಪ್ರಥಮ ದರ್ಜೆ ಸಹಾಯಕರ ಹುದ್ದೆಯನ್ನು ಶೇ. 50 ರಷ್ಟು ನೇರ ನೇಮಕಾತಿಯಿಂದ ಹಾಗೂ ಶೇ 50 ರಷ್ಟು ಪಾಲಿಕೆಯ ದ್ವಿತೀಯ ದರ್ಜೆಯ ನೌಕರರ ವೃಂದದಿಂದ ಮುಂಬಡ್ತಿ ಮೂಲಕ ಭರ್ತಿ ಮಾಡಲು ಮಾತ್ರ ಅವಕಾಶವಿದ್ದು, ಅನ್ಯ ಇಲಾಖೆಗಳಿಂದ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸಲು ಅವಕಾಶವಿರುವುದಿಲ್ಲ.

ಹಾಗೂ ಇತ್ತೀಚೆಗೆ ನಿರ್ದೇಶಕರು, ಮುದ್ರಣ, ಲೇಖನ, ಸಾಮಗ್ರಿ ಮತ್ತು ಪ್ರಕಟಣೆ ಕಾರ್ಯಾಲಯದಿಂದ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿದ್ದ ಶ್ರೀಮತಿ ಅಮರಾವತಿ, ಪ್ರ.ದ.ಗು. ರವರನ್ನು ಪಾಲಿಕೆಯಲ್ಲಿ ವಿಲೀನಗೊಳಿಸುವ ಸಂಬಂಧ ಪಾಲಿಕೆಯ ನೌಕರರು ಆಕ್ಷೇಪಿಸಿ ಘನ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ ರಿಟ್ ಅರ್ಜಿ ಸಂಖ್ಯೆ: 13310/2007 (ಎಸ್-ಆರ್‌ಇಎಸ್) ಗೆ ಸಂಬಂಧಿಸಿದಂತೆ, ಘನ ಉಚ್ಚ ನ್ಯಾಯಾಲಯ MISC. W.No. 11157/2007ರಲ್ಲಿ ದಿನಾಂಕ:07-12-2009 ರಂದು ***"The Apex Court, in C. Muniyappa Naidu's case, having considered the claim of Senior Health Inspectors drawn from the State Directorate, while on deputation to the then Corporation of the City of Bangalore, when absorbed to the permanent posts of Senior Health Inspectors, held that there was no amendment to the C & R Regulations permitting such absorption, and accordingly***

***set-aside the resolution of the City of Corporation absorbing the said persons on deputation. to the posts in the Corporation. In my considered opinion, in the admitted facts of the present case, the recruitment for FDC's under the C & R Regulations is 50% by way of promotion and 50% by direct recruitment. In the absence of an amended to the C & R Regulations, as observed by the Apex Court, no power is invested in the BBMP to absorb persons on deputation from state services, since that is not a channel for recruitment under the Regulations. Applying the principles laid down in C. Muniyappa's case supra, the claim of the 4th respondent for absorption to the cadre of FDC in the respondent BBMP under the C&R Regulations is impermissible............ The Writ Petition is accordingly disposed off"*** ಎಂದು ಆದೇಶ ಹೊರಡಿಸಲಾಗಿರುತ್ತದೆ.

ಅಂತೆಯೇ, ಸರ್ವೋಚ್ಚ ನ್ಯಾಯಾಲಯ / ಉಚ್ಚ ನ್ಯಾಯಾಲಯದ ವಿವಿಧ ಪ್ರಕರಣದಲ್ಲಿನ ತೀರ್ಪುಗಳಲ್ಲಿಯೂ ಸಹ ಎರವಲು ಸೇವೆಯ ನೌಕರರುಗಳನ್ನು ಪಾಲಿಕೆಯಲ್ಲಿ ವಿಲೀನಗೊಳಿಸುವುದಕ್ಕೆ ಅವಕಾಶವಿರುವುದಿಲ್ಲವೆಂದು, ಈಗಾಗಲೇ ಸರ್ಕಾರಕ್ಕೆ ದಿನಾಂಕ: 11-08-2010ರಂದು ಪತ್ರ ಬರೆಯಲಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ಸ್ಥಾಯಿ ಸಮಿತಿ ಮತ್ತು ಪಾಲಿಕೆಯ ಸಭೆಯ ಅವಗಾಹನೆಗೆ ತರುತ್ತಾ, ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಅನ್ಯ ಇಲಾಖೆಯ ಪ್ರಥಮ ದರ್ಜೆ ಸಹಾಯಕರನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸಲು ಅವಕಾಶವಿರುವುದಿಲ್ಲವೆಂಬ ಅಂಶವನ್ನು ಅವಗಾಹನೆಗೆ ತರುತ್ತಾ, ದಿನಾಂಕ:31-08-2010 ರ ಟಿಪ್ಪಣಿಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಸೂಚಿಸಿರುವಂತೆ ಶ್ರೀ ಸತ್ಯನಾರಾಯಣಗೌಡ, ಸಹಾಯಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ, ಇವರ ಸೇವೆಯನ್ನು ಪಾಲಿಕೆಯಲ್ಲಿ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ವಿಲೀನಗೊಳಿಸುವ ಸಂಬಂಧ ಸೂಕ್ತ ತೀರ್ಮಾನಕ್ಕಾಗಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:25-09-2010 ರ ಟಿಪ್ಪಣಿ ಹಾಗೂ ಆಡಳಿತ ಸುಧಾರಣಾ ಸ್ಥಾಯಿ ಸಮಿತಿಗೆ ತೀರ್ಮಾನಕ್ಕಾಗಿ ಕಳುಹಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:15-11-2010 ರ ನಿರ್ಣಯ ಹಾಗೂ ಬೆಂಗಳೂರು ಮಹಾನಗರ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ವಿರುದ್ಧವಾಗಿರುವುದರಿಂದ ಪ್ರಸ್ತಾವನೆ ಕೈಬಿಡುವುದೆಂದು ತೀರ್ಮಾನಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:08-12-2010 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:08-12-2010 ರ ನಿರ್ಣಯವನ್ನು ಒಪ್ಪುವುದು".

.............................3

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:08–12–2010 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ. ನಟರಾಜ

(ಎಸ್.ಕೆ.ನಟರಾಜ)

ಮಹಾಪೌರರು

# ದಿನಾಂಕ:29-12-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 5 (121)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯ ಕೇಂದ್ರಗಳನ್ನು "ಬೆಂಗಳೂರು ಒನ್" ಕೇಂದ್ರಗಳನ್ನಾಗಿ ಪರಿವರ್ತಿಸಿ ಸದರಿ ಕಟ್ಟಡಗಳನ್ನು e-Governance ಇಲಾಖೆಗೆ ಹಸ್ತಾಂತರಿಸುವಂತೆ ಪ್ರಧಾನ ಕಾರ್ಯದರ್ಶಿ, e-Governance ರವರು ದಿನಾಂಕ:30-09-2009 ರಂದು ಪತ್ರ ಬರೆದು ಕೋರಿರುತ್ತಾರೆ.

ಈ ಸಂಬಂಧ, ದಿನಾಂಕ:16-03-2004 ರಂದು ಕರ್ನಾಟಕ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಾಲ್ಕು ಕಟ್ಟಡಗಳನ್ನು "ಬೆಂಗಳೂರು ಒನ್" ಕೇಂದ್ರಗಳನ್ನು ಸ್ಥಾಪಿಸಲು, ಉಚಿತವಾಗಿ ನೀಡಲು ಸಭೆಯಲ್ಲಿ ತೀರ್ಮಾನಿಸಿದ್ದಾರೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಈ ಕೆಳಕಂಡ ನಾಲ್ಕು ಸಹಾಯ ಕೇಂದ್ರಗಳನ್ನು ಕ್ರಮವಾಗಿ (1) ಮತ್ತು (2) ಅನ್ನು ಮಹದೇವಪುರ ವಲಯದ ಜಂಟಿ ಆಯುಕ್ತರು ಹಾಗೂ (3) ಮತ್ತು (4) ಅನ್ನು ಬೊಮ್ಮನಹಳ್ಳಿ ವಲಯದ ಉಪ ಆಯುಕ್ತರು ಗುರುತಿಸಿದ್ದು, "ಬೆಂಗಳೂರು ಒನ್" ಕೇಂದ್ರ ಸ್ಥಾಪಿಸಲು ವರದಿ ನೀಡಿರುತ್ತಾರೆ. ಈಗಾಗಲೇ ಈ ಕಟ್ಟಡಗಳಲ್ಲಿ ಆಸ್ತಿ ತೆರಿಗೆಯನ್ನು ಸ್ವೀಕರಿಸಲಾಗುತ್ತಿದ್ದು, ಇಂತಹ ಕೇಂದ್ರಗಳಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಇನ್ನು ಹೆಚ್ಚಿನ ಸೌಲಭ್ಯಗಳನ್ನು ನೀಡುವುದು ಅತ್ಯವಶ್ಯಕವಾಗಿರುತ್ತದೆ.

ಈ ಸಂಬಂಧ ಮಾನ್ಯ ಆಡಳಿತಗಾರರಿಗೆ ದಿನಾಂಕ:05-01-2010 ರಂದು ಟಿಪ್ಪಣಿ ಮಂಡಿಸಿ, ಸದರಿ ಟಿಪ್ಪಣಿಯನ್ನು ಸಂಖ್ಯೆ:03 ರಲ್ಲಿ ಹೆಚ್.ಎಸ್.ಆರ್. ಬಡಾವಣೆ ಉಪ ವಿಭಾಗ ಕಛೇರಿಯ ಹೆಚ್.ಎಸ್.ಆರ್. 6ನೇ ಸೆಕ್ಟರ್, 9ನೇ ಮುಖ್ಯರಸ್ತೆ, 14ನೇ 'ಸಿ' ಕ್ರಾಸ್ ಪಾಲಿಕೆ ಕಟ್ಟಡವನ್ನು ಹಸ್ತಾಂತರಿಸಲು ಕೋರಿದ್ದು, ಈ ಮೇರೆಗೆ ದಿನಾಂಕ:13-01-2010 ರ ಆಡಳಿತಗಾರರು ವಿಷಯದ ಸಂಖ್ಯೆ: 549/2009-10 ರಲ್ಲಿ ಅನುಮೋದನೆ ನೀಡಿರುತ್ತಾರೆ. ಆದರೆ ಕ್ರಮ ಸಂಖ್ಯೆ:03 ರಲ್ಲಿ ನಮೂದಿಸಿರುವ ಸಹಾಯ ಕೇಂದ್ರದ ಸ್ಥಳದ ಬದಲಾವಣೆ ಮಾಡಿ, ಹೆಚ್.ಎಸ್.ಆರ್. 1ನೇ ಸೆಕ್ಟರ್, 24ನೇ ಮುಖ್ಯರಸ್ತೆಯ ಪಾರ್ಕಿನಲ್ಲಿ ಹೊಸದಾಗಿ ನಿರ್ಮಿಸಲಾದ ಸಹಾಯ ಕೇಂದ್ರ ಕಟ್ಟಡವನ್ನು e-Governance ಇಲಾಖೆಗೆ ಹಸ್ತಾಂತರಿಸುವಂತೆ ಬೊಮ್ಮನಹಳ್ಳಿ ಉಪ ಆಯುಕ್ತರು ತಿಳಿಸಿದ್ದು, ಸದರಿ ಸ್ಥಳ ಬದಲಾವಣೆಗೆ ಘಟನೋತ್ತರ ಅನುಮೋದನೆ ಪಡೆಯುವುದು ಅವಶ್ಯವಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಈಗಾಗಲೇ ಆದೇಶವಾಗಿದ್ದ ಹೆಚ್.ಎಸ್.ಆರ್ ಬಡಾವಣೆ ಉಪ ವಿಭಾಗ ಕಛೇರಿಯ ಹೆಚ್.ಎಸ್.ಆರ್. 6ನೇ ಸೆಕ್ಟರ್, 9ನೇ ಮುಖ್ಯರಸ್ತೆ, 14ನೇ 'ಸಿ' ಕ್ರಾಸ್ ಪಾಲಿಕೆ ಕಟ್ಟಡದ ಬದಲು ಹೆಚ್.ಎಸ್.ಆರ್. ಬಡಾವಣೆ 1ನೇ ಸೆಕ್ಟರ್, 24ನೇ ಮುಖ್ಯರಸ್ತೆ, 16ನೇ ಕ್ರಾಸ್ ಪಾರ್ಕಿನಲ್ಲಿ ಹೊಸದಾಗಿ ನಿರ್ಮಿಸಲಾದ ಸಹಾಯ ಕೇಂದ್ರ ಕಟ್ಟಡವನ್ನು e-Governance ಇಲಾಖೆಗೆ ಹಸ್ತಾಂತರ ಮಾಡಿರುವುದಕ್ಕೆ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:27-07-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:12-10-2010 ರ ನಿರ್ಣಯ.

..............................2

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:12-10-2010 ರ ನಿರ್ಣಯವನ್ನು ಭಾಗಶ: ಒಪ್ಪುತ್ತಾ, e-Governance ಇಲಾಖೆಗೆ ಸಹಾಯ ಕೇಂದ್ರಗಳನ್ನು ಹಸ್ತಾಂತರಿಸುವ ಬದಲು, ಕಾರ್ಯನಿರ್ವಹಿಸಲು ಸ್ಥಳಾವಕಾಶ ಮಾತ್ರ ಮಾಡಿಕೊಡಲು ಒಪ್ಪಿದೆ".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**<u>ನಿರ್ಣಯ:</u>** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:12-10-2010 ರ ನಿರ್ಣಯವನ್ನು ಭಾಗಶ: ಒಪ್ಪುತ್ತಾ, e-Governance ಇಲಾಖೆಗೆ ಸಹಾಯ ಕೇಂದ್ರಗಳನ್ನು ಹಸ್ತಾಂತರಿಸುವ ಬದಲು, ಕಾರ್ಯನಿರ್ವಹಿಸಲು ಸ್ಥಳಾವಕಾಶ ಮಾತ್ರ ಮಾಡಿಕೊಡಲು ಒಪ್ಪಿದೆ".

ಎಸ್. ಕೆ. ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:29-12-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 6 (126)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ.ಎಸ್.ಪ್ರಕಾಶ್ ಎಂಬುವವರು ತಮ್ಮ ತಂದೆಯವರಾದ ಲೇಟ್ ಬಿ.ಸಂಜೀವಿಯವರು ಟಿಂಬರ್‌ಯಾರ್ಡ್ ಲೇಔಟ್‌ನ ಆಸ್ತಿಯಲ್ಲಿ ಗುತ್ತಿಗೆದಾರರಾಗಿದ್ದ ಸಮಯದಲ್ಲಿ ಗುತ್ತಿಗೆ ಅವಧಿ ಮುಗಿಯುವ ಮೊದಲೇ, ಸದರಿ ಜಾಗದಲ್ಲಿ ಪೌರಕಾರ್ಮಿಕರಿಗೆ ವಸತಿ ಸೌಲಭ್ಯ ಕಲ್ಪಿಸಲು ಅವರನ್ನು ತೆರವುಗೊಳಿಸಿದ ಸಂದರ್ಭದಲ್ಲಿ ಪರ್ಯಾಯ ನಿವೇಶನವನ್ನು ಪರಿಹಾರ ರೂಪದಲ್ಲಿ ನೀಡುವುದಾಗಿ ಹೇಳಿದ್ದು, ಆದರೆ ಬೆಂಗಳೂರು ಮಹಾನಗರ ಪಾಲಿಕೆಯು ಪರ್ಯಾಯ ನಿವೇಶನವನ್ನು ನೀಡಿಲ್ಲವೆಂದು ಹೇಳಿಕೊಂಡು ಪರ್ಯಾಯ ನಿವೇಶನ ಕೊಡಲು ನಿರ್ದೇಶನ ಕೋರಿದ್ದು, ರಿಟ್ ಅರ್ಜಿ ಸಂಖ್ಯೆ:15771/94, ರಿಟ್ ಅರ್ಜಿ ಸಂಖ್ಯೆ:33668/2000, ರಿಟ್ ಅಪೀಲು ನಂ. 334/2002 ಗಳಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ. ಇದರ ವಿಚಾರಣೆಗಳ ಸಂದರ್ಭದಲ್ಲಿ ಅವರಿಗೆ ಪರ್ಯಾಯ ನಿವೇಶನ ಕೊಡುವ ಬಗ್ಗೆ ಪಾಲಿಕೆಯು ನ್ಯಾಯಾಲಯದ ಮುಂದೆ ಒಪ್ಪಿಕೊಂಡಿದ್ದು, ಒಪ್ಪಿಕೊಂಡ ರೀತಿಯಲ್ಲಿ ಪರ್ಯಾಯ ನಿವೇಶನವನ್ನು ಪತ್ತೆ ಹಚ್ಚಲು ಪಾಲಿಕೆಯಿಂದ ವಿವಿಧ ರೀತಿಯಲ್ಲಿ ಪ್ರಯತ್ನಿಸಿದರೂ ಅಂತಹ ನಿವೇಶನವನ್ನು ಗುರುತಿಸಲಾಗದೇ, ಅದನ್ನು ಸದರಿಯವರಿಗೆ ನೀಡಲು ಸಾಧ್ಯವಾಗಿಲ್ಲ. ಈ ಕಾರಣಕ್ಕಾಗಿ ಅರ್ಜಿದಾರರಾದ ಶ್ರೀ.ಎಸ್.ಪ್ರಕಾಶ್ ರವರು ರಿಟ್ ಪಿಟಿಷನ್ ಸಂಖ್ಯೆ:14170/08 ರನ್ವಯ ಉಚ್ಚ ನ್ಯಾಯಾಲಯದಲ್ಲಿ ನ್ಯಾಯಾಂಗ ನಿಂದನಾ ಪ್ರಕರಣವನ್ನು ದಾಖಲಿಸಿಕೊಂಡಿದ್ದು, ಇದರ ವಿಚಾರಣೆ ಪ್ರಗತಿಯಲ್ಲಿರುವಾಗ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರವರು ವೈಯಕ್ತಿಕವಾಗಿ ಹಾಜರಾಗಬೇಕೆಂಬ ನಾನ್-ಬೇಲೆಬಲ್ ವಾರೆಂಟ್ ಅನ್ನು ಜಾರಿಗೊಳಿಸಿದ ಮೇರೆಗೆ, ಆಯುಕ್ತರು ನ್ಯಾಯಾಲಯಕ್ಕೆ ಹಾಜರಾಗಿ ಪರ್ಯಾಯ ನಿವೇಶನವನ್ನು 30 ದಿನಗಳ ಒಳಗಾಗಿ ಅರ್ಜಿದಾರರಿಗೆ ನೀಡುವುದಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದರು.

ಸದರಿ ಪ್ರಮಾಣ ಪತ್ರದ ಪ್ರಕಾರ ನೊಂದ ಅರ್ಜಿದಾರರಿಗೆ ಪಾಲಿಕೆಯ ಒಡೆತನದಲ್ಲಿರುವ ಸ್ವತ್ತುಗಳನ್ನು ಪತ್ತೆ ಹಚ್ಚಲು ಸಾಧ್ಯವಾಗದಿದ್ದಾಗ, ಬೊಮ್ಮನಹಳ್ಳಿ ವಲಯದ ವ್ಯಾಪ್ತಿಗೆ (ಈಗಿನ ಮಹದೇವಪುರ ವಲಯ) ಬರುವ ಅಂಬಲೀಪುರ ಗ್ರಾಮದ ಸರ್ವೆ ನಂ.24 ರಲ್ಲಿ ಇದ್ದ ಆಕಾರ ಕಳೆದುಕೊಂಡ ಸರ್ಕಾರಿ ಕುಂಟೆ ಜಾಗದ ಪೈಕಿ 10,890 ಚ.ಅಡಿ ಜಾಗವನ್ನು ಮಾಸಿಕ ಗುತ್ತಿಗೆ ದರ ರೂ.63,525/- ರಂತೆ ನಿಗಧಿಪಡಿಸಿ, ಜಿಲ್ಲಾಧಿಕಾರಿಗಳವರಿಂದ ಭೂ ಬದಲಾವಣೆ ಮತ್ತು ಪಾಲಿಕೆಗೆ ಹಕ್ಕು ವರ್ಗಾವಣೆ ಮಾಡುವ ಷರತ್ತಿಗೊಳಪಡಿಸಿ 5 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೀಡಲು ಮತ್ತು 25 ವರ್ಷಗಳ ಅವಧಿಗೆ ಪುನಃ ಅದನ್ನು ಮುಂದುವರೆಸಲು ಸರ್ಕಾರದ ಅನುಮೋದನೆ ಕೋರುವ ಬಗ್ಗೆ ಮಾನ್ಯ ಆಡಳಿತಗಾರರಿಂದ ವಿಷಯದ ಸಂಖ್ಯೆ:269/2009-10, ದಿನಾಂಕ : 14-08-2009 ರಲ್ಲಿ ನಡವಳಿಗಳ ಮೂಲಕ ಅನುಮೋದನೆ ಪಡೆಯಲಾಗಿದೆ. ಮಾನ್ಯ ಆಡಳಿತಗಾರರು ನೀಡಿದ ಅನುಮೋದನೆಯನ್ವಯ ಪಾಲಿಕೆ ಅಧಿಕಾರ ವ್ಯಾಪ್ತಿಯಲ್ಲಿರುವಂತೆ 5 ವರ್ಷಕ್ಕೆ ಗುತ್ತಿಗೆ ನೀಡಲು ಆದೇಶ ಹೊರಡಿಸಿ ಅದನ್ನು ಅರ್ಜಿದಾರರಿಗೆ ತಿಳಿಸಿ ಅಗತ್ಯ ಗುತ್ತಿಗೆ ಕರಾರನ್ನು ಮಾಡಿಕೊಳ್ಳಲು ಕರೆಸಲಾಗಿದೆ ಹಾಗೂ ಈ 5 ವರ್ಷ ಬಿಟ್ಟು ಉಳಿದ 25 ವರ್ಷಗಳ ಅವಧಿಗೆ ಮಾರುಕಟ್ಟೆ ದರದಂತೆ ಮಾಸಿಕ ರೂ.63,525/-ಗಳನ್ನು ನಿಗಧಿಪಡಿಸಿ ಗುತ್ತಿಗೆಗೆ ನೀಡಲು ಅನುಮೋದನೆ ಕೋರಿ ದಿನಾಂಕ:22-08-2009 ರಂದು ಸರ್ಕಾರಕ್ಕೆ ಪತ್ರ ಬರೆಯಲಾಗಿದೆ.

ಈ ಮೇಲೆ ತಿಳಿಸಿದಂತೆ ಅರ್ಜಿದಾರರಿಗೆ ಗುತ್ತಿಗೆ ದರವನ್ನು ಪಾವತಿಸಿ ಕರಾರು ಪತ್ರವನ್ನು ಮಾಡಿಕೊಳ್ಳಲು ತಿಳುವಳಿಕೆ ಪತ್ರವನ್ನು ದಿನಾಂಕ:13-01-2010ರಂದು ಜಾರಿ ಮಾಡಲಾಗಿರುತ್ತದೆ. ಆದರೆ,

ಅರ್ಜಿದಾರರು ತಾವು 30 ವರ್ಷಗಳಿಂದ ನ್ಯಾಯಾಲಯದಲ್ಲಿ ಹೋರಾಟ ನಡೆಸಿದ್ದು, ವ್ಯಾಪಾರ ವಹಿವಾಟಿನಲ್ಲಿ ರೂ.10 ಕೋಟಿಗೂ ಹೆಚ್ಚಿನ ನಷ್ಟ ಉಂಟಾಗಿರುವುದರಿಂದ ಈಗ ಗುತ್ತಿಗೆಗೆ ನೀಡಿರುವ ಮಾಸಿಕ ಹಣವು ಅತೀ ಹೆಚ್ಚಾಗಿರುವುದರಿಂದ ತಮ್ಮನ್ನು ತೆರವುಗೊಳಿಸಿದ ಜಾಗಕ್ಕೆ ಸರಿದೂಗಿಸಲು 1 ಎಕರೆ ಜಾಗವನ್ನು ತಮಗೆ ಮಂಜೂರು ಮಾಡಿಕೊಡಬೇಕೆಂದು ದಿನಾಂಕ:02-03-2010 ರಂದು ಮನವಿಯನ್ನು ಸಲ್ಲಿಸಿರುತ್ತಾರೆ.

ಅರ್ಜಿದಾರರ ತಂದೆಯವರಿಗೆ 1538 ಗಜ ಜಾಗವನ್ನು ವಾರ್ಷಿಕ ಬಾಡಿಗೆಯ ಮೊತ್ತ ರೂ.1153.50 ರಂತೆ ನಿಗಧಿಪಡಿಸಿ 1977 ರಲ್ಲಿ ನೀಡಲಾಗಿತ್ತು ಎಂದು ತಿಳಿಸಿರುವ ಅರ್ಜಿದಾರರು, ಸದರಿ ಪ್ರದೇಶವನ್ನು ಬಿ.ಎಂ.ಪಿಯ ಪೌರಕಾರ್ಮಿಕರಿಗೆ ವಸತಿ ಯೋಜನೆ ಮಾಡಲು ಸ್ವಾಧೀನಪಡಿಸಿಕೊಂಡು ನಂತರ ಪರಿಹಾರವಾಗಿ ಪರ್ಯಾಯ ನಿವೇಶನ ನೀಡುವ ಭರವಸೆ ನೀಡಲಾಗಿದ್ದರೂ ಪಾಲಿಕೆಯು ಇತರೆಯವರಿಗೆ ನೀಡಿದ್ದು, ತಮ್ಮ ತಂದೆಗೂ ನೀಡಲಿಲ್ಲವೆಂಬ ಕಾರಣಕ್ಕಾಗಿ ನ್ಯಾಯಾಲಯಕ್ಕೆ ಹೋಗಿ ಈ ಆದೇಶ ಪಡೆದು ತಂದಿರುವುದಾಗಿ ತಿಳಿಸಿ ತಮಗೆ ಪರ್ಯಾಯ ನಿವೇಶನವಾಗಿ ಈಗಿನ ಮಹದೇವಪುರ ವಲಯದ ಅಂಬಲೀಪುರದಲ್ಲಿ 1 ಎಕರೆ ಜಾಗ ಕೊಡಬೇಕೆಂದು ಕೇಳಿರುತ್ತಾರೆ.

ಇವರಿಗೆ 1538 ಚದರ ಗಜದ ಜಾಗವನ್ನು ಲೀಸ್ ಮೇಲೆ ನೀಡಲಾಗಿದ್ದು, ಅದಕ್ಕೆ ಪರ್ಯಾಯವಾಗಿ ಅಷ್ಟೇ ವಿಸ್ತೀರ್ಣದ ಅಥವಾ ಸ್ಥಳಾಂತರದ ಅಂಶವನ್ನು ಗಮನದಲ್ಲಿರಿಸಿಕೊಂಡು ಅದಕ್ಕೆ ಸರಿಹೊಂದುವ ರೀತಿಯ ವಿಸ್ತೀರ್ಣದ ಜಾಗವನ್ನು ಗುತ್ತಿಗೆಯ ಮೇಲೆ ಕೊಡಬೇಕಾಗಿತ್ತು. ಗೌರವಾನ್ವಿತ ಉಚ್ಚ ನ್ಯಾಯಾಲಯದ ಆದೇಶ ಬಂದ ನಂತರ ಸದರಿಯವರಿಗೆ ಹಿಂದಿನ ಬೊಮ್ಮನಹಳ್ಳಿ (ಪ್ರಸ್ತುತ ಮಹದೇವಪುರ) ವಲಯ ವ್ಯಾಪ್ತಿಯಲ್ಲಿ ಬರುವ ಅಂಬಲೀಪುರ ಗ್ರಾಮದ ಹರಳೂರು ಮುಖ್ಯರಸ್ತೆಗೆ ಹೊಂದಿಕೊಂಡಂತೆ ಇರುವ ಸರ್ಕಾರಿ ಕುಂಟೆಯ ಜಾಗದಲ್ಲಿ ಮೇಲೆ ತಿಳಿಸಿದ ಒಂದು ಭಾಗಕ್ಕೆ 10,890 ಚ.ಅ ಜಾಗವನ್ನು ಇವರಿಗೆ 5 ವರ್ಷದ ಗುತ್ತಿಗೆಗೆ ಕೊಡಲು ತೀರ್ಮಾನವಾಗಿರುತ್ತದೆ. ಸದರಿ ಜಾಗವು ಈಗಲೂ ಸರ್ಕಾರದ ಕಂದಾಯ ಇಲಾಖೆಯ ಮಾಲೀಕತ್ವದಲ್ಲಿಯೇ ಇದ್ದು, ಇದನ್ನು ಬಿಬಿಎಂಪಿಗೆ ಹಸ್ತಾಂತರಿಸಲು ಕೇಳಿಕೊಂಡಾಗ ಅಪರ ಜಿಲ್ಲಾಧಿಕಾರಿಗಳು ತಮ್ಮ ಪತ್ರದ ಸಂಖ್ಯೆ:ಎಲ್.ಎನ್.ಡಿ(ಪೂ)ಸಿಆರ್.266/09-10, ದಿನಾಂಕ:17-05-2010 ರಲ್ಲಿ ಕಂದಾಯ ಇಲಾಖೆಯಿಂದ ಬಿಬಿಎಂಪಿಗೆ ಹಸ್ತಾಂತರಿಸಲು ಅನುಮತಿ ಕೋರಿ ಸರ್ಕಾರಕ್ಕೆ ಸಲ್ಲಿಸಿರುವ ಸರ್ಕಾರಿ ಜಮೀನುಗಳ ಪಟ್ಟಿಯಲ್ಲಿ ಈ ಸ್ಥಳವೂ ಸಹ ಸೇರಿದೆ ಎಂದು ಉತ್ತರವನ್ನು ಕಳುಹಿಸಿದ್ದು, ಅರ್ಥಾತ್ ಈ ಜಮೀನು ಇನ್ನೂ ಬಿಬಿಎಂಪಿಗೆ ಹಸ್ತಾಂತರವಾಗಿಲ್ಲ. ಪ್ರಸ್ತುತ ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976 ರ ಕಲಂ 02 ರಲ್ಲಿರುವ ಅಧಿಕಾರವನ್ನು ಬಳಸಿ ಈ ಜಾಗವನ್ನು ಸಂರಕ್ಷಿಸಲು ಬಿಬಿಎಂಪಿಯಿಂದ ಸುತ್ತಲೂ ತಂತಿ ಬೇಲಿ ಹಾಕಿಸಿ ಸರ್ಕಾರದ ಅನುಮೋದನೆಯ ನಿರೀಕ್ಷೆಯ ಮೇರೆಗೆ ಇವರಿಗೆ ಗುತ್ತಿಗೆಗೆ ನೀಡಿರುವ ಜಾಗವನ್ನು ಹೊರತುಪಡಿಸಿ ಅಲ್ಲಿರುವ ಹಲವಾರು ಅಪಾರ್ಟ್‌ಮೆಂಟ್ ನಿವಾಸಿಗಳ ಉಪಯೋಗಕ್ಕಾಗಿ ಉಳಿದ ಜಾಗದಲ್ಲಿ ಒಂದು ಪಾರ್ಕ್ ಮತ್ತು ಸಂಪರ್ಕ ಕೇಂದ್ರವನ್ನು ಸ್ಥಾಪಿಸಲು ಯೋಜನೆ ರೂಪಿಸಿ ಅದರ ಅನುಷ್ಠಾನಕ್ಕಾಗಿ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ಈಗ ಅರ್ಜಿದಾರರು ಕೇಳುತ್ತಿರುವಂತೆ ಅವರಿಗೆ ಸದರಿ ಜಾಗದಲ್ಲಿ 1-0 ಎಕರೆ ಜಾಗವನ್ನು ಮಂಜೂರು ಮಾಡಲು ಸದರಿ ಜಮೀನಿನ ಮಾಲೀಕತ್ವವು ಬಿಬಿಎಂಪಿಗೆ ಇದುವರೆಗೆ ಬಂದಿಲ್ಲ, ಅಪಾರ ಪ್ರಮಾಣದ ಐ.ಟಿ ಉದ್ಯೋಗಿಗಳು ವಾಸಿಸುವ ಈ ಪ್ರದೇಶದಲ್ಲಿ ಸರಿಯಾದ ಉದ್ಯಾನಗಳಿಲ್ಲದೆ ಇರುವುದರಿಂದ ಪ್ರಸ್ಥಾಪಿತ ಜಾಗದ ಮಂಜೂರಾತಿಗೆ ಸ್ಥಳಿಯರಿಂದ ಆಕ್ಷೇಪಣೆ ಬರುವ ಸಾಧ್ಯತೆ ಇದೆ.

..............................3

ಮೇಲ್ಕಂಡ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಹಾಗೂ ನ್ಯಾಯಾಲಯದಲ್ಲಿ ಆಗಿರುವ ಆದೇಶದಲ್ಲಿ ಪರ್ಯಾಯ ನಿವೇಶನವನ್ನು ಗುತ್ತಿಗೆಗೆ ನೀಡಲು ಆದೇಶವಾಗಿರುವುದರಿಂದ, ಅರ್ಜಿದಾರರಾದ ಶ್ರೀ.ಎಸ್.ಪ್ರಕಾಶ್ ರವರು ಕೇಳಿರುವಂತೆ ಬೆಂಗಳೂರು ಪೂರ್ವ ತಾಲ್ಲೂಕು ಅಂಬಲೀಪುರ ಗ್ರಾಮದ ಸರ್ವೆ ನಂ.24 (ಸರ್ಕಾರಿ ಕುಂಟೆ) ರಲ್ಲಿ 1-00 ಎಕರೆ ವಿಸ್ತೀರ್ಣವನ್ನು ಹಾಲಿ ಮಾರುಕಟ್ಟೆ ದರ ಚ.ಅಡಿ ಒಂದಕ್ಕೆ ರೂ.700/- (ರೂಪಾಯಿ ಏಳು ನೂರು ಮಾತ್ರ) ರಂತೆ ವಿಧಿಸಿ ಪುನಃ ಸರ್ಕಾರದ ಅನುಮೋದನೆಯ ನಿರೀಕ್ಷೆಯ ಮೇಲೆ ಕ್ರಯಕ್ಕೆ ನೀಡುವುದೇ ಅಥವ ಈಗಾಗಲೇ ಗುತ್ತಿಗೆಗೆ ನೀಡಲು ತೀರ್ಮಾನಿಸಿರುವ ಜಾಗವನ್ನಷ್ಟೇ ಪಡೆದುಕೊಳ್ಳುವಂತೆ ಅರ್ಜಿದಾರರಿಗೆ ಪುನ: ತಿಳಿಸುವುದೇ ಎಂಬುವುದರ ಬಗ್ಗೆ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:07-08-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ ಈ ಸ್ವತ್ತು ಸರ್ಕಾರದಿಂದ ಬಿ.ಬಿ.ಎಂ.ಪಿ. ಗೆ ಮಂಜೂರಾತಿ ನಿರೀಕ್ಷಿಸಿ 10,890 ಚ.ಅಡಿ ಜಾಗವನ್ನು 5 ವರ್ಷಗಳ ಅವಧಿಗೆ ಗುತ್ತಿಗೆಗೆ ಕೊಡಬಹುದಾಗಿದ್ದು, ಸದರಿ ಜಾಗವನ್ನು ಪಡೆದುಕೊಳ್ಳುವಂತೆ ಅರ್ಜಿದಾರರಾದ ಶ್ರೀ.ಎಸ್.ಪ್ರಕಾಶ್‌ರವರಿಗೆ ಪುನ: ತಿಳಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:12-10-2010 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನ್ಯಾಯಾಲಯದ ಆದೇಶದ ವಿರುದ್ಧ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಲು ಮಾನ್ಯ ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಿತು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ನ್ಯಾಯಾಲಯದ ಆದೇಶದ ವಿರುದ್ಧ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಲು ಮಾನ್ಯ ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಿತು".

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)

ಮಹಾಪೌರರು

# ದಿನಾಂಕ:29–12–2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 7(143)/2010–11

ಟಿಪ್ಪಣಿಯಲ್ಲಿ ವಿವರಿಸುವಂತೆ, ವಾರ್ಡ್ ಸಂಖ್ಯೆ:65 ರ ಕಾಡುಮಲ್ಲೇಶ್ವರದ ವಯ್ಯಾಲಿಕಾವಲ್‌ನಲ್ಲಿರುವ ದೋಬಿಘಾಟ್‌ನಲ್ಲಿ ಸ್ಥಳಾವಕಾಶವಿದ್ದು, ಈ ಪ್ರದೇಶದಲ್ಲಿ ವಸತಿ ಸಂಕೀರ್ಣ ನಿರ್ಮಾಣ ಮಾಡಿಕೊಡಲು ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ಅನುಮತಿ ನೀಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸದರಿ ವಾರ್ಡಿನ ಪಾಲಿಕೆ ಸದಸ್ಯರು ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸದಸ್ಯರಾದ ಶ್ರೀ.ಜಿ.ಮಂಜುನಾಥರಾಜು ರವರು ದಿನಾಂಕ:25–10–2010 ರಂದು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಪತ್ರ ಮುಖೇನ ಕೋರಿರುವ ಬಗ್ಗೆ ಹಾಗೂ ವಾರ್ಡ್ ಸಂಖ್ಯೆ:65 ರ ಕಾಡುಮಲ್ಲೇಶ್ವರದ ವಯ್ಯಾಲಿಕಾವಲ್‌ನಲ್ಲಿರುವ ದೋಬಿಘಾಟ್‌ನಲ್ಲಿ ಸ್ಥಳಾವಕಾಶವಿದ್ದು, ಈ ಪ್ರದೇಶದಲ್ಲಿ ವಸತಿ ಸಂಕೀರ್ಣ ನಿರ್ಮಾಣ ಮಾಡಲು ನಿಯಮಾನುಸಾರ ಅನುಮತಿ ನೀಡಲು ಪಾಲಿಕೆಯ ಸಭೆಯ ಅನುಮೋದನೆಗೆ ಮಂಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:27–10–2010 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:27–10–2010 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:27–10–2010 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ. ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

## ದಿನಾಂಕ:29-12-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

### ವಿಷಯದ ಸಂಖ್ಯೆ: 8 (144)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಹಾನಗರ ಪಾಲಿಕೆಯಿಂದ ಕೈಗೊಳ್ಳುವ ಕೆಲವು ಅಭಿವೃದ್ಧಿ ಕಾಮಗಾರಿಗಳಿಗೆ ವ್ಯಯ ಮಾಡುವ ವೆಚ್ಚವನ್ನು ಮೇಲ್ವಾಟು ವೆಚ್ಚ ಎಂದು ಪರಿಗಣಿಸಿ ಸ್ಥಾಯಿ ಸಮಿತಿಯ ಅನುಮೋದನೆ ಪಡೆದು ಘೋಷಿಸಲು ಕರ್ನಾಟಕ ಪೌರ ನಿಗಮಗಳ ಕಾಯ್ದೆ 1976 ಕಲಂ 466ರ ಅಡಿಯಲ್ಲಿ ಅವಕಾಶ ಇದೆ. ಈ ರೀತಿ ಘೋಷಿಸಲಾದ ವೆಚ್ಚವನ್ನು ಅಂತಹ ಅಭಿವೃದ್ಧಿ ಕೆಲಸಗಳ ಪ್ರಯೋಜನ ಪಡೆಯುವ ಸ್ವತ್ತುಗಳ ಮಾಲೀಕರಿಂದ ಗರಿಷ್ಠ 20 ವರ್ಷಗಳ ಅವಧಿಯಲ್ಲಿ ಪ್ರತಿಯೊಂದು ಪ್ರಕರಣಗಳಲ್ಲಿ ಆಯುಕ್ತರವರು ಸೂಕ್ತವೆಂದು ಭಾವಿಸಬಹುದಾದಂತ ವಿಧಾನದಲ್ಲಿ ವಸೂಲು ಮಾಡುವಲ್ಲಿ ಸದರಿ ಕಾಯ್ದೆಯ ಕಲಂ 467ರ ಅಡಿಯಲ್ಲಿ ಅಧಿಕಾರ ಒದಗಿಸಲಾಗಿದೆ.

ಮೇಲಿನ ಅವಕಾಶವನ್ನು ಬಳಸಿಕೊಂಡು ಪಾಲಿಕೆಯು ತನ್ನ ವ್ಯಾಪ್ತಿಗೆ ಹೊಸದಾಗಿ ಸೇರಿಸಲ್ಪಟ್ಟಿರುವ ರೆವಿನ್ಯೂ ಪ್ರದೇಶಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಮಾಡಿರುವ ಹಾಗೂ ಮಾಡಲಾಗುವ ವೆಚ್ಚವನ್ನು ಅಂದಾಜು ಮಾಡಿ, ಅಂತಹ ಪ್ರದೇಶದಲ್ಲಿರುವ ಸ್ವತ್ತುಗಳ ಮೇಲೆ ಮೇಲ್ವಾಟು ವೆಚ್ಚವೆಂದು ಘೋಷಿಸಿ ಕಾಲಕಾಲಕ್ಕೆ ನಿಗಧಿಪಡಿಸಿದ ದರಗಳಲ್ಲಿ ಸಂಗ್ರಹ ಮಾಡಲಾಗುತ್ತಿತ್ತು.

ಪಾಲಿಕೆ ಅನುಸರಿಸುತ್ತಿರುವ ಈ ಕ್ರಮವು ಕಲಂ 466 ರ ಪ್ರಕಾರ ಇಲ್ಲವೆಂತಲೂ ಹಾಗೂ ಕಲಂ 466 ಎ ಅಡಿಯಲ್ಲಿ ಬರುವ ಸ್ವತ್ತುಗಳಿಗೆ ಸಂಬಂಧಿಸಿದ ವೆಚ್ಚಗಳನ್ನಲ್ಲದೆ ಬೇರೆ ವೆಚ್ಚವನ್ನು ಮೇಲ್ವಾಟು ವೆಚ್ಚವಾಗಿ ಸಂಗ್ರಹಿಸಲು ಬರುವುದಿಲ್ಲವೆಂದು ವಾದಿಸಿ, ಕೆಲವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ಸಲ್ಲಿಸಿದ್ದು, ಈ ರಿಟ್ ಅರ್ಜಿಗಳ ಮೇಲೆ ವಿಚಾರಣೆ ನಡೆಸಿದ ನ್ಯಾಯಾಲಯವು ಪಾಲಿಕೆಯು ಮೇಲ್ಕಂಡಂತೆ ಮೇಲ್ವಾಟು ವೆಚ್ಚ ವಿಧಿಸಲು ಅಗತ್ಯವಾದ ನಿಯಮಾವಳಿಗಳನ್ನು ರೂಪಿಸಿಲ್ಲವೆಂಬುದನ್ನು ಗಮನಿಸಿದಾಗ, ಈ ಕುರಿತು ಕಲಂ 466 ಬಿ ಅಡಿಯಲ್ಲಿ ನಿಯಮಾವಳಿಗಳನ್ನು ರೂಪಿಸುವುದಾಗಿ 2001 ರಲ್ಲಿ ನ್ಯಾಯಾಲಯಕ್ಕೆ ಮಹಾನಗರ ಪಾಲಿಕೆಯು ಪ್ರಮಾಣ ಪತ್ರ ಸಲ್ಲಿಸಲಾಗಿತ್ತು.

ಇದಾದ ನಂತರ ಬೆಂಗಳೂರು ಮಹಾನಗರ ಪಾಲಿಕೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಪರಿವರ್ತನೆಗೊಂಡ ನಂತರ ಮತ್ತೇ ಹೊಸದಾಗಿ ಸೇರ್ಪಡೆಗೊಂಡ ರೆವಿನ್ಯೂ ಪ್ರದೇಶಗಳಲ್ಲೂ ಸಹ ಅಗತ್ಯ ಪೌರ ಸೌಲಭ್ಯಗಳನ್ನು ಒದಗಿಸುವ ಅನಿವಾರ್ಯತೆ ಉಂಟಾಯಿತು. ಇದಲ್ಲದೆ, ಈ ಪ್ರದೇಶಗಳಲ್ಲಿ ಎಕರೆಗಟ್ಟಲೆ ಆಸ್ತಿಗಳು ಪಾಲಿಕೆಯಿಂದ ಖಾತೆ ಬಯಸಿ ಬರಲಾರಂಬಿಸಿದ್ದು, ಇಲ್ಲೂ ಸಹ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕಾದ ಜವಾಬ್ದಾರಿ ಪಾಲಿಕೆಗೆ ಇರುವುದನ್ನು ಗಮನದಲ್ಲಿಟ್ಟುಕೊಂಡು, ಹೊಸದಾಗಿ ಭೂಪರಿವರ್ತನೆಗೊಂಡ ಸ್ವತ್ತುಗಳಿಗೆ ಈ ಕೆಳಕಂಡಂತೆ ಮೇಲ್ವಾಟು ವೆಚ್ಚ ಸಂಗ್ರಹಿಸಲು ದರ ನಿಗಧಿಪಡಿಸಿ ಆಯುಕ್ತರು ದಿನಾಂಕ:7-11-2007 ರಂದು ಸುತ್ತೋಲೆ ಹೊರಡಿಸಿದ್ದರು.

..............................2

| ಕ್ರಮ ಸಂಖ್ಯೆ | ನಿವೇಶನದ ವಿಸ್ತೀರ್ಣ | ವಿಧಿಸಬೇಕಾದ ಮೇಲ್ವಾಟು ವೆಚ್ಚ |
|---|---|---|
| 1 | 60 ಚದರ ಮೀಟರ್ ಮತ್ತು ಅದಕ್ಕಿಂತ ಕಡಿಮೆ ವಿಸ್ತೀರ್ಣದ ಸ್ವತ್ತುಗಳಿಗೆ | ಒಂದು ಚ.ಮೀ.ಗೆ ರೂ. 200/- ರಂತೆ |
| 2 | 60 ಚದರ ಮೀಟರ್ ಮೇಲ್ಪಟ್ಟು 120 ಚದರಮೀಟರ್ ವಿಸ್ತೀರ್ಣವುಳ್ಳ ಸ್ವತ್ತುಗಳಿಗೆ | ಒಂದು ಚ.ಮೀ.ಗೆ ರೂ. 400/- ರಂತೆ |
| 3 | 120 ಚದರಮೀಟರ್ ವಿಸ್ತೀರ್ಣಕ್ಕಿಂತ ಮೇಲ್ಪಟ್ಟ ಸ್ವತ್ತುಗಳಿಗೆ | ಒಂದು ಚ.ಮೀ.ಗೆ ರೂ. 600/- ರಂತೆ |

ಆಯುಕ್ತರ ಸುತ್ತೋಲೆಯಂತೆ ಮೇಲ್ವಾಟು ವೆಚ್ಚ ಸಂಗ್ರಹಸಿ ಖಾತೆ ನೀಡುವ ಕಾರ್ಯ ಪ್ರಾರಂಭಿಸಲಾಯಿತು. ಈ ಸಂದರ್ಭದಲ್ಲಿ ಮೆ : ಜನಪ್ರಿಯ ಸಿಂಡಿಕೇಟ್ ಸಂಸ್ಥೆಯವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿ, (W.P No.5035/2008), ಈ ಮೇಲಿನ ಸುತ್ತೋಲೆಯ ನಿರ್ದೇಶನದಂತೆ ಪಾಲಿಕೆಯು ಸಂಗ್ರಹಿಸುತ್ತಿರುವ ಮೇಲ್ವಾಟು ವೆಚ್ಚ ನಿಯಮ ಬಾಹಿರವೆಂದು ಪ್ರತಿಪಾದಿಸಿದ್ದು, ಈ ಬಗ್ಗೆ ವಿಚಾರಣೆ ನಡೆಸಿದ ಉಚ್ಚ ನ್ಯಾಯಾಲಯವು ದಿನಾಂಕ : 21-7-2008 ರ ತನ್ನ ಆದೇಶದಲ್ಲಿ ಮೇಲ್ವಾಟು ವೆಚ್ಚ ವಿಧಿಸಲು ಪಾಲಿಕೆಯು ನಿಯಮಗಳನ್ನು ರೂಪಿಸಿದೇ ಇರುವ ಕಾರಣ, ಅದನ್ನು ಸಂಗ್ರಹಿಸಲು ಬರುವುದಿಲ್ಲವೆಂದು ತೀರ್ಮಾನಿಸಿ ದಿನಾಂಕ:7-11-2007 ರ ಆಯುಕ್ತರ ಸುತ್ತೋಲೆಯನ್ನು ರದ್ದು ಮಾಡಿ ಆದೇಶಿಸಿತು.

ಈ ಮೇಲಿನ ಆದೇಶ ಬಂದ ನಂತರ ನಿಯಮಗಳನ್ನು ರೂಪಿಸದ ಹೊರತು ಹೊಸದಾಗಿ ಭೂಪರಿವರ್ತನೆಗೊಂಡು ಎಕರೆಗಟ್ಟಲೆ ಏಕ ನಿವೇಶನಗಳು ಖಾತಾ ಬಯಸಿ ಬಂದ ಪ್ರಕರಣಗಳಲ್ಲಿ ಖಾತೆ ನೀಡುವ ಕಾರ್ಯವನ್ನು ಸ್ಥಗಿತಗೊಳಿಸಬೇಕೇ ಅಥವಾ ಮುಂದುವರೆಸಬೇಕೇ ಎಂಬುದರ ಬಗ್ಗೆ ಆಯುಕ್ತರ ಹಂತದಲ್ಲಿ ಚರ್ಚಿಸಿ, ಒಂದು ತೀರ್ಮಾನ ತೆಗೆದುಕೊಳ್ಳಲಾಯಿತು. ಈ ತೀರ್ಮಾನದ ಅನುಸಾರ ಖಾತಾ ವಹಿಗೆ ಸೇರ್ಪಡೆಗೊಳ್ಳುವ ಮಾಲೀಕರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ಥಿತಿಯನ್ನು ಅರಿತು ಸ್ವಪ್ರೇರಣೆಯಿಂದ ಮೇಲ್ವಾಟು ವೆಚ್ಚ ಪಾವತಿಸಲು ಮುಂದೆ ಬಂದಲ್ಲಿ, ಅವರಿಂದ ಅದನ್ನು ಸಂಗ್ರಹಿಸುವಂತೆಯೂ ಇಲ್ಲವಾದಲ್ಲಿ ಈ ಕುರಿತು ನಿಯಮಾವಳಿಗಳನ್ನು ರೂಪಿಸಿದ ನಂತರ ಹೊಸ ಸ್ವತ್ತುಗಳಿಗೆ ಖಾತೆ ಮಾಡಲು ದಿನಾಂಕ : 27-1-2009 ರಂದು ಹೊರಡಿಸಲಾದ ಆಯುಕ್ತರ ಸುತ್ತೋಲೆ ಸಂಖ್ಯೆ : ಉ ಆ (ಕಂ) ಪಿ.ಆರ್ : 23 : 07-08 ರಲ್ಲಿ ಅವಕಾಶ ಕಲ್ಪಿಸಲಾಯಿತು. ಈ ಸೂಚನೆಗಳ ಅನ್ವಯ ತುರ್ತಾಗಿ ಖಾತೆ ಬಯಸಿ ಬರುವ ಆಸ್ತಿಗಳ ಮಾಲೀಕರುಗಳು ಸ್ವಪ್ರೇರಣೆಯಿಂದ ಪೂರ್ಣ ಅಥವಾ ಭಾಗಶಃ ಮೇಲ್ವಾಟು ವೆಚ್ಚವನ್ನು ಪಾವತಿ ಮಾಡಿದವರಿಗೆ ಖಾತೆಯನ್ನು ನೋಂದಣಿ ಮಾಡುವ ಕ್ರಮ ಮುಂದುವರೆಸಲಾಯಿತು. ಅಲ್ಲದೆ ಕೆಲವು ಪ್ರದೇಶಗಳಲ್ಲಿ ನಿಯಮ ರೂಪಿತಗೊಂಡ ನಂತರ, ನಿಗಧಿಯಾಗುವ ದರದಂತೆ ಮೇಲ್ವಾಟು ವೆಚ್ಚ ಪಾವತಿಸಲು ಬದ್ಧರಾಗಿರುವುದಾಗಿ ಆಸ್ತಿ ಮಾಲೀಕರುಗಳಿಂದ ಮುಚ್ಚಳಿಕೆ ಪಡೆದು ಖಾತೆ ನೋಂದಾಯಿಸುವಂತೆ ಸೂಚಿಸಲಾಯಿತು.

ಈ ಮಧ್ಯೆ ಮೆ॥ Chartered Housing Pvt. Ltd., ಎಂಬುವರು ಮತ್ತೊಂದು WP No. 4217 of 2009 & 9932-41 of 2009 [LB-BMP] ರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ದಾಖಲಿಸಿ ಸ್ವಪ್ರೇರಣೆಯ ಹೆಸರಿನಲ್ಲಿ ಈಗಾಗಲೇ ತಮ್ಮಿಂದ

..............................3

ಸಂಗ್ರಹಿಸಲಾದ ಮೇಲ್ವಾಟು ವೆಚ್ಚವನ್ನು ಹಿಂದಿರುಗಿಸಲು ನಿರ್ದೇಶಿಸಬೇಕೆಂದು ಕೋರಿದ್ದು, ಅದಕ್ಕೆ ನ್ಯಾಯಾಲಯವು ಆದೇಶ ನೀಡಿ ನಿಯಮ ರೂಪಿತಗೊಳ್ಳದ ಹೊರತು ಸ್ವಪ್ರೇರಣೆಯಿಂದ ಮೇಲ್ವಾಟು ವೆಚ್ಚವನ್ನು ಸಂಗ್ರಹಿಸುವುದು ನಿಯಮ ಬಾಹಿರವೆಂದು ತಿಳಿಸಿ ಅರ್ಜಿದಾರರಿಗೆ ಅವರು ಪಾವತಿಸಿರುವ ಹಣವನ್ನು ಹಿಂದಕ್ಕೆ ನೀಡಬೇಕೆಂದು ಆದೇಶ ನೀಡಿತು. ಇದಾದ ನಂತರ ಮೇಲ್ವಾಟು ವೆಚ್ಚದ ಸಂಗ್ರಹಣೆಯನ್ನು ಸಂಪೂರ್ಣವಾಗಿ ನಿಲ್ಲಿಸಿ ಮುಚ್ಚಳಿಕೆ ಪಡೆದು ಖಾತೆ ನೋಂದಾಯಿಸುವ ಕ್ರಮವನ್ನು ಮುಂದುವರೆಸಿಕೊಂಡು ಬರಲಾಗುತ್ತಿದೆ. .

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಮೇಲ್ವಾಟು ವೆಚ್ಚವನ್ನು ವಿಧಿಸಲು ಪ್ರತ್ಯೇಕ ನಿಯಮಾವಳಿಗಳನ್ನು ರಚಿಸುವುದು ಅಗತ್ಯವೆಂದು ಕಂಡು ಬಂದ ಹಿನ್ನಲೆಯಲ್ಲಿ, ಮಾನ್ಯ ಆಡಳಿತಗಾರರಿಂದ ಅನುಮೋದನೆ ಪಡೆದು ಸುಧಾರಣಾ ವೆಚ್ಚವನ್ನು ವಿಧಿಸುವ ಕುರಿತು ಕರಡು ನಿಯಮಗಳನ್ನು ರೂಪಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಇದನ್ನು ಪರಿಶೀಲಿಸಿದ ಸರ್ಕಾರವು ದಿನಾಂಕ : 3-2-2010 ರ ಅಧಿಸೂಚನೆ ಸಂಖ್ಯೆ: ನಅಇ 522 ಎಂಎನ್‌ಯು 2009 ಅನ್ನು ಹೊರಡಿಸಿ ಕರ್ನಾಟಕ ಪೌರ ನಿಗಮಗಳ (ಸುಧಾರಣಾ ವೆಚ್ಚಗಳು ವಸೂಲಿ) ನಿಯಮಗಳು 2009 ನ್ನು ಜಾರಿಗೊಳಿಸಿ ಆದೇಶ ನೀಡಿರುತ್ತದೆ.

ಸದರಿ ನಿಯಮಗಳು ಜಾರಿಗೊಳ್ಳುವ ಮುನ್ನ ಪರಿಶೀಲಿಸಿದಾಗ ನಿಯಮ 4 ರಲ್ಲಿ ವಿವಿಧ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಮಾಡಿರುವ ವೆಚ್ಚಗಳು ಮಾತ್ರ ಸುಧಾರಣಾ ವೆಚ್ಚಗಳೆಂದು ಘೋಷಿಸಲು ಅವಕಾಶ ಕಲ್ಪಿಸಿರುವುದನ್ನು ಗಮನಿಸಲಾಯಿತು. ಆದರೆ, ಪಾಲಿಕೆಗೆ ಹೊಸದಾಗಿ ಸೇರ್ಪಡೆಗೊಳ್ಳುವ ಆಸ್ತಿಗಳಿಗೆ ಅವಶ್ಯವಿರುವ ಮೂಲಭೂತ ಸೌಲಭ್ಯಗಳನ್ನು ಹಂತ ಹಂತದಲ್ಲಿ ಒದಗಿಸಬೇಕಾಗಿರುವುದರಿಂದ, ಈ ಮೇಲಿನ ನಿಯಮವು ಸೂಕ್ತವಾಗುವುದಿಲ್ಲವೆಂದು ಮನಗಂಡು ಸದರಿ ನಿಯಮದಲ್ಲಿ ಈಗಾಗಲೇ ಮಾಡಲಾದ ವೆಚ್ಚಗಳು ಹಾಗೂ ಮುಂದೆ ಮಾಡಬಹುದಾದ ವೆಚ್ಚಗಳನ್ನು ಗಮನದಲ್ಲಿಟ್ಟುಕೊಂಡು ಎಂಬ ಪದಗಳನ್ನು ನಿಯಮದಲ್ಲಿ ಅಳವಡಿಸುವಂತೆ ಸರ್ಕಾರವನ್ನು ಕೋರಲಾಯಿತು. ಇದನ್ನೂ ಪರಿಗಣಿಸಿದ ಸರ್ಕಾರವು ದಿನಾಂಕ : 30-3-2010 ರ ಅಧಿಸೂಚನೆ ಸಂಖ್ಯೆ : ನಅಇ 522 ಎಂಎನ್‌ಯು 2009 ರಲ್ಲಿ ಈ ಮೇಲೆ ತಿಳಿಸಿದ ತಿದ್ದುಪಡಿ ನಿಯಮಗಳನ್ನು ಅನುಮೋದಿಸಿ ಪ್ರಕಟಿಸಲಾಯಿತು.

ಭೂಪರಿವರ್ತನೆಗೊಂಡು ಹೊಸದಾಗಿ ಬಿಬಿಎಂಪಿ ಖಾತೆ ಬಯಸಿ ಬರುವ ಆಸ್ತಿಗಳು ಕೃಷಿಭೂಮಿಯ ಸ್ವರೂಪದಲ್ಲಿಯೂ ಇರುತ್ತದೆ. ಇವುಗಳಲ್ಲಿ ಬಡಾವಣೆ ಸ್ವರೂಪ ಅಭಿವೃದ್ಧಿ ಇರುವುದಿಲ್ಲ. ಅಲ್ಲದೆ, ನಿಯಮಾನುಸಾರ ಪೌರ ಸೌಲಭ್ಯಗಳನ್ನು ಒದಗಿಸಲು ಬಿಡಬೇಕಾದ ಸ್ಥಳಗಳನ್ನು ಪಾಲಿಕೆಗೆ ವಹಿಸಿಕೊಡುವುದಿಲ್ಲ. ಇಂತಹ ಸ್ವತ್ತುಗಳಿಗೆ ಏಕ ನಿವೇಶನವೆಂದು ಪರಿಗಣಿಸಿ ನಿಯಮಾನುಸಾರ ಮುಂದೆ ಅನುಸರಿಸಬೇಕಾದ ಕ್ರಮಗಳನ್ನು ಕಾಯ್ದಿರಿಸಿ ಖಾತೆ ನೀಡುವಂತೆ ಸರ್ಕಾರದ ಪತ್ರದ ಸಂಖ್ಯೆ : ನಅಇ 39 ಬೆಂಯೊಪ್ರಾ 2002 ದಿನಾಂಕ : 16-7-2004 ರಲ್ಲಿ ತಿಳಿಸಲಾಗಿದೆ. ಇಂತಹ ಸ್ವತ್ತುಗಳ ಅನುಕೂಲಕ್ಕಾಗಿ ಪಾಲಿಕೆಯಿಂದ ಒದಗಿಸಬೇಕಾದ ಪೌರ ಸೌಲಭ್ಯಗಳು ಹಾಗೂ ಕಲಂ 58 ರಲ್ಲಿ ನಿರ್ದಿಷ್ಟಪಡಿಸಿದ ಆಬ್ಲಿಗೇಟರಿ ಕರ್ತವ್ಯಗಳನ್ನು ಹೊರತುಪಡಿಸಿ ನಾಗರೀಕರ ನಿರೀಕ್ಷೆಗೆ ಅನುಗುಣವಾಗಿ ಉತ್ತಮ ಮಟ್ಟದ ಮೂಲ ಸೌಕರ್ಯಗಳನ್ನು ಒದಗಿಸಲು ಪಾಲಿಕೆಯಿಂದ ಮಾಡಿರುವ ಹಾಗೂ ಮಾಡಬಹುದಾದ ವೆಚ್ಚಗಳನ್ನು ಗಮನದಲ್ಲಿರಿಸಿಕೊಂಡು ಈಗ ಹೊಸದಾಗಿ ರೂಪಿತಗೊಂಡಿರುವ ನಿಯಮಗಳ ಅನುಸಾರವಾಗಿ ಸುಧಾರಣಾ ವೆಚ್ಚವನ್ನು ವಿಧಿಸಲು ತೀರ್ಮಾನ ಕೈಗೊಳ್ಳಬೇಕಾಗಿದೆ.

..............................4

ಕರ್ನಾಟಕ ಪೌರ ನಿಗಮಗಳ (ಸುಧಾರಣಾ ವೆಚ್ಚಗಳು ವಸೂಲಿ) ನಿಯಮಗಳು, 2009 ನಿಯಮ 4 ರ ಅನ್ವಯ ಆಯುಕ್ತರು, ವಿವಿಧ ಮೂಲಭೂತ ಸೌಲಭ್ಯಗಳನ್ನು ಒದಗಿಸಿದ್ದಕ್ಕಾಗಿ ಅಥವಾ ಒದಗಿಸುವುದಕ್ಕಾಗಿ ಮಾಡಿದ ಹಾಗೂ ಮಾಡಬಹುದಾದ ವೆಚ್ಚಗಳನ್ನು ಪೌರ ನಿಗಮಗಳ ಕಾಯ್ದೆ 1976, ರ 466 ನೇ ಪ್ರಕರಣದ ಅಡಿಯಲ್ಲಿ ಸುಧಾರಣಾ ವೆಚ್ಚಗಳೆಂದು ಘೋಷಿಸಬಹುದು ಮತ್ತು ಈ ಸುಧಾರಣಾ ವೆಚ್ಚಗಳನ್ನು, ಅಸೆಸ್‌ಮೆಂಟ್ ರಿಜಿಸ್ಟರ್‌ನಲ್ಲಿ ಕರ ನಿರ್ಧರಿಸದ ಅಥವಾ ಹೊಸದಾಗಿ ಸೇರ್ಪಡೆಯಾದ, ಅಭಿವೃದ್ಧಿಯಾಗದ, ಭಾಗಶಃ ಅಭಿವೃದ್ಧಿಯಾದ ಅಥವಾ ಏಕ ಘಟಕ ಸ್ವತ್ತು ಅಥವಾ ಸ್ವತ್ತುಗಳ ಸಮೂಹ ಅಥವಾ ಒಂದು ಸ್ಥಳ ಅಥವಾ ಬಡಾವಣೆಗಳಲ್ಲಿ, ಈ ಸೌಲಭ್ಯಗಳಿಂದ ಪ್ರಯೋಜನ ಪಡೆದ ಅಥವಾ ಪ್ರಯೋಜನ ಪಡೆಯಬಹುದಾದ, ಮಾಲೀಕ ಅಥವಾ ಅಧಿಭೋಗದಾರರ ಮೇಲೆ ವಿಧಿಸಬಹುದು ಮತ್ತು ಸಂಗ್ರಹಿಸಬಹುದಾಗಿದೆ.

ನಿಯಮ 5 ರಲ್ಲಿ ಹಾಗೆ ಮಾಡಿದ ಸುಧಾರಣಾ ವೆಚ್ಚಗಳನ್ನು ಮೇಲೆ 3 ನೇ ನಿಯಮದಲ್ಲಿ ನಮೂದಿಸಿರುವ ಮಾಲೀಕ ಅಥವಾ ಅಧಿಭೋಗದಾರರಿಂದ ಖಾತಾ ನೋಂದಾವಣೆ ಸಮಯದಲ್ಲಿ ಪೂರ್ಣವಾಗಿಯಾಗಲೀ ಅಥವಾ ಕಂತುಗಳಲ್ಲಾಗಲೀ ಅಥವಾ ಆಯುಕ್ತರು ಸೂಕ್ತವೆಂದು ಭಾವಿಸಬಹುದಾದಂಥ ವಿಧಾನದಲ್ಲಿ ಮತ್ತು ಯಾವುದೇ ಸಮಯದಲ್ಲಿ ಸಂಗ್ರಹಿಸಬಹುದಾಗಿದೆ.

ಈ ನಿಯಮಗಳ ಅನ್ವಯ ಕ್ರಮ ಕೈಗೊಳ್ಳಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರೆವಿನ್ಯೂ ಬಡಾವಣೆಗಳಲ್ಲಿರುವ ಸ್ವತ್ತುಗಳಿಗೆ ಯಾವ ದರದಲ್ಲಿ ಸುಧಾರಣಾ ವೆಚ್ಚವನ್ನು ವಿಧಿಸಬಹುದು ಎಂಬುದರ ಬಗ್ಗೆ ಪರಿಶೀಲಿಸಿ ಅಗತ್ಯ ಶಿಫಾರಸ್ಸು ನೀಡಲು ಪ್ರಧಾನ ಅಭಿಯಂತರರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿತ್ತು. ನಂತರ ದಿನಾಂಕ : 29-9-2010 ರಂದು ನೆಡೆದ ಸಭೆಯ ನಡವಳಿಗಳಲ್ಲಿ ಈ ಕೆಳಗೆ ನಮೂದಿಸಿರುವ ವಿವಿಧ ಅಳತೆಯ ಸ್ವತ್ತುಗಳಿಗೆ ವಿವಿಧ ರೀತಿಯ ದರಗಳನ್ನು ವಿಧಿಸಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ.

| ಕ್ರಮ ಸಂಖ್ಯೆ | ನಿವೇಶನದ ವಿಸ್ತೀರ್ಣ | ವಿಧಿಸಲು ಉದ್ದೇಶಿಸಲಾಗಿರುವ ಸುಧಾರಣಾ ವೆಚ್ಚ |
|---|---|---|
| 1 | 1200 ಚದರಡಿಗಳ ವರೆಗಿನ ವಿಸ್ತೀರ್ಣವುಳ್ಳ ಸ್ವತ್ತುಗಳಿಗೆ (111.48 ಚ.ಮೀ) | ಒಂದು ಚ.ಮೀ.ಗೆ. ರೂ. 200/- ರಂತೆ |
| 2 | 1200 ಚದರಡಿಗಿಂತ (111.48 ಚ.ಮೀ) ಮೇಲ್ಪಟ್ಟು 2400 ಚದರಡಿಗಳ (222.96 ಚ.ಮೀ) ವರೆಗಿನ ವಿಸ್ತೀರ್ಣವುಳ್ಳ | ಒಂದು ಚ.ಮೀ.ಗೆ. ರೂ. 250/- ರಂತೆ |
| 3 | 2400 (222.96 ಚ.ಮೀ) ಚದರಡಿಗಿಂತ ಮೇಲ್ಪಟ್ಟು 6000 (557.41 ಚ.ಮೀ) ಚದರಡಿಗಳ ವರೆಗಿನ ವಿಸ್ತೀರ್ಣವುಳ್ಳ ಸ್ವತ್ತುಗಳಿಗೆ | ಒಂದು ಚ.ಮೀ.ಗೆ. ರೂ. 350/- ರಂತೆ |
| 4 | 6000 (557.41 ಚ.ಮೀ) ಚದರಡಿಗಿಂತ ಮೇಲ್ಪಟ್ಟಿರುವ ವಿಸ್ತೀರ್ಣವುಳ್ಳ ಸ್ವತ್ತುಗಳಿಗೆ | ಒಂದು ಚ.ಮೀ.ಗೆ. ರೂ. 460/- ರಂತೆ |

ಈ ಶಿಫಾರಸ್ಸುಗಳನ್ನು ಪರಾಮರ್ಶಿಸಲು ಹಾಗೂ ಸುಧಾರಣಾ ವೆಚ್ಚಗಳ ದರವನ್ನು ನಿಗಧಿಪಡಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ

..............................5

ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11-10-2010 ರ ಟಿಪ್ಪಣಿ ಹಾಗೂ ಮಾನ್ಯ ಆಯುಕ್ತರ ದಿನಾಂಕ:11-10-2010 ರ ಟಿಪ್ಪಣಿಯನ್ನು ಈ ಕೆಳಕಂಡಂತೆ ದರಗಳನ್ನು ನಿಗಧಿಪಡಿಸುವ ಮಾರ್ಪಡಿನೊಂದಿಗೆ ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:15-10-2010 ರ ನಿರ್ಣಯ.

| ಕ್ರಮ ಸಂಖ್ಯೆ | ನಿವೇಶನದ ವಿಸ್ತೀರ್ಣ | ವಿಧಿಸಲು ಉದ್ದೇಶಿಸಲಾಗಿರುವ ಸುಧಾರಣಾ ವೆಚ್ಚ |
|---|---|---|
| 1 | 1200 ಚದರಡಿಗಳ ವರೆಗಿನ ವಿಸ್ತೀರ್ಣವುಳ್ಳ ಸ್ವತ್ತುಗಳಿಗೆ (111.48 ಚ.ಮೀ) | ಒಂದು ಚ.ಮೀ.ಗೆ. ರೂ. 150/- ರಂತೆ |
| 2 | 1200 ಚದರಡಿಗಿಂತ (111.48 ಚ.ಮೀ) ಮೇಲ್ಪಟ್ಟು 2400 ಚದರಡಿಗಳ (222.96 ಚ.ಮೀ) ವರೆಗಿನ ವಿಸ್ತೀರ್ಣವುಳ್ಳ | ಒಂದು ಚ.ಮೀ.ಗೆ. ರೂ. 200/- ರಂತೆ |
| 3 | 2400 (222.96 ಚ.ಮೀ) ಚದರಡಿಗಿಂತ ಮೇಲ್ಪಟ್ಟು 6000 (557.41 ಚ.ಮೀ) ಚದರಡಿಗಳ ವರೆಗಿನ ವಿಸ್ತೀರ್ಣವುಳ್ಳ ಸ್ವತ್ತುಗಳಿಗೆ | ಒಂದು ಚ.ಮೀ.ಗೆ. ರೂ. 300/- ರಂತೆ |
| 4 | 6000 (557.41 ಚ.ಮೀ) ಚದರಡಿಗಿಂತ ಮೇಲ್ಪಟ್ಟಿರುವ ವಿಸ್ತೀರ್ಣವುಳ್ಳ ಸ್ವತ್ತುಗಳಿಗೆ | ಒಂದು ಚ.ಮೀ.ಗೆ. ರೂ. 400/- ರಂತೆ |

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:15-10-2010 ರ ನಿರ್ಣಯವನ್ನು ಒಪ್ಪುತ್ತಾ, ದಿನಾಂಕ:11-06-2006 ರ ಸುಗ್ರೀವಾಜ್ಞೆ ಹಾಗೂ ದಿನಾಂಕ:06-05-2007 ರ ತಿದ್ದುಪಡಿ ಅನುಸಾರ ಕರ್ನಾಟಕ ಭೂ ಕಂದಾಯ ಕಾಯಿದೆಗೆ ತಿದ್ದುಪಡಿ ತಂದು ಭೂ ಪರಿವರ್ತನೆಗೊಳ್ಳದೆ ಇರುವ ಹಾಗೂ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಬಡಾವಣೆಗೆ ಅನುಮೋದನೆ ಪಡೆಯದೇ ಇರುವ ಸ್ವತ್ತುಗಳ ಖಾತೆ ನೊಂದಾವಣೆಯನ್ನು ನಿಷೇಧಿಸಲಾಗಿದೆ.

ಬೆಂಗಳೂರು ಮಹಾನಗರ ಪಾಲಿಕೆಯ ಹಿಂದಿನ 100 ವಾರ್ಡ್‌ಗಳಲ್ಲಿ 1995 ರಿಂದ 2007 ರವರೆಗೆ ರೆವೆನ್ಯೂ ಪ್ರದೇಶಗಳ ಸ್ವತ್ತುಗಳಿಗೆ ಸರ್ಕಾರದ ಆದೇಶ ಪಡೆದು, ಚದರ ಗಜ ಒಂದಕ್ಕೆ ರೂ.100-00 ಗಳಂತೆ ಮೇಲ್ಪಾಡು ವೆಚ್ಚ ಸಂಗ್ರಹಿಸಿ ಶೇಕಡ 85 ರಷ್ಟು ಸ್ವತ್ತುಗಳಿಗೆ ಖಾತೆ ನೀಡಲಾಗಿದೆ. ಇನ್ನುಳಿದ ಶೇಕಡ 15 ರಷ್ಟು ಸ್ವತ್ತುಗಳು ಇನ್ನೂ ಬಾಕಿ ಇದೆ. ಈ ಮಧ್ಯೆ ಜನವರಿ 2007 ರಲ್ಲಿ ಪಾಲಿಕೆಯ ಆಡಳಿತ ವ್ಯಾಪ್ತಿಗೆ ಬೆಂಗಳೂರು ನಗರದ ಸುತ್ತಲೂ ಇದ್ದಂತಹ 7 ಸಿ.ಎಂ.ಸಿ., 1 ಟಿ.ಎಂ.ಸಿ ಮತ್ತು 110 ಹಳ್ಳಿಗಳನ್ನು ಸೇರಿಸಿ ಬೆಂಗಳೂರು ನಗರದ ವ್ಯಾಪ್ತಿಯನ್ನು ಹಿಂದೆ ಇದ್ದ 225 ಚದರ ಕಿಲೋ ಮೀಟರ್ ನಿಂದ ಸುಮಾರು 800 ಚದರ ಕಿಲೋ ಮೀಟರ್ ವರೆಗೆ ವಿಸ್ತರಿಸಲಾಗಿದೆ. ಈ ರೀತಿ ಹೊಸದಾಗಿ ಸೇರಿಸಲ್ಪಟ್ಟ ಬಹುತೇಕ ರೆವೆನ್ಯೂ ಸ್ವತ್ತುಗಳಿದ್ದು, ಕೇವಲ ಕೆಲವು ಪ್ರಕರಣಗಳಲ್ಲಿ ಭೂ ಪರಿವರ್ತನೆ ಪಡೆದು ಸಕ್ಷಮ ಪ್ರಾಧಿಕಾರದಿಂದ ಬಡಾವಣೆಗೆ ಅನುಮೋದನೆ ಪಡೆಯದಿರುವುದು ಕೂಡ ಕಂಡು ಬಂದಿದೆ. ಈ ಎಲ್ಲಾ ರೆವೆನ್ಯೂ ಪ್ರದೇಶಗಳಲ್ಲು ಸಾರ್ವಜನಿಕರ ಹಿತದೃಷ್ಟಿಯಿಂದ ಪಾಲಿಕೆಯ ಅಗತ್ಯ ನಾಗರೀಕ ಮೂಲಭೂತ ಸೌಲಭ್ಯಗಳನ್ನು ಒದಗಿಸುತ್ತಿದ್ದು, ಇದಕ್ಕಾಗಿ ಗಣನೀಯ ಪ್ರಮಾಣದಲ್ಲಿ ಹಣವನ್ನು ವಿನಿಯೋಗಿಸಲಾಗುತ್ತಿದೆ.

..............................6

ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲು ಅಕ್ರಮ/ಸಕ್ರಮ ಯೋಜನೆಯನ್ನು ಸರ್ಕಾರವು ಜಾರಿಗೆ ತರಲು ನಿರ್ಧರಿಸಿದ್ದು, ಸದರಿ ಯೋಜನೆಯು ಪ್ರಸ್ತುತ ಜಾರಿಯಾಗಿರುವುದಿಲ್ಲ. ಈ ಮಧ್ಯೆ ದಿನಾಂಕ:29-09-2009 ರಂದು ಕರ್ನಾಟಕ ಭೂ ಕಂದಾಯ ಕಾಯಿದೆಗೆ ಮತ್ತೊಂದು ತಿದ್ದುಪಡಿ ತಂದು (ಕರ್ನಾಟಕ ಕಾಯಿದೆ ಸಂಖ್ಯೆ:26/2009) ಈ ರೀತಿ ಭೂ ಪರಿವರ್ತನೆಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಅನುಮೋದನೆ ಪಡೆಯದೇ ಬೇರೆ ಉದ್ದೇಶಗಳಿಗಾಗಿ ಅಭಿವೃದ್ಧಿಪಡಿಸಿದಂತಹ ಸ್ವತ್ತುಗಳಿಗೆ ಭೂ ಪರಿವರ್ತನೆಗೆ ಸಾರ್ವಜನಿಕರು ಅರ್ಜಿ ಸಲ್ಲಿಸಲು ಒಂದು ವರ್ಷದವರೆಗೆ ಅಂದರೆ ದಿನಾಂಕ:23-09-2010 ರವರೆಗೆ ಕಾಲಾವಕಾಶ ನೀಡಲಾಗಿತ್ತೆಂದು ತಿಳಿದು ಬಂದಿದೆ. ಆದರೆ ಈ ತಿದ್ದುಪಡಿ ಸಾರ್ವಜನಿಕರ ಗಮನಕ್ಕೆ ಬರದೇ ಇದ್ದುದರಿಂದ ಸಾರ್ವಜನಿಕರು ಈ ತಿದ್ದುಪಡಿಯ ಉಪಯೋಗ ಪಡೆದುಕೊಳ್ಳಲಾಗಲಿಲ್ಲ. ಹೀಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಡಳಿತ ವ್ಯಾಪ್ತಿಯಲ್ಲಿ ಪ್ರಸ್ತುತ ಸುಮಾರು 4 ರಿಂದ 5 ಲಕ್ಷ ಸ್ವತ್ತುಗಳ ಖಾತೆ ನೊಂದಾವಣೆ ಆಗದೇ ಬಾಕಿ ಉಳಿದಿರುವುದಾಗಿ ತಿಳಿದು ಬಂದಿದೆ. ಬಹುತೇಕ ಈ ಸ್ವತ್ತುಗಳ ಮಾಲೀಕರುಗಳು ಆರ್ಥಿಕವಾಗಿ ಹಿಂದುಳಿದವರಾಗಿದ್ದು, ಖಾತೆ ಆಗದೇ, ಕಟ್ಟಡ ನಕ್ಷೆ ಪಡೆಯದೇ ಬ್ಯಾಂಕ್‌ಗಳಿಂದ ಸಾಲ ಪಡೆದು ಮನೆಗಳನ್ನು ನಿರ್ಮಿಸಲೂ ಸಹ ತೊಂದರೆ ಆಗಿರುತ್ತದೆ.

ಮೇಲ್ಕಂಡ ಕಾರಣಗಳಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಡಳಿತ ವ್ಯಾಪ್ತಿಯಲ್ಲಿ ಇರತಕ್ಕಂತಹ ಹಾಗೂ ಇದುವರೆಗೂ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಭೂ ಪರಿವರ್ತನೆ ಆಗದೇ, ಅಭಿವೃದ್ಧಿಪಡಿಸಿರತಕ್ಕಂತಹ ಸ್ವತ್ತುಗಳಿಗೆ (ಖಾಲಿ ನಿವೇಶನ ಹಾಗೂ ಕಟ್ಟಡಗಳು) ಕೆ.ಟಿ.ಸಿ.ಪಿ. ಕಾಯಿದೆ ಪ್ರಕರಣ 14(ಎ) ಅನ್ವಯ ಮಾಸ್ಟರ್ ಪ್ಲಾನ್‌ಗೆ ಅನುಗುಣವಾಗಿರುವ ಸ್ವತ್ತುಗಳಿಗೆ ಸರ್ಕಾರ ನಿಗಧಿಪಡಿಸಲ್ಪಟ್ಟ ದರದಲ್ಲಿ ಭೂ ಪರಿವರ್ತನಾ ಶುಲ್ಕವನ್ನು, ಆಯುಕ್ತರು ಸುಧಾರಣಾ ವೆಚ್ಚ ಸಂಗ್ರಹಿಸುವ ವೇಳೆ ಸಂಗ್ರಹಿಸಿ, ಸದರಿ ಭೂ ಪರಿವರ್ತನಾ ವೆಚ್ಚವನ್ನು ಸರ್ಕಾರಕ್ಕೆ ಜಮಾ ಮಾಡುವುದು ಸಾರ್ವಜನಿಕರ ಹಿತದೃಷ್ಟಿಯಿಂದ ಅನುಕೂಲವಾಗಿರುತ್ತದೆ. ಅನಂತರ ಮಹಾನಗರ ಪಾಲಿಕೆಯು ಎಲ್ಲಾ ಸ್ವತ್ತುಗಳಿಗೂ ಖಡ್ಡಾಯವಾಗಿ ಖಾತೆ ನೊಂದಾವಣೆ ಮಾಡಿ ಆಸ್ತಿ ತೆರಿಗೆ ಸಂಗ್ರಹಿಸಲು ಅನುಕೂಲವಾಗುತ್ತದೆ.

ಈ ಮೇಲ್ಕಂಡಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಡಳಿತ ವ್ಯಾಪ್ತಿಯಲ್ಲಿ ಜಿಲ್ಲಾಧಿಕಾರಿಗಳ ಪರವಾಗಿ, ಸರ್ಕಾರ ನಿಗಧಿಪಡಿಸಲ್ಪಟ್ಟ ದರದಲ್ಲಿ ಭೂ ಪರಿವರ್ತನಾ ಶುಲ್ಕವನ್ನು ಆಯುಕ್ತರು ಸಂಗ್ರಹಿಸಿ, ಸರ್ಕಾರಕ್ಕೆ ಜಮಾ ಮಾಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಅನುಮೋದನೆ ನೀಡುತ್ತಿದ್ದು, ಕರ್ನಾಟಕ ಭೂ ಕಂದಾಯ ಕಾಯಿದೆಗೆ ಸೂಕ್ತ ತಿದ್ದುಪಡಿ ತರುವಂತೆ ಸರ್ಕಾರವನ್ನು ಕೋರಲು ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಿದೆ.

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>**ನಿರ್ಣಯ:**</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:15-11-2010 ರ ನಿರ್ಣಯವನ್ನು ಒಪ್ಪುತ್ತಾ, ದಿನಾಂಕ:11-06-2006 ರ ಸುಗ್ರೀವಾಜ್ಞೆ ಹಾಗೂ ದಿನಾಂಕ:06-05-2007 ರ ತಿದ್ದುಪಡಿ ಅನುಸಾರ ಕರ್ನಾಟಕ ಭೂ

.............................7

ಕಂದಾಯ ಕಾಯಿದೆಗೆ ತಿದ್ದುಪಡಿ ತಂದು ಭೂ ಪರಿವರ್ತನೆಗೊಳ್ಳದೆ ಇರುವ ಹಾಗೂ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಬಡಾವಣೆಗೆ ಅನುಮೋದನೆ ಪಡೆಯದೇ ಇರುವ ಸ್ವತ್ತುಗಳ ಖಾತೆ ನೊಂದಾವಣೆಯನ್ನು ನಿಷೇಧಿಸಲಾಗಿದೆ.

ಬೆಂಗಳೂರು ಮಹಾನಗರ ಪಾಲಿಕೆಯ ಹಿಂದಿನ 100 ವಾರ್ಡ್‌ಗಳಲ್ಲಿ 1995 ರಿಂದ 2007 ರವರೆಗೆ ರೆವಿನ್ಯೂ ಪ್ರದೇಶಗಳ ಸ್ವತ್ತುಗಳಿಗೆ ಸರ್ಕಾರದ ಆದೇಶ ಪಡೆದು, ಚದರ ಗಜ ಒಂದಕ್ಕೆ ರೂ.100-00 ಗಳಂತೆ ಮೇಲ್ಪಾಟು ವೆಚ್ಚ ಸಂಗ್ರಹಿಸಿ ಶೇಕಡ 85 ರಷ್ಟು ಸ್ವತ್ತುಗಳಿಗೆ ಖಾತೆ ನೀಡಲಾಗಿದೆ. ಇನ್ನುಳಿದ ಶೇಕಡ 15 ರಷ್ಟು ಸ್ವತ್ತುಗಳು ಇನ್ನೂ ಬಾಕಿ ಇದೆ. ಈ ಮಧ್ಯೆ ಜನವರಿ 2007 ರಲ್ಲಿ ಪಾಲಿಕೆಯ ಆಡಳಿತ ವ್ಯಾಪ್ತಿಗೆ ಬೆಂಗಳೂರು ನಗರದ ಸುತ್ತಲೂ ಇದ್ದಂತಹ 7 ಸಿ.ಎಂ.ಸಿ., 1 ಟಿ.ಎಂ.ಸಿ ಮತ್ತು 110 ಹಳ್ಳಿಗಳನ್ನು ಸೇರಿಸಿ ಬೆಂಗಳೂರು ನಗರದ ವ್ಯಾಪ್ತಿಯನ್ನು ಹಿಂದೆ ಇದ್ದ 225 ಚದರ ಕಿಲೋ ಮೀಟರ್ ನಿಂದ ಸುಮಾರು 800 ಚದರ ಕಿಲೋ ಮೀಟರ್ ವರೆಗೆ ವಿಸ್ತರಿಸಲಾಗಿದೆ. ಈ ರೀತಿ ಹೊಸದಾಗಿ ಸೇರಿಸಲ್ಪಟ್ಟ ಪ್ರದೇಶಗಳಲ್ಲಿ ಬಹುತೇಕ ರೆವಿನ್ಯೂ ಸ್ವತ್ತುಗಳಿದ್ದು, ಕೇವಲ ಕೆಲವು ಪ್ರಕರಣಗಳಲ್ಲಿ ಭೂ ಪರಿವರ್ತನೆ ಪಡೆದು ಸಕ್ಷಮ ಪ್ರಾಧಿಕಾರದಿಂದ ಬಡಾವಣೆಗೆ ಅನುಮೋದನೆ ಪಡೆಯದಿರುವುದು ಕೂಡ ಕಂಡು ಬಂದಿದೆ. ಈ ಎಲ್ಲಾ ರೆವಿನ್ಯೂ ಪ್ರದೇಶಗಳಲ್ಲೂ ಸಾರ್ವಜನಿಕರ ಹಿತದೃಷ್ಟಿಯಿಂದ ಪಾಲಿಕೆಯ ಅಗತ್ಯ ನಾಗರೀಕ ಮೂಲಭೂತ ಸೌಲಭ್ಯಗಳನ್ನು ಒದಗಿಸುತ್ತಿದ್ದು, ಇದಕ್ಕಾಗಿ ಗಣನೀಯ ಪ್ರಮಾಣದಲ್ಲಿ ಹಣವನ್ನು ವಿನಿಯೋಗಿಸಲಾಗುತ್ತಿದೆ.

ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲು ಅಕ್ರಮ/ಸಕ್ರಮ ಯೋಜನೆಯನ್ನು ಸರ್ಕಾರವು ಜಾರಿಗೆ ತರಲು ನಿರ್ಧರಿಸಿದ್ದು, ಸದರಿ ಯೋಜನೆಯು ಪ್ರಸ್ತುತ ಜಾರಿಯಾಗಿರುವುದಿಲ್ಲ. ಈ ಮಧ್ಯೆ ದಿನಾಂಕ:29-09-2009 ರಂದು ಕರ್ನಾಟಕ ಭೂ ಕಂದಾಯ ಕಾಯಿದೆಗೆ ಮತ್ತೊಂದು ತಿದ್ದುಪಡಿ ತಂದು (ಕರ್ನಾಟಕ ಕಾಯಿದೆ ಸಂಖ್ಯೆ:26/2009) ಈ ರೀತಿ ಭೂ ಪರಿವರ್ತನೆಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಅನುಮೋದನೆ ಪಡೆಯದೇ ಬೇರೆ ಉದ್ದೇಶಗಳಿಗಾಗಿ ಅಭಿವೃದ್ಧಿಪಡಿಸಿದಂತಹ ಸ್ವತ್ತುಗಳಿಗೆ ಭೂ ಪರಿವರ್ತನೆಗೆ ಸಾರ್ವಜನಿಕರು ಅರ್ಜಿ ಸಲ್ಲಿಸಲು ಒಂದು ವರ್ಷದವರೆಗೆ ಅಂದರೆ ದಿನಾಂಕ:23-09-2010 ರವರೆಗೆ ಕಾಲಾವಕಾಶ ನೀಡಲಾಗಿತ್ತೆಂದು ತಿಳಿದು ಬಂದಿದೆ. ಆದರೆ, ಈ ತಿದ್ದುಪಡಿ ಸಾರ್ವಜನಿಕರ ಗಮನಕ್ಕೆ ಬರದೇ ಇದ್ದುದರಿಂದ ಸಾರ್ವಜನಿಕರು ಈ ತಿದ್ದುಪಡಿಯ ಉಪಯೋಗ ಪಡೆದುಕೊಳ್ಳಲಾಗಲಿಲ್ಲ. ಹೀಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಡಳಿತ ವ್ಯಾಪ್ತಿಯಲ್ಲಿ ಪ್ರಸ್ತುತ ಸುಮಾರು 4 ರಿಂದ 5 ಲಕ್ಷ ಸ್ವತ್ತುಗಳ ಖಾತೆ ನೊಂದಾವಣೆ ಆಗದೇ ಬಾಕಿ ಉಳಿದಿರುವುದಾಗಿ ತಿಳಿದು ಬಂದಿದೆ.

..............................8

ಬಹುತೇಕ ಈ ಸ್ವತ್ತುಗಳ ಮಾಲೀಕರುಗಳು ಆರ್ಥಿಕವಾಗಿ ಹಿಂದುಳಿದವರಾಗಿದ್ದು, ಖಾತೆ ಆಗದೇ, ಕಟ್ಟಡ ನಕ್ಷೆ ಪಡೆಯದೇ ಬ್ಯಾಂಕ್‌ಗಳಿಂದ ಸಾಲ ಪಡೆದು ಮನೆಗಳನ್ನು ನಿರ್ಮಿಸಲೂ ಸಹ ತೊಂದರೆ ಆಗಿರುತ್ತದೆ.

ಮೇಲ್ಕಂಡ ಕಾರಣಗಳಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಡಳಿತ ವ್ಯಾಪ್ತಿಯಲ್ಲಿ ಇರತಕ್ಕಂತಹ ಹಾಗೂ ಇದುವರೆಗೂ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಭೂ ಪರಿವರ್ತನೆ ಆಗದೇ, ಅಭಿವೃದ್ಧಿಪಡಿಸಿರತಕ್ಕಂತಹ ಸ್ವತ್ತುಗಳಿಗೆ (ಖಾಲಿ ನಿವೇಶನ ಹಾಗೂ ಕಟ್ಟಡಗಳು) ಕೆ.ಟಿ.ಟಿ.ಪಿ. ಕಾಯಿದೆ ಪ್ರಕರಣ 14(ಎ) ಅನ್ವಯ ಮಾಸ್ಟರ್ ಪ್ಲಾನ್‌ಗೆ ಅನುಗುಣವಾಗಿರುವ ಸ್ವತ್ತುಗಳಿಗೆ ಸರ್ಕಾರ ನಿಗಧಿಪಡಿಸಲ್ಪಟ್ಟ ದರದಲ್ಲಿ ಭೂ ಪರಿವರ್ತನಾ ಶುಲ್ಕವನ್ನು, ಆಯುಕ್ತರು ಸುಧಾರಣಾ ವೆಚ್ಚ ಸಂಗ್ರಹಿಸುವ ವೇಳೆ ಸಂಗ್ರಹಿಸಿ, ಸದರಿ ಭೂ ಪರಿವರ್ತನಾ ವೆಚ್ಚವನ್ನು ಸರ್ಕಾರಕ್ಕೆ ಜಮಾ ಮಾಡುವುದು ಸಾರ್ವಜನಿಕರ ಹಿತದೃಷ್ಟಿಯಿಂದ ಅನುಕೂಲವಾಗಿರುತ್ತದೆ. ಅನಂತರ ಮಹಾನಗರ ಪಾಲಿಕೆಯು ಎಲ್ಲಾ ಸ್ವತ್ತುಗಳಿಗೂ ಕಡ್ಡಾಯವಾಗಿ ಖಾತೆ ನೊಂದಾವಣೆ ಮಾಡಿ ಆಸ್ತಿ ತೆರಿಗೆ ಸಂಗ್ರಹಿಸಲು ಅನುಕೂಲವಾಗುತ್ತದೆ.

ಈ ಮೇಲ್ಕಂಡಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಡಳಿತ ವ್ಯಾಪ್ತಿಯಲ್ಲಿ ಜಿಲ್ಲಾಧಿಕಾರಿಗಳ ಪರವಾಗಿ, ಸರ್ಕಾರ ನಿಗಧಿಪಡಿಸಲ್ಪಟ್ಟ ದರದಲ್ಲಿ ಭೂ ಪರಿವರ್ತನಾ ಶುಲ್ಕವನ್ನು ಆಯುಕ್ತರು ಸಂಗ್ರಹಿಸಿ, ಸರ್ಕಾರಕ್ಕೆ ಜಮಾ ಮಾಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಅನುಮೋದನೆ ನೀಡುತ್ತಿದ್ದು, ಕರ್ನಾಟಕ ಭೂ ಕಂದಾಯ ಕಾಯಿದೆಗೆ ಸೂಕ್ತ ತಿದ್ದುಪಡಿ ತರುವಂತೆ ಸರ್ಕಾರವನ್ನು ಕೋರಲು ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಿದೆ".

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:29–12–2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 9 (156)/2010–11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ. ಇರ್ಷಾದ್ ಆಲಿಖಾನ್ ರವರಿಗೆ ಸರ್ಕಾರದ ಆದೇಶ ಸಂಖ್ಯೆ:ವನಇ/24/ಎಂಎಎನ್‌ಟಿ/84, ದಿನಾಂಕ:22–12–1995 ರ ಆದೇಶದಂತೆ ಕುಂಬಾರಗುಂಡಿ ಸ್ಲಾಟರ್‌ಹೌಸ್ ಎದುರು ಭಾಗದಲ್ಲಿರುವ ಮಹಾನಗರ ಪಾಲಿಕೆಯ 16.5x30 ಅಡಿಗಳ ಅಳತೆ (495 ಚ.ಅ) ವಾಣಿಜ್ಯ ನಿವೇಶನವನ್ನು ರೂ.5,59,179/– ಗಳಿಗೆ ಕ್ರಯಕ್ಕೆ ನೀಡಲು ಸರ್ಕಾರವು ಅನುಮತಿ ನೀಡಿದ್ದು, ಸದರಿ ಮೊತ್ತವನ್ನು ರಶೀದಿ ಸಂಖ್ಯೆ:011282, ದಿನಾಂಕ:15–03–1997 ರಂದು ನಗರ ಪಾಲಿಕೆಗೆ ಪಾವತಿಸಲಾಗಿರುತ್ತದೆ.

ಶ್ರೀ. ಇರ್ಷಾದ್ ಆಲಿಖಾನ್ ರವರಿಗೆ ಕ್ರಯಕ್ಕೆ ನೀಡುವ ಸಂಬಂಧ ಸ್ಥಾಯಿ ಸಮಿತಿಗಳು ಹಾಗೂ ನಗರ ಪಾಲಿಕೆಯ ಸಭೆಯ ಮುಂದೆ ನಿರ್ಣಯಕ್ಕೆ ಮಂಡಿಸಿ ಅನುಮೋದನೆ ಪಡೆಯಲಾಗಿದ್ದು, ಪಾಲಿಕೆ ಸಭೆಯ ವಿಷಯದ ಸಂಖ್ಯೆ:26(152) ರ ದಿನಾಂಕ:13–11–1991 ರ ಪಾಲಿಕೆ ನಿರ್ಣಯದ ವಿರುದ್ಧ ಸ್ಥಳೀಯ ವರ್ತಕರಾದ ಶ್ರೀ. ಅಮೀರ್ ಖಾನ್ ಆಲಿಯಾಸ್ ಬಾಬು ಹಾಗೂ ಬಾಬುಲಾಲ್ ಎಂಬುವವರು ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ಹೂಡಿದ್ದು, ಇದರಿಂದಾಗಿ ಅರ್ಜಿದಾರರು ಕ್ರಯಕ್ಕೆ ಪಡೆಯಲು ಉದ್ದೇಶಿಸಿರುವ ಸ್ವತ್ತನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಇದರಿಂದ ನೊಂದ ಅರ್ಜಿದಾರರು W.P.No.9781/09 ರಂತೆ ನ್ಯಾಯಾಲಯದ ದಾವೆ ಹೂಡಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:05–10–2009 ರಂದು ಈ ಕೆಳಕಂಡಂತೆ ಆದೇಶಿಸಿದೆ.

> ***"In the result the writ petition is allowed in part. The decision rejecting the request of the petitioner to allot an alternate site leading to the endorsement impugned in quashed. The respondent is directed to consider the petitioner's representation Annexure-F and take action, to convey the plot of land measuring not less than 495 sq.ft. at the very same sale price of Rs.5,59,179/-, in any event within three months from the date of receipt of a copy of this order".***

ನ್ಯಾಯಾಲಯದ ನಿರ್ದೇಶನದಂತೆ ಪರ್ಯಾಯ ನಿವೇಶನ ನೀಡಲು ಸಹಾಯಕ ಕಂದಾಯ ಅಧಿಕಾರಿ (ವಸಂತನಗರ) ಉಪ ವಿಭಾಗ ರವರಿಂದ ವರದಿ ಪಡೆಯಲಾಗಿದ್ದು, ವಾರ್ಡ್ ಸಂಖ್ಯೆ:79, ನಾರಾಯಣಶೆಟ್ಟಿ ರಸ್ತೆ (ಡಿಸ್ಪೆನ್ಸರಿ ರಸ್ತೆ), ಬೆಂಗಳೂರು ಇದು ನಗರ ಪಾಲಿಕೆ ಜಾಗವಾಗಿದ್ದು, 17.8"x(30+26)/2=495 ಚದರ ಅಡಿಗಳ ಜಾಗವನ್ನು ಗುರ್ತಿಸಿದ್ದು, ಪರ್ಯಾಯ ನಿವೇಶನವನ್ನಾಗಿ ಕ್ರಯಕ್ಕೆ ನೀಡಬಹುದಾಗಿದೆಯೆಂದು ವರದಿ ನೀಡಿರುತ್ತಾರೆ.

ಆದ್ದರಿಂದ, ನ್ಯಾಯಾಲಯದ ನಿರ್ದೇಶನದಂತೆ, ಶ್ರೀ. ಇರ್ಷಾದ್ ಆಲಿಖಾನ್ ರವರಿಗೆ ಬದಲಿ ನಿವೇಶನವನ್ನು ನೀಡಬಹುದಾಗಿದ್ದು, ಬದಲಿ ನಿವೇಶನ ನೀಡುವ ಬಗ್ಗೆ ಮಾನ್ಯ ಆಡಳಿತಗಾರರ ಮುಂದೆ ಅನುಮೋದನೆಗೆ ಮಂಡಿಸಲಾಗಿರುತ್ತದೆ. ದಿನಾಂಕ:30–01–2010 ರಂದು ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಮಾನ್ಯ ಆಡಳಿತಗಾರರ ಮುಂದೆ ಅನುಮೋದನೆಗೆ ಮಂಡಿಸಲಾಗಿರುತ್ತದೆ. ವಿಷಯದ ಸಂಖ್ಯೆ:594/2009–10, ದಿನಾಂಕ:08–02–2010 ರಂದು ಸದರಿ ಟಿಪ್ಪಣಿಯನ್ನು ಮಾನ್ಯ ಆಡಳಿತಗಾರರು

.............................2

ಅನುಮೋದಿಸಿರುವುದರಿಂದ, ಮಾನ್ಯ ಆಡಳಿತಗಾರರ ನಡವಳಿ ಪ್ರತಿ ಮತ್ತು ನ್ಯಾಯಾಲಯದ ಆದೇಶದ ಪ್ರತಿಗಳನ್ನು ಲಗತ್ತಿಸಿ, ಸರ್ಕಾರದ ಅನುಮೋದನೆ ಕೋರಲಾಗಿ, ಸರ್ಕಾರವು ಆದೇಶ ಸಂಖ್ಯೆ:ನಅಇ ಎಂಎನ್‌ಜಿ 2010, ದಿನಾಂಕ:20-11-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿಷಯದ ಸಂಖ್ಯೆ:594/2009-10, ದಿನಾಂಕ:08-02-2010 ರಲ್ಲಿ ತೆಗೆದುಕೊಂಡಿರುವ ನಿರ್ಣಯಕ್ಕೆ ಅನುಮೋದನೆ ನೀಡಿದ್ದು, ಸದರಿ ಸರ್ಕಾರದ ಆದೇಶವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ದಾಖಲಾತಿಗಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:09-12-2010 ರ ಟಿಪ್ಪಣಿ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:09-12-2010 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>**ನಿರ್ಣಯ:**</u> "ಆಯುಕ್ತರವರ ದಿನಾಂಕ:09-12-2010ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)

ಮಹಾಪೌರರು

# ದಿನಾಂಕ:29–12–2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 11 (157)/2010–11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಘನತ್ಯಾಜ್ಯ ವಸ್ತು ನಿರ್ವಹಣೆ ನಿಯಮ 2000 ರಂತೆ ನಗರ ಸ್ಥಳೀಯ ಸಂಸ್ಥೆಗಳು ಘನತ್ಯಾಜ್ಯ ವಸ್ತುವನ್ನು ಮೂಲದಿಂದಲೇ ಅಂದರೆ ಮನೆ ಮನೆಗಳಿಂದ ಮತ್ತು ಇತರೆ ತ್ಯಾಜ್ಯ ಉತ್ಪಾದಕರಿಂದ ಸಂಗ್ರಹಿಸಿ, ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸದರಿ ನಿಯಮಾನುಸಾರ ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ 2008–09 ನೇ ಸಾಲಿನಲ್ಲಿ ಈ ಕೆಳಕಂಡಂತೆ ವಾರ್ಷಿಕ ಸುಮಾರು 200 ಕೋಟಿಯಷ್ಟು ಮೊತ್ತವನ್ನು ವೆಚ್ಚ ಮಾಡಿದ್ದು, ಈ ಮೊತ್ತವು ಪ್ರತಿ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುತ್ತದೆ.

2008–09 ನೇ ಸಾಲಿನಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣೆಗೆ ತಗುಲಿರುವ ವೆಚ್ಚ

| ಕ್ರ.ಸಂ. | ವಿವರಣೆ | **2008–09 ನೇ ಸಾಲಿನಲ್ಲಿ ವೆಚ್ಚವಾಗಿರುವ ಮೊತ್ತ (ರೂ. ಕೋಟಿಗಳಲ್ಲಿ)** |
|---|---|---|
| 1 | ಆಡಳಿತ ಮತ್ತು ಪೌರಕಾರ್ಮಿಕರ ಸಂಬಳ | 88.15 |
| 2 | ಗುತ್ತಿಗೆದಾರರಿಗೆ ಪಾವತಿಸಿರುವ ಮೊತ್ತ | 111.55 |
| 3 | ಟ್ರಾನ್ಸ್‌ಫರ್ ಸ್ಟೇಷನ್ ನಿರ್ಮಾಣ | 4.39 |
| 4 | ವೈಜ್ಞಾನಿಕ ತ್ಯಾಜ್ಯ ವಿಲೇವಾರಿ | 5.84 |
| | **ಒಟ್ಟು** | **209.92** |

ಘನತ್ಯಾಜ್ಯ ವಸ್ತು ನಿರ್ವಹಣೆ ನಿಯಮ, 2000 ರಂತೆ ಸದರಿ ವೆಚ್ಚವನ್ನು ಭರಿಸಲು ತ್ಯಾಜ್ಯ ಉತ್ಪಾದಕರಿಂದ ಘನತ್ಯಾಜ್ಯ ವಸ್ತು ನಿರ್ವಹಣೆ ಉಪಕರವನ್ನು ವಸೂಲಿ ಮಾಡಲು ಅವಕಾಶವಿರುತ್ತದೆ. ಈ ಬಗ್ಗೆ ಈಗಾಗಲೇ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆಯ ಸೆಕ್ಷನ್ 103 (ಬಿ) ಅನ್ವಯ ಈ ಕೆಳಕಂಡ ಉಪಕರ ದರಗಳನ್ನು ನಿಗಧಿಪಡಿಸಲಾಗಿರುತ್ತದೆ.

**I.** **ವಾಸದ ಕಟ್ಟಡಗಳಿಗೆ**

| | |
|---|---|
| • 1000 ಚ.ಅ ಗಿಂತ ಕಡಿಮೆ ಇರುವ ಆವರಣಕ್ಕೆ | ರೂ.10 |
| • 1000 ಚ.ಅ ಗಿಂತ ಹೆಚ್ಚು ಅಥವಾ 3000 ಚ.ಅ ಗಿಂತ ಕಡಿಮೆ ಇರುವ ಆವರಣಕ್ಕೆ | ರೂ.30 |
| • 3000 ಚ.ಅ ಗಿಂತ ಮೇಲ್ಪಟ್ಟ ಆವರಣಕ್ಕೆ | ರೂ.50 |

..............................2

**II. ವಾಣಿಜ್ಯ ಕಟ್ಟಡಗಳಿಗೆ**

| | |
|---|---|
| • 1000 ಚ.ಅ ಗಿಂತ ಕಡಿಮೆ ಇರುವ ಆವರಣಕ್ಕೆ | ರೂ.50 |
| • 1000 ಚ.ಅ ಗಿಂತ ಹೆಚ್ಚು ಅಥವಾ 5000 ಚ.ಅ ಗಿಂತ ಕಡಿಮೆ ಇರುವ ಆವರಣಕ್ಕೆ | ರೂ.100 |
| • 5000 ಚ.ಅ ಗಿಂತ ಮೇಲ್ಪಟ್ಟ ಆವರಣಕ್ಕೆ | ರೂ.200 |

**III. ಕೈಗಾರಿಕ ಕಟ್ಟಡಗಳಿಗೆ**

| | |
|---|---|
| • 1000 ಚ.ಅ ಗಿಂತ ಕಡಿಮೆ ಇರುವ ಆವರಣಕ್ಕೆ | ರೂ.100 |
| • 1000 ಚ.ಅ ಗಿಂತ ಹೆಚ್ಚು ಅಥವಾ 5000 ಚ.ಅ ಗಿಂತ ಕಡಿಮೆ ಇರುವ ಆವರಣಕ್ಕೆ | ರೂ.200 |
| • 5000 ಚ.ಅ ಗಿಂತ ಮೇಲ್ಪಟ್ಟ ಆವರಣಕ್ಕೆ | ರೂ.300 |

**IV. ಹೋಟೆಲ್‌ಗಳು, ಕಲ್ಯಾಣ ಮಂಟಪಗಳು, ನರ್ಸಿಂಗ್ ಹೋಂ**

| | |
|---|---|
| • 1000 ಚ.ಅ ಗಿಂತ ಕಡಿಮೆ ಇರುವ ಆವರಣಕ್ಕೆ | ರೂ.300 |
| • 1000 ಚ.ಅ ಗಿಂತ ಹೆಚ್ಚು ಅಥವಾ 5000 ಚ.ಅ ಗಿಂತ ಕಡಿಮೆ ಇರುವ ಆವರಣಕ್ಕೆ | ರೂ.500 |
| • 5000 ಚ.ಅ ಗಿಂತ ಮೇಲ್ಪಟ್ಟ ಆವರಣಕ್ಕೆ | ರೂ.600 |

ಸದರಿ ಮೊತ್ತದ ಅನ್ವಯ ಉಪಕರ ನಿಗಧಿಪಡಿಸಿದಲ್ಲಿ, ಘನತ್ಯಾಜ್ಯ ವಸ್ತು ನಿರ್ವಹಣೆಗೆ ವೆಚ್ಚ ಮಾಡುವ ಮೊತ್ತದಲ್ಲಿ ಸ್ವಲ್ಪ ಪ್ರಮಾಣವನ್ನು ಕಡಿಮೆಗೊಳಿಸಬಹುದು. 2008-09 ನೇ ಸಾಲಿನಿಂದ ವಾಣಿಜ್ಯ ಕಟ್ಟಡಗಳಿಗೆ ಉದ್ದಿಮೆ ಪರವಾನಗಿ ನೀಡುವಾಗ ನಿಗಧಿಪಡಿಸಿರುವ ಘನತ್ಯಾಜ್ಯ ವಸ್ತು ನಿರ್ವಹಣೆ ಉಪಕರವನ್ನು ವಸೂಲಿ ಮಾಡುತ್ತಿದ್ದು, ಇತರೆ ಕಟ್ಟಡಗಳಿಂದ ವಸೂಲಾತಿ ಮಾಡುತ್ತಿರುವುದಿಲ್ಲ.

ಘನತ್ಯಾಜ್ಯ ವಸ್ತು ನಿರ್ವಹಣೆಯ ಉಪಕರವನ್ನು ಈಗಾಗಲೇ ಕರ್ನಾಟಕದ ಎಲ್ಲಾ ನಗರ ಪಾಲಿಕೆ ಮತ್ತು ನಗರ ಸಭೆಗಳಲ್ಲಿ 2005 ರಿಂದಲೇ ವಸೂಲಾತಿ ಮಾಡುತ್ತಿದ್ದು, ಜವಹರ್‌ಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಯೋಜನೆ (ಜೆ.ಎನ್.ಎನ್.ಯು.ಆರ್.ಎಂ) ಅಡಿಯಲ್ಲಿ ಕೂಡ ಘನತ್ಯಾಜ್ಯ ವಸ್ತು ನಿರ್ವಹಣೆ ಉಪಕರವನ್ನು ವಸೂಲಿ ಮಾಡಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪಾಲಿಕೆಯು ಘನತ್ಯಾಜ್ಯ ವಸ್ತು ನಿರ್ವಹಣೆಯ ಉಪಕರವನ್ನು ಪ್ರತಿ ತಿಂಗಳು ಎಲ್ಲಾ ಕಟ್ಟಡಗಳಿಂದ ವಸೂಲಿ ಮಾಡಲು ಕಷ್ಟವಾಗುವುದರಿಂದ, ಸದರಿ ಉಪಕರವನ್ನು ಇದನ್ನು ಆಸ್ತಿ ತೆರಿಗೆಯ ಮೂಲಕ ವಸೂಲಾತಿ ಮಾಡಲು ಕ್ರಮಕೈಗೊಳ್ಳುವ ಬಗ್ಗೆ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:06-08-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:13-12-2010 ರ ನಿರ್ಣಯ.

............................3

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:13–12–2010 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:13–12–2010 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು

## ದಿನಾಂಕ:29–12–2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

### ವಿಷಯದ ಸಂಖ್ಯೆ: 12 (145)/2010–11

ಟಿಪ್ಪಣಿಯಲ್ಲಿ ವಿವರಿಸಿರುವಂತೆ,

1) ಮಾನ್ಯ ಮುಖ್ಯಮಂತ್ರಿಗಳವರ ದಿನಾಂಕ:25–08–2008 ರ ನಡವಳಿಯ ರೀತ್ಯಾ ಒಂದು ಸಮಗ್ರ ಜಾಹೀರಾತು ನೀತಿಯನ್ನು ತಯಾರಿಸಲು ಸೂಚಿಸಿದ್ದು, ಈ ಬಗ್ಗೆ ಕೆಲವು ರಸ್ತೆಗಳನ್ನು **'A' 'B' 'C' 'D'** ವಲಯಗಳಲ್ಲಿ ಅದಲು ಬದಲು ಮಾಡಲಾಗಿದ್ದು, ವಿವರಗಳು ಕೆಳಕಂಡಂತ್ತಿದೆ.

**ಎ, ಬಿ, ಸಿ, ಡಿ ವಲಯಗಳಲ್ಲಿ ಅದಲು ಬದಲು ಮಾಡಿರುವ ಪಟ್ಟಿ**

**ಇತರೇ ವಲಯಗಳಲ್ಲಿ ಇರುವ ರಸ್ತೆಗಳನ್ನು 'ಎ' ವಲಯಕ್ಕೆ ಸೇರಿಸುವ ಪ್ರಸ್ತಾವನೆ**

| ಕ್ರ. ಸಂ. | ರಸ್ತೆ | ಹಾಲಿ ಇರುವ ವಲಯ | ಈಗ ಬದಲಾವಣೆ ಮಾಡಬೇಕಾಗಿರುವ ವಲಯ |
|---|---|---|---|
| 1 | ಸ್ಯಾಂಕೀ ರಸ್ತೆ–ಭಾಷ್ಯಂ ಸರ್ಕಲ್‌ನಿಂದ ಹೈ ಗ್ರೌಂಡ್ಸ್ ಪೊಲೀಸ್ ಸ್ಟೇಷನ್‌ವರೆಗೆ ಕಾವೇರಿ ಜಂಕ್ಷನ್, ಬಿ.ಡಿ.ಎ. ಜಂಕ್ಷನ್, ವಿಂಡ್ಸರ್ ಮ್ಯಾನರ್ ಜಂಕ್ಷನ್, ಬಸವೇಶ್ವರ ವೃತ್ತ ಮುಖಾಂತರ | 'ಸಿ' | 'ಎ' |
| 2 | ಪ್ಯಾಲೇಸ್ ಲೂಪ್ ರಸ್ತೆ–ಹೈಗ್ರೌಂಡ್ಸ್ ವರೆಗೆ | 'ಸಿ' | 'ಎ' |

**ಇತರೇ ವಲಯಗಳಲ್ಲಿ ಇರುವ ರಸ್ತೆಗಳನ್ನು 'ಬಿ' ವಲಯಕ್ಕೆ ಸೇರಿಸುವ ಪ್ರಸ್ತಾವನೆ**

| ಕ್ರ. ಸಂ. | ರಸ್ತೆ | ಹಾಲಿ ಇರುವ ವಲಯ | ಈಗ ಬದಲಾವಣೆ ಮಾಡಬೇಕಾಗಿರುವ ವಲಯ |
|---|---|---|---|
| 1 | ಕನ್ನಿಂಗ್‌ಹ್ಯಂ ರಸ್ತೆ–ಸ್ಯಾಂಕಿ ರಸ್ತೆಯಿಂದ ಕ್ವೀನ್ಸ್ ಸರ್ಕಲ್ ಜಂಕ್ಷನ್‌ವರೆಗೆ | 'ಸಿ' | 'ಬಿ' |
| 2 | ರಾಜಾಜಿನಗರ 60ನೇ ಕ್ರಾಸ್–ಕಾರ್ಡ್ ರಸ್ತೆ ಜಂಕ್ಷನ್‌ನಿಂದ ಭಾಷ್ಯಂ ಸರ್ಕಲ್ ವರೆಗೆ | 'ಸಿ' | 'ಬಿ' |
| 3 | ರಾಜಾಜಿನಗರ 59ನೇ ಕ್ರಾಸ್‌ರಸ್ತೆ–ಭಾಷ್ಯಂ ಸರ್ಕಲ್ ಮೂಲಕ ಓಕಳಿಪುರಂ ಮುಖ್ಯರಸ್ತೆಯಿಂದ ಫ್ಲಾಟ್‌ಫಾರಂ ಜಂಕ್ಷನ್‌ವರೆಗೆ | 'ಸಿ' | 'ಬಿ' |
| 4 | ವಿಠಲ್ ಮಲ್ಯ ರಸ್ತೆ–ಸೆಂಟ್ ಮಾರ್ಕ್ಸ್ ರಸ್ತೆಯಿಂದ ಟೀಫಾನೀಸ್ ಸರ್ಕಲ್‌ನಿಂದ ರಾಜಾರಾಂ ಮೋಹನ್ ರಾಯ್ ರಸ್ತೆ ಜಂಕ್ಷನ್‌ವರೆಗೆ | 'ಸಿ' | 'ಬಿ' |
| 5 | ಬಳ್ಳಾರಿ ರಸ್ತೆ–ಕಾವೇರಿ ವೃತ್ತದಿಂದ ಪಾಲಿಕೆ ಸರಹದ್ದು ವರೆಗೆ | 'ಡಿ' | 'ಬಿ' |
| 6 | ಪ್ಯಾಲೇಸ್ ರಸ್ತೆ–ಸಿಂಧೂ ಹೋಟೆಲ್‌ನಿಂದ ಅಂಡರ್ ಬ್ರಿಡ್ಜ್‌ವರೆಗೆ | 'ಡಿ' | 'ಬಿ' |
| 7 | ಜಯಮಹಲ್ ರಸ್ತೆ–ಮೇಖ್ರಿ ವೃತ್ತದಿಂದ ದಂಡು ರೈಲ್ವೆ ನಿಲ್ದಾಣದವರೆಗೆ | 'ಡಿ' | 'ಬಿ' |
| 8 | ಮಿಲ್ಲರ್ಸ್ ರಸ್ತೆ–ನೇತಾಜಿ ರಸ್ತೆಯಿಂದ ಡಾ॥ಎಂ.ವಿ. ಜಯರಾಮ್ ರಸ್ತೆ ಜಂಕ್ಷನ್‌ವರೆಗೆ | 'ಡಿ' | 'ಬಿ' |

...........................2

| | | | |
|---|---|---|---|
| 9 | ಸ್ಟೇಷನ್ ರಸ್ತೆ–ನೇತಾಜಿ ರಸ್ತೆ ದಂಡು ರೈಲ್ವೆ ನಿಲ್ದಾಣದಿಂದ ಟ್ಯಾನ್ರಿ ರಸ್ತೆ ಜಂಕ್ಷನ್‌ವರೆಗೆ | 'ಡಿ' | 'ಬಿ' |
| 10 | ರಿಚ್‌ಮಂಡ್ ರಸ್ತೆ–ವೆಲ್ಲಾರ್ ಜಂಕ್ಷನ್‌ನಿಂದ ಟ್ರಿನಿಟಿ ಸರ್ಕಲ್‌ವರೆಗೆ | 'ಡಿ' | 'ಬಿ' |
| 11 | ವಿಕ್ಟೋರಿಯಾ ರಸ್ತೆ–ಡಿಸೋಜ ಸರ್ಕಲ್‌ನಿಂದ ಏರ್‌ಪೋರ್ಟ್ ರಸ್ತೆವರೆಗೆ | 'ಡಿ' | 'ಬಿ' |
| 12 | ಕೇಂಬ್ರಿಡ್ಜ್ ರಸ್ತೆ–ಹಲಸೂರು ಸರ್ಕಲ್‌ನಿಂದ ಏರ್‌ಪೋರ್ಟ್ ಜಂಕ್ಷನ್‌ವರೆಗೆ | 'ಡಿ' | 'ಬಿ' |
| 13 | ಇಂಟರ್‌ಮಿಡಿಯಟ್ ರಿಂಗ್ ರಸ್ತೆ–ಕೋರಮಂಗಲ ದಿಂದ ಏರ್‌ಪೋರ್ಟ್ ರಸ್ತೆ ಜಂಕ್ಷನ್‌ವರೆಗೆ | 'ಡಿ' | 'ಬಿ' |
| 14 | 100 ಅಡಿರಸ್ತೆ–ಇನ್ನರ್ ರಿಂಗ್ ರಸ್ತೆ (17ನೇ ಮುಖ್ಯರಸ್ತೆ ಕೋರಮಂಗಲ) ಹೊಸೂರು ರಸ್ತೆ ಜಂಕ್ಷನ್‌ನಿಂದ ಕೇಂದ್ರಿಯ ಸಧನ್‌ನಿಂದ ಸರ್ಜಾಪುರ ರಸ್ತೆ ಜಂಕ್ಷನ್‌ನಿಂದ ಬಿ.ಡಿ.ಎ. ಕಾಂಪ್ಲೆಕ್ಸ್‌ನಿಂದ 80 ಅಡಿ ಪೆರಿಫೆರಿಯಲ್ ರಸ್ತೆ ಜಂಕ್ಷನ್‌ವರೆಗೆ | 'ಡಿ' | 'ಬಿ' |
| 15 | ಇನ್‌ಫ್ಯಾಂಟ್ರಿ ರಸ್ತೆ | -- | 'ಬಿ' |

2) ದಿನಾಂಕ:25–6–2010 ರಂದು ಪಾಲಿಕೆ ಸಭೆಯಲ್ಲಿ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಅಕ್ರಮ ಜಾಹೀರಾತು ಫಲಕಗಳು ಸಾಕಷ್ಟು ತಲೆ ಎತ್ತಿರುವುದರಿಂದ ಪಾಲಿಕೆಗೆ ಆದಾಯ ಸೋರಿಕೆಯಾಗುತ್ತಿರುವುದಾಗಿ ಚರ್ಚೆಯಾಗಿ ಪೂಜ್ಯ ಮಹಾಪೌರರು ಈ ಬಗ್ಗೆ ಒಂದು ಸಭೆ ಕರೆದು ಚರ್ಚಿಸಿ ಒಂದು ಸಮಗ್ರ ನೀತಿ ಮಂಡಿಸುವುದಾಗಿ ತಿಳಿಸಿದ್ದು, ಈ ಬಗ್ಗೆ ದಿನಾಂಕ: 23–10–2010 ರಂದು ಮಧ್ಯಾಹ್ನ ಪೂಜ್ಯ ಮಹಾಪೌರರು ಒಂದು ಸಭೆ ಕರೆದಿದ್ದು, ಸದರಿ ಸಭೆಯಲ್ಲಿ ಮಾನ್ಯ ಆಯುಕ್ತರು, ಮಾನ್ಯ ಉಪ ಮಹಾಪೌರರು, ಮಾನ್ಯ ಆಡಳಿತ ಪಕ್ಷದ ನಾಯಕರು, ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ನಾಯಕರು ಜಾತ್ಯಾತೀತ ಜನತಾದಳ ರವರು ಹಾಗೂ ಎರಡು ಜಾಹೀರಾತು ಸಂಘಗಳ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಪಾಲಿಕೆಯ ಪ್ರಧಾನ ಅಭಿಯಂತರರು, ಜಾಹೀರಾತು ವಿಭಾಗದ ಎಲ್ಲಾ ವಲಯಗಳ ಕಂದಾಯ ಅಧಿಕಾರಿಗಳು, ಸಹಾಯಕ ಕಂದಾಯ ಅಧಿಕಾರಿಗಳು ಹಾಜರಿದ್ದು, ಸಭೆಯಲ್ಲಿ ಪಾಲಿಕೆ ಆದಾಯ ಹೆಚ್ಚು ಮಾಡುವ ಬಗ್ಗೆ, ದಿನಾಂಕ:29–11–2008 ರಿಂದ ಹೊಸ ಜಾಹೀರಾತು ಫಲಕಗಳಿಗೆ ಅನುಮತಿ ನೀಡದೇ ಇರುವುದರಿಂದ ಅಕ್ರಮ ಜಾಹೀರಾತು ತಲೆ ಎತ್ತಿರುವುದರಿಂದಾಗಿ ಇವುಗಳನ್ನು ತೆರವುಗೊಳಿಸಲು ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಬೇಕೆಂದು ಅಥವಾ ಬೈಲಾ ನಿಯಮಗಳಿಗನುಸಾರ ಇರುವ ಫಲಕಗಳಲ್ಲಿ ಆಯಾ ಅಳತೆಯ ವಾರ್ಷಿಕ ಜಾಹೀರಾತು ಶುಲ್ಕಕ್ಕೆ ಕಡಿಮೆ ಇಲ್ಲದಂತೆ ದಂಡ ವಿಧಿಸಿ ಸಕ್ರಮ ಮಾಡುವ ಬಗ್ಗೆ, ಹಾಲಿ ಇರುವ ಜಾಹೀರಾತು ಶುಲ್ಕ ಹೆಚ್ಚಿಸುವ ಬಗ್ಗೆ ಪಾಲಿಕೆ ಸ್ವತ್ತುಗಳ ಮೇಲೆ ಟೆಂಡರ್ ಮೂಲಕ ಹೆಚ್ಚು ಜಾಹೀರಾತುಗಳಿಗೆ ಅವಕಾಶ ಮಾಡಿ ಆದಾಯ ಹೆಚ್ಚುವರಿ ಮಾಡುವಂತೆ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಗಿರುತ್ತದೆ.

3) ಶ್ರೀ. ಕೃಷ್ಣದೇವರಾಯ, ಜಾಹೀರಾತು ಸಂಘದ ಅಧ್ಯಕ್ಷರು, ಮನವಿ ಮಾಡುತ್ತಾ ಖಾಸಗಿ ಸ್ವತ್ತುಗಳ ಮೇಲೆ ಇರುವ ಜಾಹೀರಾತು ಫಲಕಗಳನ್ನು ನಿಯಮಾನುಸಾರ 2 ವರ್ಷಗಳ ಅವಧಿಗೆ ನವೀಕರಿಸಬೇಕೆಂದು, ಈ ಜಾಹೀರಾತು ಉದ್ದಿಮೆಯಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸುಮಾರು

20,000 ಕುಟುಂಬಗಳು ಅವಲಂಬಿತರಾಗಿರುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಈ ಹಿಂದೆ ದಿನಾಂಕ:25-8-2008 ರಂದು ನಡೆದ ಸಭೆಯಲ್ಲಿ ತೀರ್ಮಾನಿಸಿರುವಂತೆ, ಖಾಸಗಿ ಸ್ವತ್ತುಗಳ ಮೇಲಿನ ಜಾಹೀರಾತುಗಳನ್ನು ನವೀಕರಿಸಿ ಮುಂದುವರೆಸಲು ಆದೇಶಿಸಿರುವುದಾಗಿ, ಹಾಲಿ ಇರುವ ಜಾಹೀರಾತು ತೆರಿಗೆ ಈಗಾಗಲೇ ಹೆಚ್ಚಾಗಿರುವುದಾಗಿ ಕೆಲವು ಆಯ್ದ ರಸ್ತೆಗಳಲ್ಲಿ ಮಾತ್ರ ಜಾಹೀರಾತು ಶುಲ್ಕವನ್ನು ಸ್ವಲ್ಪ ಹೆಚ್ಚು ಮಾಡಬಹುದೆಂದು ಅಂತಹ ರಸ್ತೆಗಳ ವಿವರ ನೀಡುವುದಾಗಿ ತಿಳಿಸಿರುತ್ತಾರೆ.

4) ಮಾನ್ಯ ಜಾತ್ಯಾತೀತ ಜನತಾದಳ ನಾಯಕರಾದ ಶ್ರೀ.ಪದ್ಮನಾಭರೆಡ್ಡಿ ರವರು ಸಾರ್ವಜನಿಕ ಆಸ್ತಿ ಮತ್ತು ಸಾರ್ವಜನಿಕರ ಪ್ರಾಣ ರಕ್ಷಣೆ ಹಿನ್ನೆಲೆಯಲ್ಲಿ ಬಹುಕಟ್ಟಡಗಳ ಮೇಲಿನ ಜಾಹೀರಾತು ಫಲಕಗಳಿಗೆ ಅನುಮತಿ ನೀಡುವುದನ್ನು ನಿಷೇಧಿಸಬೇಕೆಂದು, ಒಂದೇ ಅಳತೆಯ ಸುಂದರವಾಗಿ ಕಾಣುವ ಜಾಹೀರಾತು ಫಲಕಗಳನ್ನು ಪಾಲಿಕೆಯ ಸ್ವತ್ತುಗಳ ಮೇಲೆ ನಿರ್ಮಿಸಿ ವಾರ್ಷಿಕವಾಗಿ ಹರಾಜು ಮಾಡಿದ್ದಲ್ಲಿ ಹೆಚ್ಚು ಆದಾಯ ಬರುತ್ತದೆಂದು ಕಾಲ ಕ್ರಮೇಣ ಖಾಸಗಿ ಸ್ವತ್ತುಗಳ ಮೇಲೆ ಜಾಹೀರಾತು ನಿಷೇಧಿಸಬೇಕೆಂದು ಸಲಹೆ ನೀಡಿರುತ್ತಾರೆ.

5) ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ.ನಾಗರಾಜು ರವರು ಈ ಬಗ್ಗೆ ಸಮ್ಮತಿಸುತ್ತಾ ಮುಂದುವರೆದು, ಪಾಲಿಕೆಯ ಸ್ವತ್ತುಗಳನ್ನು ಗುತ್ತಿಗೆ ಪಡೆದು ಷರತ್ತು ಉಲ್ಲಂಘನೆ ಮಾಡಿ ಕೆಲವು ಸಂಸ್ಥೆಗಳು ಸದರಿ ಗುತ್ತಿಗೆ ಪ್ರದೇಶವನ್ನು ಜಾಹೀರಾತು ಫಲಕ ಅಳವಡಿಸಲು ಮರು ಗುತ್ತಿಗೆ ನೀಡಿ, ಹೆಚ್ಚಿನ ನೆಲ ಬಾಡಿಗೆ ಪಡೆಯುತ್ತಿರುವುದಾಗಿ, ಅಂತಹ ಜಾಹೀರಾತು ಫಲಕಗಳ ನವೀಕರಣವನ್ನು ಮುಂದುವರೆಸಬಾರದೆಂದು ಹಾಗೂ ಗುತ್ತಿಗೆಯನ್ನು ರದ್ದುಪಡಿಸಬೇಕೆಂದು ಸಲಹೆ ನೀಡಿರುತ್ತಾರೆ. ಅಲ್ಲದೇ, ಅನಧಿಕೃತ ಜಾಹೀರಾತು ಫಲಕಗಳನ್ನು ನಿರ್ದಾಕ್ಷಿಣ್ಯವಾಗಿ ತೆಗೆದು ಹಾಕಲು ಸೂಚಿಸಿ 2010-11ನೇ ಸಾಲಿಗೆ ಖಾಸಗಿ ಸ್ವತ್ತುಗಳ ಮೇಲಿನ ಜಾಹೀರಾತು ಫಲಕಗಳನ್ನು ನವೀಕರಿಸುವಂತೆ, ಆದಾಯಗಳನ್ನು ದ್ವಿಗುಣಗೊಳಿಸುವಂತೆ ಸಲಹೆ ನೀಡಿರುತ್ತಾರೆ. ಉದಾಹರಣೆಗೆ ಅನಿಲ್ ಕುಂಬ್ಳೆ ಸರ್ಕಲ್ ನಿಂದ ಬೈಬಲ್ ಸೊಸೈಟಿ ಸ್ವತ್ತು, ಹೊಸೂರು ರಸ್ತೆಯ ಕ್ರಿಶ್ಚಿಯನ್ ಸಿಮಿಟ್ರಿ, ಬಿಬಿಎಂಪಿ ಸ್ವತ್ತುಗಳೆಂದು ಇವುಗಳ ಮೇಲೆ ನೀಡಲಾಗಿರುವ ಜಾಹೀರಾತು ಫಲಕಗಳ ನವೀಕರಣವನ್ನು ಮುಂದುವರೆಸಬಾರದೆಂದು, ಸಲಹೆ ನೀಡಿರುತ್ತಾರೆ.

6) ಶ್ರೀ.ಸದಾಶಿವ, ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪಾಲಿಕೆಯ ಆದಾಯ ಹೆಚ್ಚು ಮಾಡುವ ದೃಷ್ಟಿಯಿಂದ ದಿನಾಂಕ: 29-11-2008 ರಿಂದ ಹೊಸ ಜಾಹೀರಾತು ಫಲಕಗಳಿಗೆ ಅನುಮತಿ ತಡೆ ಹಿಡಿದಿರುವುದನ್ನು ಪುನರ್‌ಪರಿಶೀಲಿಸಿ, ಹೊಸ ಜಾಹೀರಾತುಗಳಿಗೆ ಅನುಮತಿ ನೀಡಬೇಕೆಂದು ಸೂಚಿಸಿರುತ್ತಾರೆ. ಹಾಲಿ ಇರುವ ಜಾಹೀರಾತು ಶುಲ್ಕವನ್ನು ಪುನರ್‌ಪರಿಶೀಲಿಸಿ ಹೆಚ್ಚು ಮಾಡುವ ಬಗ್ಗೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಿರುತ್ತಾರೆ.

7) ಪೂಜ್ಯ ಮಹಾಪೌರರು ಸಹ ಹೊಸದಾಗಿ ಜಾಹೀರಾತು ಫಲಕಗಳಿಗೆ ಅನುಮತಿ ನೀಡುವುದನ್ನು ಪಾಲಿಕೆಯ ಆದಾಯ ಹೆಚ್ಚಿಸುವ ಉದ್ದೇಶದಿಂದ ಪ್ರಾರಂಭಿಸಲು ಸೂಚಿಸಿರುತ್ತಾರೆ. ಹಾಗೂ ಖಾಸಗಿ ಸ್ವತ್ತುಗಳ ಮೇಲಿನ ಜಾಹೀರಾತು ಫಲಕಗಳನ್ನು 2010-11ನೇ ಸಾಲಿಗೆ ನವೀಕರಿಸಲು ಸೂಚಿಸಿರುತ್ತಾರೆ.

8) ಮಾನ್ಯ ಆಯುಕ್ತರು ಜಾಹೀರಾತು ನೀತಿಯನ್ನು ವಿಮರ್ಶಿಸಿ, ಒಂದು ಹೊಸ ಸಮಗ್ರ ಜಾಹೀರಾತು ನೀತಿಯನ್ನು ಅಳವಡಿಸಿಕೊಳ್ಳಲು ಪೂಜ್ಯ ಮಹಾಪೌರರು, ಮಾನ್ಯ ಉಪ ಮಹಾಪೌರರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅಧ್ಯಕ್ಷರು, ಆಡಳಿತ ಪಕ್ಷದ ನಾಯಕರು, ವಿರೋಧ ಪಕ್ಷದ ನಾಯಕರು, ಜನತಾದಳ ನಾಯಕರು ಹಾಗೂ ಎಲ್ಲಾ ಸದಸ್ಯರು ಸಹಕರಿಸಬೇಕೆಂದು ಮತ್ತು ಎಲ್ಲಾ

............................4

ಜಾಹೀರಾತು ಮಾಹಿತಿಯನ್ನು ಗಣಕೀಕೃತಗೊಳಿಸಲಾಗುವುದೆಂದು ಮತ್ತು ನವೀಕರಣವನ್ನು ಆನ್-ಲೈನ್ ಮೂಲಕವೇ ಮಾಡಲಾಗುವುದೆಂದು, ಜಾಹೀರಾತು ಶಾಖೆಯಿಂದ ನಿರೀಕ್ಷಿಸಲಾಗಿರುವ ಸುಮಾರು 100 ಕೋಟಿ ಆದಾಯದ ಗುರಿಯನ್ನು ಸಾಧಿಸಲು ಎಲ್ಲರೂ ಸಹಕರಿಸಬೇಕೆಂದು ಮನವಿ ಮಾಡಿದರು.

ಈಗಾಗಲೇ ದಿನಾಂಕ:15-10-2010 ರಂದು ಮಾನ್ಯ ಆಯುಕ್ತರವರ ಅಧ್ಯಕ್ಷತೆಯಲ್ಲಿ ಜಾಹೀರಾತು ವಿಭಾಗಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಸುದೀರ್ಘವಾಗಿ ಚರ್ಚೆ ನಡೆದು ನಡವಳಿಯನ್ನು ತಯಾರಿಸಿರುವುದಾಗಿ, ಸದರಿ ನಡವಳಿಯನ್ನು ಗಮನದಲ್ಲಿಟ್ಟುಕೊಂಡು ಹಾಗೂ ಈ ದಿನ ಸಭೆಯಲ್ಲಿ ನಡೆದ ಚರ್ಚೆಯನ್ನು ಗಮನದಲ್ಲಿಟ್ಟುಕೊಂಡು ಖಾಸಗಿ ಸ್ವತ್ತುಗಳ ಮೇಲಿನ ಜಾಹೀರಾತು ಫಲಕಗಳನ್ನು ನವೀಕರಿಸುವ ಬಗ್ಗೆ ಹಾಗೂ ಹಾಲಿ ಇರುವ ಜಾಹೀರಾತು ತೆರಿಗೆಯನ್ನು ಹೆಚ್ಚಿಸುವ ಪ್ರಸ್ತಾವನೆಯನ್ನು ದಿನಾಂಕ:25-10-2010 ರಂದೇ ಮಾನ್ಯ ಆಯುಕ್ತರವರ ಮುಖಾಂತರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗೆ ಮಂಡಿಸುವಂತೆ ಉಪ ಆಯುಕ್ತರು (ಜಾಹೀರಾತು) ರವರಿಗೆ ಸೂಚನೆ ನೀಡಿರುತ್ತಾರೆ. ಅದರಂತೆ ಈ ಕೆಳಕಂಡ ವಿಷಯಗಳನ್ನು ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

1) ಖಾಸಗಿ ಸ್ವತ್ತುಗಳ ಮೇಲಿನ ಜಾಹೀರಾತು ಫಲಕಗಳನ್ನು ಪರಿಷ್ಕೃತ ಜಾಹೀರಾತು ತೆರಿಗೆ ವಿಧಿಸಿ 2010-11 ನೇ ಸಾಲಿಗೆ ನವೀಕರಿಸುವುದು.

2) ದಿನಾಂಕ:30-09-2009ರ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಲಾದ ಹಾಗೂ ಅನುಮೋದಿಸಲ್ಪಟ್ಟಿರುವ ವಿಷಯದ ಸಂಖ್ಯೆ:324/2009-10ರ ನಡವಳಿಯಂತೆ ಹೆಚ್ಚಿಸಲಾಗಿರುವ ಹಾಗೂ ಹಾಲಿ ಚಾಲ್ತಿಯಲ್ಲಿರುವ ದರಗಳಲ್ಲಿ 'ಬಿ' ಜಾಹೀರಾತು ವಲಯದಲ್ಲಿ 5 ಪಟ್ಟು ಜಾಹೀರಾತು ಶುಲ್ಕವನ್ನು ಹೆಚ್ಚಿಸುವುದು ಹಾಗೂ ಇತರೇ ಜಾಹೀರಾತು ವಲಯಗಳಲ್ಲಿ ಜಾಹೀರಾತು ಶುಲ್ಕವನ್ನು 3 ಪಟ್ಟು ಹೆಚ್ಚಿಸುವುದು.

3) ಹಾಲಿ ಬೈಲಾಗಳಲ್ಲಿ ಇರುವ 'ಎ' 'ಬಿ' 'ಸಿ' 'ಡಿ' ವಲಯಗಳಲ್ಲಿ ಈ ಟಿಪ್ಪಣಿಯೊಂದಿಗೆ ಮಂಡಿಸಲಾಗಿರುವ ಪಟ್ಟಿಯಂತೆ 2 ರಸ್ತೆಗಳನ್ನು 'ಸಿ' ವಲಯದಿಂದ 'ಎ' ವಲಯಕ್ಕೆ ವರ್ಗಾಯಿಸಲು ಹಾಗೂ 15 ಪ್ರಮುಖ ರಸ್ತೆಗಳನ್ನು 'ಸಿ' ಮತ್ತು 'ಡಿ' ವಲಯದಿಂದ 'ಬಿ' ವಲಯಕ್ಕೆ ವರ್ಗಾಯಿಸುವುದು.

4) ಭೂಸ್ವಾಧೀನ, ರಸ್ತೆ ಅಗಲೀಕರಣ, ಕಟ್ಟಡದ ಮಾಲೀಕರಿಂದ ಆಕ್ಷೇಪಣೆಗಳಿಂದಾಗಿ ನೈಜ ಕಾರಣದಿಂದ ಒಂದು ಸ್ಥಳದಿಂದ ಮೊತ್ತೊಂದು ಸ್ಥಳಕ್ಕೆ ಖಾಸಗಿ ಸ್ವತ್ತುಗಳ ಮೇಲಿನ ಜಾಹೀರಾತು ಫಲಕಗಳನ್ನು ವರ್ಗಾಯಿಸಿಕೊಳ್ಳಲು ಅನುಮತಿ ನೀಡುವುದು.

5) ದಿನಾಂಕ:29-11-2008ರ ಸುತ್ತೋಲೆಯನ್ನು ಸೂಕ್ತವಾಗಿ ಮಾರ್ಪಡಿಸಿ, 'ಎ' ವಲಯ ಹೊರತುಪಡಿಸಿ ಉಳಿದ ವಲಯಗಳಲ್ಲಿ ಹೊಸದಾಗಿ ಖಾಸಗಿ ಸ್ವತ್ತುಗಳ ಮೇಲೆ ಜಾಹೀರಾತು ಫಲಕಗಳಿಗೆ ಪಾಲಿಕೆಯ ಆದಾಯ ದೃಷ್ಟಿಯಿಂದ ಅನುಮತಿ ನೀಡುವುದು.

6) ಬೈಲಾ ನಿಯಮ 3 ಎ (22) ಜಾಹೀರಾತು ಶುಲ್ಕವನ್ನು ನವೀಕರಣ ಮಾಡುವ ಪ್ರಾರಂಭದಲ್ಲಿ ಪೂರ್ಣ ಶುಲ್ಕವನ್ನು ಒಂದೇ ಬಾರಿಗೆ ಪಾವತಿಸಿಕೊಳ್ಳುವ ಬಗ್ಗೆ ತಿದ್ದುಪಡಿ ಮಾಡುವುದು.

7) ಎಲ್.ಇ.ಡಿ, ಟ್ರೈವಿಜನ್ ಹಾಗೂ ನಿಯಾನ್ ಬೋರ್ಡ್‌ಗಳಿಗೆ ಈಗ ಹಾಲಿ ಇರುವ ದರಗಳ ಮೇಲೆ 5 ಪಟ್ಟು ಹೆಚ್ಚು ತೆರಿಗೆ ವಿಧಿಸುವುದು.

8) ಜಾಹೀರಾತು ಬೈಲಾ 3ಎ(7) ನಿಯಮವನ್ನು ತಿದ್ದುಪಡಿ ಮಾಡಿ ಯಾವುದೇ ಅನಧಿಕೃತ ಜಾಹೀರಾತು ಫಲಕಗಳಿಗೆ ಮಾಹಿತಿ ಲಭ್ಯವಿದ್ದಲ್ಲಿ ಜಾಹೀರಾತುದಾರರಿಗೆ, ಇಲ್ಲವಾದಲ್ಲಿ ಕಟ್ಟಡ/ಸ್ವತ್ತಿನ ಮಾಲೀಕರಿಗೆ ಸದರಿ ಅಳತೆಯ ಜಾಹೀರಾತು ಫಲಕದ ವಾರ್ಷಿಕ ಶುಲ್ಕವನ್ನು ದಂಡದ ರೂಪದಲ್ಲಿ ವಿಧಿಸಿ ವಸೂಲಿ ಮಾಡುವುದು.

9) ಹಲವಾರು ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ಅಥವಾ ಘನ ಉಚ್ಚ ನ್ಯಾಯಾಲಯದಲ್ಲಿ ಸದರಿ ಫಲಕಗಳನ್ನು ತೆರವುಗೊಳಿಸದಂತೆ ಡೀಮ್ಡ್ ನವೀಕರಣವನ್ನು ಕೋರಿ ಅರ್ಜಿ ಸಲ್ಲಿಸಿ ತಡೆಯಾಜ್ಞೆಗಳನ್ನು ಪಡೆದಿದ್ದಾಗ್ಯೂ ಸಹ ವಾಣಿಜ್ಯ ಜಾಹೀರಾತು ಪ್ರದರ್ಶಿಸಿರುವ ಅವಧಿಗೆ ಪರಿಷ್ಕರಿಸಿದ ಜಾಹೀರಾತು ಶುಲ್ಕವನ್ನು ಸದರಿ ಜಾಹೀರಾತುದಾರರಿಂದ ವಸೂಲಿ ಮಾಡುವುದು.

10) ಬೈಲಾ ನಿಯಮ 3ಎ(13)ರಲ್ಲಿ ಮುಂದುವರೆಯುತ್ತಾ ಆದಾಗ್ಯೂ ಪಾಲಿಕೆಯ ಆದಾಯದ ದೃಷ್ಟಿಯಿಂದ ಮತ್ತು ಸಾರ್ವಜನಿಕರಿಂದ ಮಾಹಿತಿ ನೀಡುವ ದೃಷ್ಟಿಯಿಂದ ಪಾಲಿಕೆಯ ಸ್ವತ್ತುಗಳ ಮೇಲೆ ಅಂದರೇ ಸ್ಥಳ ಲಭ್ಯವಿರುವ ಕಡೆ ಪಾದಚಾರಿ ಮಾರ್ಗ, ಆಟದ ಮೈದಾನಗಳು, ಶಾಲಾ ಕಾಲೇಜು ಆವರಣ, ಪಾಲಿಕೆಯ ಅಧೀನದಲ್ಲಿರುವ ಸ್ಮಶಾನಗಳು, ಕೆರೆಕಟ್ಟೆಗಳ ಮೇಲೆ, ಇತ್ಯಾದಿಗಳಲ್ಲಿ ಸಾರ್ವಜನಿಕರಿಗೆ ತೊಂದರೆ ಆಗದಂತೆ ಏಕ ಕಂಬ (Unipole) ಜಾಹೀರಾತು ಫಲಕವನ್ನು ನಿರ್ಮಾಣ ಮಾಡಿ ಹರಾಜು ಮೂಲಕ ಜಾಹೀರಾತು ಪ್ರದರ್ಶನಕ್ಕೆ ಅವಕಾಶ ನೀಡಿ ಆದಾಯವನ್ನು ಕ್ರೋಢೀಕರಿಸಿಕೊಳ್ಳುವುದು.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಕ್ರಮ ಸಂಖ್ಯೆ:1 ರಿಂದ 10 ರವರೆಗಿನ ಅಂಶಗಳಿಗೆ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:26-10-2010 ರ ಟಿಪ್ಪಣಿ ಹಾಗೂ ಆಯುಕ್ತರ ದಿನಾಂಕ : 26-10-2010 ರ ಟಿಪ್ಪಣಿಯನ್ನು ಈ ಕೆಳಕಂಡ ಮಾರ್ಪಾಡಿನೊಂದಿಗೆ ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:15-11-2010 ರ ನಿರ್ಣಯ.

1. ಖಾಸಗಿ ಸ್ವತ್ತುಗಳ ಮೇಲಿನ ಜಾಹೀರಾತು ಫಲಕಗಳನ್ನು ಪರಿಷ್ಕೃತ ಜಾಹೀರಾತು ತೆರಿಗೆ ವಿಧಿಸಿ 2 ವರ್ಷಗಳ ಅವಧಿಗೆ ಅಂದರೆ 2010-11 ಮತ್ತು 2011-12ನೇ ಸಾಲಿಗೆ ನವೀಕರಿಸುವುದು. ಪರಿಷ್ಕೃತ ಜಾಹೀರಾತು ತೆರಿಗೆ ಪೂರ್ವಾನ್ವಯ ದಿನಾಂಕ:01-07-2010 ರಿಂದ ಜಾರಿಗೆ ಬರುವುದು.

2. 'ಬಿ' ಜಾಹೀರಾತು ವಲಯದಲ್ಲಿ ಶೇಕಡ 15% ರಷ್ಟು ಆರೋಗ್ಯ ಕರ ಸೇರಿ ಹಾಲಿ ಇರುವ ದರಗಳನ್ನು ಶೇಕಡ 50% ರಷ್ಟು ಹೆಚ್ಚು ಮಾಡುವುದು ಉಳಿದ ವಲಯಗಳಲ್ಲಿ 'ಸಿ' ಮತ್ತು 'ಡಿ' ವಲಯಗಳಲ್ಲಿ ಶೇಕಡ 15% ಆರೋಗ್ಯ ಕರ ಸೇರಿ ಹಾಲಿ ಇರುವ ದರಗಳನ್ನು ಶೇಕಡ 25% ರಷ್ಟು ಹೆಚ್ಚು ಮಾಡುವುದು.

..........................6

3. ಭೂಸ್ವಾಧೀನ, ರಸ್ತೆ ಅಗಲೀಕರಣ, ಕಟ್ಟಡದ ಮಾಲೀಕರಿಂದ ಆಕ್ಷೇಪಣೆಗಳಿಂದಾಗಿ ನೈಜ ಕಾರಣದಿಂದ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಖಾಸಗಿ ಸ್ವತ್ತುಗಳ ಮೇಲಿನ ಜಾಹೀರಾತು ಫಲಕಗಳನ್ನು ವರ್ಗಾಯಿಸಿಕೊಳ್ಳಲು ವರ್ಗಾವಣೆ ಶುಲ್ಕ ರೂ.5,000-00 ವಿಧಿಸಿ ಅನುಮತಿ ನೀಡುವುದು.

4. ದಿನಾಂಕ:29-11-2008ರ ಸುತ್ತೋಲೆಯನ್ನು ಸೂಕ್ತವಾಗಿ ಮಾರ್ಪಡಿಸಿ, 'ಎ' ವಲಯ ಹೊರತುಪಡಿಸಿ ಉಳಿದ ವಲಯಗಳಲ್ಲಿ ಹೊಸದಾಗಿ ಖಾಸಗಿ ಸ್ವತ್ತುಗಳ ಮೇಲೆ ವಾಣಿಜ್ಯ ಜಾಹೀರಾತು ಫಲಕಗಳಿಗೆ ಪಾಲಿಕೆಯ ಆದಾಯದ ಹಿತದೃಷ್ಟಿಯಿಂದ ವಿಶೇಷ ಪ್ರಕರಣಗಳಲ್ಲಿ ಅನುಮತಿ ನೀಡಲು ಹೊಸ ದರಗಳನ್ನು ನಿಗಧಿಪಡಿಸಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗಾಗಿ ಕಡತ ಮಂಡಿಸುವುದು.

5. ಎಲ್.ಇ.ಡಿ. ಹಾಗೂ ಟ್ರೈವಿಜನ್, ಬೋರ್ಡ್‌ಗಳಿಗೆ ಈಗ ಹಾಲಿ ಇರುವ ದರಗಳ ಮೇಲೆ ಶೇಕಡ 15% ಆರೋಗ್ಯ ಕರ ಸೇರಿ ಹಾಲಿ ಇರುವ ದರಗಳನ್ನು ಶೇಕಡ 50% ರಷ್ಟು ಹೆಚ್ಚು ಮಾಡುವುದು.

6. ಜಾಹೀರಾತು ಬೈಲಾ 3ಎ(7) ನಿಯಮವನ್ನು ತಿದ್ದುಪಡಿ ಮಾಡಿ, ಯಾವುದೇ ಅನಧಿಕೃತ ಜಾಹೀರಾತು ಫಲಕಗಳಿಗೆ ಮಾಹಿತಿ ಲಭ್ಯವಿದ್ದಲ್ಲಿ ಜಾಹೀರಾತುದಾರರಿಗೆ, ಇಲ್ಲವಾದಲ್ಲಿ ಕಟ್ಟಡ/ಸ್ವತ್ತಿನ ಮಾಲೀಕರಿಗೆ ಸದರಿ ಅಳತೆಯ ಜಾಹೀರಾತು ಫಲಕದ 2 ವರ್ಷಗಳ ಶುಲ್ಕವನ್ನು ದಂಡದ ರೂಪದಲ್ಲಿ ವಿಧಿಸಿ ವಸೂಲಿ ಮಾಡುವುದು ಹಾಗೂ ಸದರಿ ಅನಧಿಕೃತ ಫಲಕಗಳನ್ನು ತೆರವುಗೊಳಿಸುವುದು.

7. 2009 ರಿಂದ ಅನುಮತಿ ಪಡೆದಿರುವ ಫಲಕಗಳಿಗೆ ಸಂಬಂಧಿಸಿದಂತೆ ಹಲವಾರು ಪ್ರಕರಣಗಳಲ್ಲಿ ಘನ ನ್ಯಾಯಾಲಯಗಳಲ್ಲಿ ಸದರಿ ಫಲಕಗಳನ್ನು ತೆರವುಗೊಳಿಸದಂತೆ ಡೀಮ್ಡ್ ನವೀಕರಣವನ್ನು ಕೋರಿ ಅರ್ಜಿ ಸಲ್ಲಿಸಿ ತಡೆಯಾಜ್ಞೆಗಳನ್ನು ಪಡೆದಿದ್ದು. ಸದರಿ ವಾಣಿಜ್ಯ ಜಾಹೀರಾತು ಪ್ರದರ್ಶಿಸಿರುವ ಅವಧಿಗೆ ಅಂದರೆ ದಿನಾಂಕ:01-07-2010 ರಿಂದಲೇ ಪರಿಷ್ಕರಿಸಿದ ಜಾಹೀರಾತು ಶುಲ್ಕವನ್ನು ಸದರಿ ಜಾಹೀರಾತುದಾರರಿಂದ ಪಾವತಿಸಿಕೊಂಡು ನವೀಕರಿಸುವುದು.

8. ಜಾಹೀರಾತು ಬೈಲಾ-2006 ರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪೂರ್ವ, ಪಶ್ಚಿಮ, ದಕ್ಷಿಣ ವಲಯಗಳ ಜೊತೆಗೆ ಉಳಿಕೆ 5 ವಲಯಗಳಾದ (01) ಬೊಮ್ಮನಹಳ್ಳಿ ವಲಯ, (02) ಯಲಹಂಕ ವಲಯ, (03) ರಾಜರಾಜೇಶ್ವರಿ ನಗರ ವಲಯ, (04) ದಾಸರಹಳ್ಳಿ ವಲಯ (05) ಮಹದೇವಪುರ ವಲಯಗಳಲ್ಲಿಯೂ ದಿನಾಂಕ:16-01-07 ರಿಂದ ಪೂರ್ವಾನ್ವಯವಾಗುವಂತೆ ಜಾರಿಗೆ ತರುವುದು.

9. 4ಎ(ii)ರಂತೆ ಏಜೆನ್ಸಿಯನ್ನು ನೊಂದಣಿ ಮಾಡಿಕೊಳ್ಳುವ ಬಗ್ಗೆ ಹಾಲಿ ಇರುವ ರೂ.5,000-00 ಮೊತ್ತವನ್ನು ರೂ. 20,000-00 ಗಳಿಗೆ ಮತ್ತು ಸದರಿ ನೊಂದಣಿಯನ್ನು ಪ್ರತಿ 3 ವರ್ಷಗಳಿಗೊಮ್ಮೆ ನವೀಕರಿಸುವ ಬಗ್ಗೆ ಹಾಲಿ ಇರುವ ಮೊತ್ತ ರೂ.2,000-00 ಗಳಿಂದ ರೂ.5,000-00 ಗಳಿಗೆ ಹೆಚ್ಚಿಸುವುದು.

10. ಸೆಕ್ಷನ್ II 3 M(i)ಪ್ರಕಾರ ಸ್ವಯಂ ಜಾಹೀರಾತು ಬೋರ್ಡ್‌ಗಳ ಅಳತೆ 10 x 10 ಅಡಿಗಳಿಗೆ ಮೀರದಂತೆ ಕಟ್ಟುನಿಟ್ಟಿನ ಕ್ರಮ ವಹಿಸುವುದು.

............................7

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಹಾಲಿ ಇರುವ ಜಾಹೀರಾತು ನಿಯಮ 2006 ಕ್ಕೆ ಹಲವಾರು ತಿದ್ದುಪಡಿಗಳನ್ನು ಪ್ರಸ್ತಾಪಿಸಿ ಜಾಹೀರಾತು ತೆರಿಗೆಯನ್ನು ವಲಯ/ಪ್ಯಾಕೇಜುವಾರು ಹರಾಜು ಮಾಡಿ ಗರಿಷ್ಠ ಜಾಹೀರಾತು ತೆರಿಗೆಯನ್ನು ಹಲವು ಎ.ಬಿ.ಸಿ.ಡಿ. ವಲಯಗಳನ್ನು ಬದಲಾಯಿಸಲು ಪ್ರಸ್ತಾವನೆಯನ್ನು ಆಯುಕ್ತರು ಸಲ್ಲಿಸಿರುತ್ತಾರೆ. ಆದಕಾರಣ ಪೂಜ್ಯ ಮಹಾಪೌರರ ಅಧ್ಯಕ್ಷತೆಯಲ್ಲಿ, ಪೂಜ್ಯ ಮಹಾಪೌರರು ನಿರ್ಧರಿಸುವ ಸದಸ್ಯರನ್ನು ಒಳಗೊಂಡಂತೆ ಸಮಿತಿಯನ್ನು ರಚಿಸಿ, ಪ್ರಸ್ತಾವನೆಯನ್ನು ಪೂರ್ಣ ಪರಿಶೀಲಿಸಿ, ಸದರಿ ಸಮಿತಿಯ ಶಿಫಾರಸ್ಸನ್ನು ಸಮಿತಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವುದು.

ಈ ಮೇಲ್ಕಂಡ ತೀರ್ಮಾನ ಕಾಯ್ದಿರಿಸಿ, ಘನ ಉಚ್ಚನ್ಯಾಯಾಲಯ ರಿಟ್ ಅರ್ಜಿಗಳು 34737-34747/2010 (ಎಲ್‌ಬಿ-ಬಿಎಂಪಿ) ರಲ್ಲಿ ದಿನಾಂಕ:15-11-2010 ರಲ್ಲಿ ಆದೇಶಿಸಿರುವಂತೆ (ಆದೇಶದ ತೀರ್ಮಾನ

1) ಅರ್ಜಿದಾರರು ಹಣ ಪಾವತಿಸಿ ಜಾಹೀರಾತು ವ್ಯವಹಾರವನ್ನು ಈಗಿನ ಬೈಲಾಗಳಂತೆ ಮುಂದುವರೆಸುವುದು.
2) ಬಿ.ಬಿ.ಎಂ.ಪಿ. ಹೊಸ ಅಥವಾ ತಿದ್ದುಪಡಿ ಬೈಲಾ ಮಾಡಲು ಸ್ವತಂತ್ರರಾಗಿರುತ್ತಾರೆ.
3) ಹೊಸ/ತಿದ್ದುಪಡಿ ಬೈಲಾಗಳು ಜಾರಿಗೆ ಬಂದಲ್ಲಿ ಸದರಿ ಬೈಲಾಗಳಿಗೆ ಅರ್ಜಿದಾರರು ಬದ್ಧರಾಗಿರತಕ್ಕದ್ದು.
4) ಅರ್ಜಿದಾರರು ಅಂತಹ ಬೈಲಾಗಳನ್ನು ಪ್ರಶ್ನಿಸಲು ಸ್ವತಂತ್ರರಾಗಿರುತ್ತಾರೆ.
5) ಬಾಕಿ ಇರುವ ಜಾಹೀರಾತು ತೆರಿಗೆಯನ್ನು ಈ ಆದೇಶ ತಲುಪಿದ ಒಂದು ವಾರದಲ್ಲಿ ಪಾವತಿಸಿ ಮುಂದೆ ಬಾಕಿಯಾಗುವ ಹಣವನ್ನು ಆಗಿಂದಾಗ್ಗೆ ಪಾವತಿಸತಕ್ಕದ್ದು.

ಈ ತೀರ್ಮಾನವನ್ನು ಎಲ್ಲರಿಗೂ ಅನ್ವಯಿಸುವಂತೆ ಜಾಹೀರಾತು ತೆರಿಗೆ ಸಂಘದವರು ಮನವಿ ಮಾಡಿದ್ದು, ಈ ಆದೇಶಕ್ಕೆ ಮಾನ್ಯ ಮಾಡಿ 2010-11 ಸಾಲಿಗೆ ಹಾಲಿ ಇರುವ ತೆರಿಗೆ ಪಡೆದು ಎಲ್ಲಾ ಜಾಹೀರಾತುದಾರರಿಂದ ಒಂದು ಮುಚ್ಚಳಿಕೆ ಪಡೆದು ಒಂದು ವರ್ಷಕ್ಕೆ ನವೀಕರಣ ಮಾಡಿ ಕೊಡುವುದು ಎಂದು ಹಾಗೂ ಹೊಸ/ತಿದ್ದುಪಡಿ ಜಾಹೀರಾತು ತೆರಿಗೆ ಜಾರಿಗೆ ಬಂದ ದಿನದಿಂದಲೇ ಜಾಹೀರಾತು ಏಜೆನ್ಸಿಗಳ ಬದ್ಧರಾಗಿರತಕ್ಕದೆಂಬ ಷರತ್ತುಗಳನ್ನು ವಿಧಿಸುವುದೆಂದು ಸಭೆಯು ತೀರ್ಮಾನಿಸಿತು.

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಹಾಲಿ ಇರುವ ಜಾಹೀರಾತು ನಿಯಮ 2006 ಕ್ಕೆ ಹಲವಾರು ತಿದ್ದುಪಡಿಗಳನ್ನು ಪ್ರಸ್ತಾಪಿಸಿ ಜಾಹೀರಾತು ತೆರಿಗೆಯನ್ನು ವಲಯ/ಪ್ಯಾಕೇಜುವಾರು ಹರಾಜು ಮಾಡಿ ಗರಿಷ್ಠ ಜಾಹೀರಾತು

.............................8

ತೆರಿಗೆಯನ್ನು ಹಲವು ಎ.ಬಿ.ಸಿ.ಡಿ. ವಲಯಗಳನ್ನು ಬದಲಾಯಿಸಲು ಪ್ರಸ್ತಾವನೆಯನ್ನು ಆಯುಕ್ತರು ಸಲ್ಲಿಸಿರುತ್ತಾರೆ. ಆದಕಾರಣ ಪೂಜ್ಯ ಮಹಾಪೌರರ ಅಧ್ಯಕ್ಷತೆಯಲ್ಲಿ, ಪೂಜ್ಯ ಮಹಾಪೌರರು ನಿರ್ಧರಿಸುವ ಸದಸ್ಯರನ್ನು ಒಳಗೊಂಡಂತೆ ಸಮಿತಿಯನ್ನು ರಚಿಸಿ, ಪ್ರಸ್ತಾವನೆಯನ್ನು ಪೂರ್ಣ ಪರಿಶೀಲಿಸಿ, ಸದರಿ ಸಮಿತಿಯ ಶಿಫಾರಸ್ಸನ್ನು ಸಮಿತಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವುದು.

ಈ ಮೇಲ್ಕಂಡ ತೀರ್ಮಾನ ಕಾಯ್ದಿರಿಸಿ, ಘನ ಉಚ್ಚನ್ಯಾಯಾಲಯ ರಿಟ್ ಅರ್ಜಿಗಳು 34737-34747/2010 (ಎಲ್‌ಬಿ-ಬಿಎಂಪಿ) ರಲ್ಲಿ ದಿನಾಂಕ:15-11-2010 ರಲ್ಲಿ ಆದೇಶಿಸಿರುವಂತೆ (ಆದೇಶದ ತೀರ್ಮಾನ

1) ಅರ್ಜಿದಾರರು ಹಣ ಪಾವತಿಸಿ ಜಾಹೀರಾತು ವ್ಯವಹಾರವನ್ನು ಈಗಿನ ಬೈಲಾಗಳಂತೆ ಮುಂದುವರೆಸುವುದು.
2) ಬಿ.ಬಿ.ಎಂ.ಪಿ. ಹೊಸ ಅಥವಾ ತಿದ್ದುಪಡಿ ಬೈಲಾ ಮಾಡಲು ಸ್ವತಂತ್ರರಾಗಿರುತ್ತಾರೆ.
3) ಹೊಸ/ತಿದ್ದುಪಡಿ ಬೈಲಾಗಳು ಜಾರಿಗೆ ಬಂದಲ್ಲಿ ಸದರಿ ಬೈಲಾಗಳಿಗೆ ಅರ್ಜಿದಾರರು ಬದ್ಧರಾಗಿರತಕ್ಕದ್ದು.
4) ಅರ್ಜಿದಾರರು ಅಂತಹ ಬೈಲಾಗಳನ್ನು ಪ್ರಶ್ನಿಸಲು ಸ್ವತಂತ್ರರಾಗಿರುತ್ತಾರೆ.
5) ಬಾಕಿ ಇರುವ ಜಾಹೀರಾತು ತೆರಿಗೆಯನ್ನು ಈ ಆದೇಶ ತಲುಪಿದ ಒಂದು ವಾರದಲ್ಲಿ ಪಾವತಿಸಿ ಮುಂದೆ ಬಾಕಿಯಾಗುವ ಹಣವನ್ನು ಆಗಿಂದಾಗ್ಗೆ ಪಾವತಿಸತಕ್ಕದ್ದು.

ಈ ತೀರ್ಮಾನವನ್ನು ಎಲ್ಲರಿಗೂ ಅನ್ವಯಿಸುವಂತೆ ಜಾಹೀರಾತು ತೆರಿಗೆ ಸಂಘದವರು ಮನವಿ ಮಾಡಿದ್ದು, ಈ ಆದೇಶಕ್ಕೆ ಮಾನ್ಯ ಮಾಡಿ 2010-11 ಸಾಲಿಗೆ ಹಾಲಿ ಇರುವ ತೆರಿಗೆ ಪಡೆದು ಎಲ್ಲಾ ಜಾಹೀರಾತುದಾರರಿಂದ ಒಂದು ಮುಚ್ಚಳಿಕೆ ಪಡೆದು ಒಂದು ವರ್ಷಕ್ಕೆ ನವೀಕರಣ ಮಾಡಿ ಕೊಡುವುದು ಎಂದು ಹಾಗೂ ಹೊಸ/ತಿದ್ದುಪಡಿ ಜಾಹೀರಾತು ತೆರಿಗೆ ಜಾರಿಗೆ ಬಂದ ದಿನದಿಂದಲೇ ಜಾಹೀರಾತು ಏಜೆನ್ಸಿಗಳ ಬದ್ಧರಾಗಿರತಕ್ಕದೆಂಬ ಷರತ್ತುಗಳನ್ನು ವಿಧಿಸುವುದೆಂದು ಸಭೆಯು ತೀರ್ಮಾನಿಸಿತು".

(ಎಸ್.ಕೆ.ನಟರಾಜ)
ಮಹಾಪೌರರು

## ದಿನಾಂಕ:29-12-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

### ವಿಷಯದ ಸಂಖ್ಯೆ: 13 (159)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:29-06-2010 ರಂದು ನಡೆದ ಪಾಲಿಕೆಯ ಸಭೆಯ ವಿಷಯದ ಸಂಖ್ಯೆ:53/2010-11 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಕೈಗೊಳ್ಳುವ ಕಾಮಗಾರಿಗಳನ್ನು ತುಂಡು ಗುತ್ತಿಗೆ, ಇ-ಟೆಂಡರ್ ಹಾಗೂ ಇ-ಪ್ರೊಕ್ಯೂರ್‌ಮೆಂಟ್‌ಗಳಾಗಿ ವಿಂಗಡಿಸಿ, ಇವುಗಳಿಗೆ ಟೆಂಡರ್ ಕರೆಯಲು ಪಾಲಿಕೆಗೆ ಈ ಕೆಳಕಂಡಂತೆ ಗರಿಷ್ಠ ಮೊತ್ತವನ್ನು ನಿಗಧಿಪಡಿಸಿ ನಿರ್ಣಯ ಕೈಗೊಂಡಿದೆ.

| ಕ್ರ.ಸಂ. | ವಿವರ | ಮೊತ್ತ ರೂಪಾಯಿಗಳಲ್ಲಿ |
|---|---|---|
| 1 | ತುಂಡು ಗುತ್ತಿಗೆ | 5.00 ಲಕ್ಷಗಳು ಮೀರದಂತೆ |
| 2 | ಇ-ಟೆಂಡರ್ | 50.00 ಲಕ್ಷಗಳು ಮೀರದಂತೆ |
| 3 | ಇ-ಪ್ರೊಕ್ಯೂರ್‌ಮೆಂಟ್ | 50.00 ಲಕ್ಷಗಳಿಗೆ ಮಿಗಿಲಾಗಿ |

ಬಿ.ಬಿ.ಎಂ.ಪಿ.ಯು ವಿಷಯ ಸಂಖ್ಯೆ:263/07-08ರಲ್ಲಿ ರೂ.2.00 ಲಕ್ಷಗಳವರೆಗಿನ ಕಾಮಗಾರಿಗಳನ್ನು ತುಂಡು ಗುತ್ತಿಗೆ ಆಧಾರದ ಮೇಲೆ ಕೆಲಸವನ್ನು ಕೈಗೆತ್ತಿಕೊಳ್ಳಬಹುದು ಎಂದು ನಿರ್ಣಯಿಸಿದೆ.

ಬಿ.ಬಿ.ಎಂ.ಪಿ.ಯು ದಿನಾಂಕ:04-02-2010 ರಂದು ವಿಷಯ ಸಂಖ್ಯೆ:590/09-10 ರಲ್ಲಿ ರೂ.5.00 ಲಕ್ಷಕ್ಕೂ ಹೆಚ್ಚಿನ ಕಾಮಗಾರಿಗಳಿಗೆ ಕಡ್ಡಾಯವಾಗಿ ಇ-ಖರೀದಿ ಮೂಲಕವೇ ಟೆಂಡರ್ ಆಹ್ವಾನಿಸಿ ಕ್ರಮ ಕೈಗೊಳ್ಳುವುದು ಎಂದು ನಿರ್ಣಯಿಸಿದೆ.

ದಿನಾಂಕ: 29-06-2010 ರಂದು ನಡೆದ ಪಾಲಿಕೆಯ ಸಭೆಯ ವಿಷಯದ ಸಂಖ್ಯೆ:53/2010-11 ರಲ್ಲಿ ಕೈಗೊಳ್ಳಲಾದ ನಿರ್ಣಯವನ್ನು ದಿನಾಂಕ:12-07-2010 ರಂದು ಸರ್ಕಾರದ ಅನುಮೋದನೆಗಾಗಿ ಪತ್ರ ಬರೆಯಲಾಗಿದ್ದು, ಈ ಸಂಬಂಧ ಸರ್ಕಾರವು ದಿನಾಂಕ:13-09-2010 ರಂದು ಪಾಲಿಕೆಗೆ ಕರ್ನಾಟಕ ಪೌರ ನಿಗಮಗಳ ಕಾಯ್ದೆ 1976 ರ ಕಲಂ 98(2) ರ ಅಡಿ ಕಾರಣ ಕೇಳಿ ನೋಟಿಸ್ ಅನ್ನು ಜಾರಿ ಮಾಡಿಲಾಗಿರುತ್ತದೆ.

ಸದರಿ ನೋಟಿಸ್ ನಲ್ಲಿ "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯು ದಿನಾಂಖ:29-06-2010 ರಂದು ವಿಷಯದ ಸಂಖ್ಯೆ:53/2010-11 ರಲ್ಲಿ ತೆಗೆದುಕೊಂಡಿರುವ ನಿರ್ಣಯವನ್ನು ಏಕೆ ರದ್ದುಪಡಿಸಬಾರದು? ಎಂಬುದಕ್ಕೆ ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ರ ಕಲಂ 98(2) ರ ಪ್ರಕಾರ ಈ ಕಾರಣ ಕೇಳುವ ನೋಟಿಸ್ ಅನ್ನು ಜಾರಿ ಮಾಡಲಾಗಿದೆ. ಈ ನೋಟಿಸ್ ಅನ್ನು ಪಾಲಿಕೆಯ ಸಭೆಯ ಗಮನಕ್ಕೆ ತಂದು ನಿರ್ಣಯವನ್ನು ರದ್ದುಪಡಿಸುವ ಬಗ್ಗೆ ಪಾಲಿಕೆಯ ಹೇಳಿಕೆ/ಸಮಜಾಯಿಷಿಗಳೇನಾದರೂ ಇದ್ದಲ್ಲಿ ಅದನ್ನು 15 ದಿನಗಳೊಲಗಾಗಿ ಸರ್ಕಾರಕ್ಕೆ ಕಳುಹಿಸಿಕೊಡುವಂತೆ ಸೂಚಿಸಲಾಗಿದೆ" ಎಂದು ತಿಳಿಸಲಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಅವಗಾಹನೆಗೆ ತರುತ್ತಾ, ಸರ್ಕಾರದ ಕಾರಣ ಕೇಳಿ ನೋಟಿಸ್‌ಗೆ ಸಂಬಂಧಿಸಿದಂತೆ, ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:18-11-2010 ರ ಟಿಪ್ಪಣಿ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಈ ಬಗ್ಗೆ ಸರ್ಕಾರಕ್ಕೆ ಪುನರ್ ಮಂಡಿಸಲಾಗಿದ್ದು, ಆದೇಶದ ನಿರೀಕ್ಷೆಯಲ್ಲಿರುವ ವಿಷಯವನ್ನು ಸರ್ಕಾರದ ಗಮನಕ್ಕೆ ತರಲು ಆಯುಕ್ತರಿಗೆ ಸೂಚಿಸಲು ಸಭೆಯು ತೀರ್ಮಾನಿಸಿತು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**<u>ನಿರ್ಣಯ:</u>** "ಈ ಬಗ್ಗೆ ಸರ್ಕಾರಕ್ಕೆ ಪುನರ್ ಮಂಡಿಸಲಾಗಿದ್ದು, ಆದೇಶದ ನಿರೀಕ್ಷೆಯಲ್ಲಿರುವ ವಿಷಯವನ್ನು ಸರ್ಕಾರದ ಗಮನಕ್ಕೆ ತರಲು ಆಯುಕ್ತರಿಗೆ ಸೂಚಿಸಲು ಸಭೆಯು ತೀರ್ಮಾನಿಸಿತು".

ಎಸ್.ಕೆ.ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು

# ದಿನಾಂಕ:29–12–2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 14 (160)/2010–11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಯಶವಂತಪುರ ಹೋಬಳಿಯ ಹೇರೋಹಳ್ಳಿ ಕೆರೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ದಿನಾಂಕ:16–09–2008 ರಂದು ನಡೆದ ಕೆರೆ ಅಭಿವೃದ್ಧಿ ಪ್ರಾಧಿಕಾರದ 20ನೇ ನಡವಳಿ ಸಭೆಯ ನಿರ್ಣಯ ಸಂಖ್ಯೆ:8 ರಲ್ಲಿ ಹೇರೋಹಳ್ಳಿ ಕೆರೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಪುನರುಜ್ಜೀವನಗೊಳಿಸಿ ಸಮಗ್ರವಾಗಿ ಅಭಿವೃದ್ಧಿಗೊಳಿಸಲು ಪಾಲಿಕೆಯ ವಶಕ್ಕೆ ಒಪ್ಪಿಸಲು ನಿರ್ಣಯ ಕೈಗೊಳ್ಳಲಾಗಿರುತ್ತದೆ ಹಾಗೂ ದಿನಾಂಕ:26–10–2008 ರಂದು ಮಾನ್ಯ ಮುಖ್ಯಮಂತ್ರಿಗಳು ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು ಹೇರೋಹಳ್ಳಿ ಕೆರೆಗೆ ಭೇಟಿ ನೀಡಿ ಸದರಿ ಕೆರೆಯನ್ನು ಅತ್ಯಾಧುನಿಕ ರೀತಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಅಭಿವೃದ್ಧಿಪಡಿಸುವುದಾಗಿ ಘೋಷಿಸಿರುತ್ತಾರೆ.

ಈ ಕಾಮಗಾರಿಗೆ ಯೋಜನಾ ವರದಿಯನ್ನು ಮೆ॥ ಐಡೀಸ್ ಕನ್‌ಸಲ್ಟಿಂಗ್ ಪ್ರೈ. ಲಿ. ರವರು ತಯಾರಿಸಿದ್ದು, ಈ ಕೆರೆಯ ಅಭಿವೃದ್ಧಿಗೆ 2009–10 ನೇ ಸಾಲಿನ ಲೆಕ್ಕ ಶೀರ್ಷಿಕೆ "12–ನಗರ ವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ" ಯಲ್ಲಿನ ಉಪ ಶೀರ್ಷಿಕೆ "ಕೆರೆ ನಿರ್ವಹಣೆ–ಪಿ2106" ಅಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಕಾಮಗಾರಿಯ ಅಂದಾಜು ಮೊತ್ತ ರೂ.299.00 ಲಕ್ಷಗಳಾಗಿದ್ದು, ಈ ಕಾಮಗಾರಿಗೆ ಟೆಂಡರ್ ಅನ್ನು ಆಹ್ವಾನಿಸಿ, ಟೆಂಡರ್ ಅನ್ನು ಶ್ರೀ. ಜೆ.ಸಿ.ಪ್ರಕಾಶ್ ರವರಿಗೆ ರೂ.2,58,15,620.54 ಲಕ್ಷಗಳಿಗೆ ಗುತ್ತಿಗೆಯನ್ನು ಶೇ.7.91% ಕಡಿಮೆ (ಎಸ್.ಆರ್.2009–10) ಮೊತ್ತಕ್ಕೆ ಅನುಮೋದನೆಯನ್ನು ಪಡೆಯಲಾಗಿದ್ದು, ಕಾಮಗಾರಿಯು ಶೇ.90% ರಷ್ಟು ಪೂರ್ಣಗೊಂಡಿರುತ್ತದೆ.

ದಿನಾಂಕ:31–07–2010 ರಂದು ಮಾನ್ಯ ಆಯುಕ್ತರು ಕಾಮಗಾರಿಯ ಪರಿಶೀಲನೆಯ ಸಮಯದಲ್ಲಿ ಹಾಲಿ ಇರುವ ಕೆರೆಯ ಆಳವನ್ನು 1.00 ಮೀ. ನಿಂದ 1.50 ಮೀ. ಆಳದವರೆಗೆ, ಕೆರೆಯ ಅಂಗಳವನ್ನು ಆಳಗೊಳಿಸಲು ಸೂಚಿಸಿರುತ್ತಾರೆ. ಸ್ಥಳೀಯ ವಿಧಾನ ಸಭಾ ಸದಸ್ಯರಾದ ಶ್ರೀಮತಿ. ಶೋಭ ಕರಂದ್ಲಾಜೆರವರು ದಿನಾಂಕ:26–08–2010 ರಂದು ಪತ್ರ ಬರೆದು ಕೆರೆಯ ಅಂಗಳವನ್ನು ಇನ್ನೂ 4 ಅಡಿಯಷ್ಟು ಆಳಗೊಳಿಸಬೇಕೆಂದು ತಿಳಿಸಿರುತ್ತಾರೆ. ಹೀಗೆ ಆಳಗೊಳಿಸುವ ಬಗ್ಗೆ ತಾಂತ್ರಿಕ ತಜ್ಞರಾದ ಶ್ರೀ. ಶಿವಶಂಕರ್ ರಾವ್ (ಪಾಲಿಕೆಯ ತಾಂತ್ರಿಕ ಸಲಹಾ ಸಮಿತಿಯ ಸದಸ್ಯರು) ಮತ್ತು ಶ್ರೀ. ಕೆ.ಎಸ್.ರಾಮಸ್ವಾಮಿ (ನಿವೃತ್ತ ಮುಖ್ಯ ಅಭಿಯಂತರರು, ನೀರಾವರಿ ಇಲಾಖೆ) ರವರುಗಳ ಅಭಿಪ್ರಾಯವನ್ನು ಸಹ ಪಡೆಯಲಾಗಿದೆ. ಈ ಹೆಚ್ಚುವರಿ ಕಾಮಗಾರಿಗಾಗಿ ರೂ.175.00 ಲಕ್ಷಗಳಾಗುತ್ತದೆಂದು ಅಂದಾಜಿಸಲಾಗಿದ್ದು, ಕಾಮಗಾರಿಯನ್ನು ನಿರ್ವಹಿಸುವಾಗ ಬಿ.ಓ.ಕ್ಯೂ.ನ ಕೆಲವು ಅಂಶಗಳಲ್ಲಿ ವ್ಯತ್ಯಾಸವಾಗಿದ್ದರಿಂದ, ವರ್ಕ್ ಸ್ಲಿಪ್ ಮೊತ್ತ ರೂ.1,62,70,414.00 ಮತ್ತು ಇಐಆರ್‌ಎಲ್ ಮೊತ್ತ ರೂ.24,32,172.00 ಗಳಿಗೆ ಅನುಮೋದನೆಯನ್ನು ನೀಡಲಾಗಿದೆ.

ಕೆರೆಯ ಅಂಗಳದಲ್ಲಿ ಆಳಗೊಳಿಸುವ ಅಳತೆಯನ್ನು ಬ್ಲಾಕ್ ಲೆವೆಲ್ ಮೂಲಕ ತೆಗೆದುಕೊಂಡು, ಅದರಂತೆ ಮಣ್ಣು ತೆಗೆದಿರುವ ಪ್ರಮಾಣವನ್ನು ನಿಗಧಿಪಡಿಸಲಾಗುವುದು.

ಈ ಹೆಚ್ಚುವರಿ ಕಾಮಗಾರಿಯನ್ನು ಈ ಕೆರೆಯ ಮೂಲಕ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡಿರುವ ಶ್ರೀ. ಜೆ.ಸಿ.ಪ್ರಕಾಶ್ ರವರಿಂದಲೇ ಕೈಗೊಳ್ಳಲು ಉದ್ದೇಶಿಸಲಾಗಿದೆ. ಈ ಗುತ್ತಿಗೆದಾರರು ಹಾಲಿ ಕಾಮಗಾರಿಗೆ ಬೇಕಾದ ಎಲ್ಲಾ ಯಂತ್ರೋಪಕರಣಗಳೊಂದಿಗೆ ತುರ್ತಾಗಿ

.........................2

ಕಾರ್ಯನಿರ್ವಹಿಸಬಲ್ಲವರಾಗಿರುತ್ತಾರೆಂದು, ಮುಖ್ಯ ಅಭಿಯಂತರರು (ಯೋಜನೆ-2) ರವರು ಅಭಿಪ್ರಾಯಪಟ್ಟಿರುತ್ತಾರೆ. ಹೆಚ್ಚುವರಿ ಕಾಮಗಾರಿಯನ್ನು ಇವರಿಗೆ ಶೇ.7.91% ಕಡಿಮೆ ದರದಲ್ಲಿಯೇ ವಹಿಸಿಕೊಡಲಾಗುವುದು. ಇದರಿಂದಾಗಿ ಹೆಚ್ಚುವರಿ ಕಾಮಗಾರಿಯಲ್ಲಿ ರೂ.14.03 ಲಕ್ಷಗಳು ಉಳಿತಾಯವಾಗುತ್ತದೆಂದು ಮುಖ್ಯ ಅಭಿಯಂತರರು ತಿಳಿಸಿರುತ್ತಾರೆ. ಈ ಹೆಚ್ಚುವರಿ ಕಾಮಗಾರಿಯಿಂದಾಗಿ ವರ್ಕ್ ಸ್ಲಿಪ್ - II ರ ಮೊತ್ತ ರೂ.1,58,72,304.00 ಮತ್ತು ಇಐಆರ್‌ಎಲ್ - II ರ ಮೊತ್ತ ರೂ.58,724.70 ಗಳಾಗಿದ್ದು, ಇವುಗಳಿಗೆ ಅನುಮೋದನೆಯನ್ನು ನೀಡಿದ್ದು, ವರ್ಕ್ ಸ್ಲಿಪ್ I, II ಮತ್ತು ಇಐಆರ್‌ಎಲ್ I, II ಸೇರಿಸಿ ಒಟ್ಟಾರೆ ರೂ.448.73 ಲಕ್ಷಗಳಿಗೆ ತಯಾರಿಸಲಾಗಿದೆ.

ಮೊದಲನೇ ಹಂತದ ಕಾಮಗಾರಿಯನ್ನು ದಿನಾಂಕ:03-06-2010 ರಲ್ಲಿ ಪೂರ್ಣಗೊಳಿಸಬೇಕಾಗಿತ್ತು. ಆದರೆ, ಬಿ.ಓ.ಕ್ಯೂ.ನಲ್ಲಿ ಕೆಲವು ಬದಲಾವಣೆಗಳನ್ನು ಮಾಡಿದ್ದರಿಂದ ಗುತ್ತಿಗೆಯ ಕಾಲಾವಧಿಯನ್ನು ದಿನಾಂಕ:04-06-2010 ರಿಂದ 03-10-2010 ರವರೆಗೆ ವಿಸ್ತರಣೆಯನ್ನು ನೀಡಲಾಗಿದೆ. ಈಗ ಪ್ರಸ್ತಾಪಿಸಿರುವ ಹೆಚ್ಚುವರಿ ಕಾಮಗಾರಿಯಿಂದ ಕಾಮಗಾರಿಯನ್ನು ಪೂರ್ಣ ಪ್ರಮಾಣದಲ್ಲಿ ಪೂರ್ಣಗೊಳಿಸಲು ದಿನಾಂಕ:03-10-2010 ರಿಂದ 03-03-2011 ರವರೆಗೆ ಕಾಲಾವಧಿ ವಿಸ್ತರಣೆಯನ್ನು ನೀಡಲು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ.

1. ಮೊದಲನೇ ಹಂತದ ಕಾಮಗಾರಿಗೆ ಹೆಚ್ಚುವರಿ ಕಾಮಗಾರಿಯಾದ ಕೆರೆಯ ಅಂಗಳವನ್ನು 1.00 ಮೀ. ನಿಂದ 1.50 ಮೀ. ಆಳಗೊಳಿಸುವ ಕಾಮಗಾರಿಯನ್ನು ಈ ಹಿಂದೆ ನೀಡಿರುವ - 7.91% ಶೇಕಡವಾರಿನಲ್ಲಿ ಗುತ್ತಿಗೆಯನ್ನು ಮೂಲ ಗುತ್ತಿಗೆದಾರರಾದ ಶ್ರೀ. ಜೆ.ಸಿ.ಪ್ರಕಾಶ್ ರವರಿಂದ ನಿರ್ವಹಿಸಲು ಅನುಮೋದನೆ.
2. ವರ್ಕ್ ಸ್ಲಿಪ್-II ರ ಮೊತ್ತ ರೂ.1,58,72,304.00 ಗಳಿಗೆ ಮತ್ತು ಇಐಆರ್‌ಎಲ್- II ರ ಮೊತ್ತ ರೂ.58,724.70 ಗಳಿಗೆ ಅನುಮೋದನೆ.
3. ವರ್ಕ್ ಸ್ಲಿಪ್-I, II ಮತ್ತು ಇಐಆರ್‌ಎಲ್-I, II ಗಳನ್ನು ಅಳವಡಿಸಿಕೊಂಡು ತಯಾರಿಸಲಾಗಿರುವ ಪರಿಷ್ಕೃತ ಅಂದಾಜುಪಟ್ಟಿಯ ಮೊತ್ತವಾದ ರೂ.448.73 ಲಕ್ಷಗಳಿಗೆ ಅನುಮೋದನೆ.
4. ಕಾಮಗಾರಿಯ ಕಾಲಾವಧಿಯನ್ನು ದಿನಾಂಕ:03-10-2010 ರಿಂದ 02-03-2011 ರವರೆಗೆ ವಿಸ್ತರಿಸಲು ಅನುಮೋದನೆ.

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:29-11-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:10-12-2010 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

..........................3

"ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:10-12-2010 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:10-12-2010 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ್

(ಎಸ್.ಕೆ.ನಟರಾಜ್)

ಮಹಾಪೌರರು

# ದಿನಾಂಕ:30-12-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 15 (161)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಆಯುಕ್ತರ ಕಛೇರಿಯ ದಿನಾಂಕ:08-10-2010 ರ ಸುತ್ತೋಲೆಯಲ್ಲಿ 2010-11 ನೇ ಸಾಲಿನ ಆಯವ್ಯಯದಲ್ಲಿ ನಿಗಧಿಪಡಿಸಿರುವ ಅನುದಾನದ ವಾರ್ಡ್‌ವಾರು ಅನುದಾನದಲ್ಲಿ ವಾರ್ಡ್ ಸದಸ್ಯರು ಸೂಚಿಸುವ ಹಾಗೂ ವಾರ್ಡ್‌ವಾರು ನಿಗಧಿಪಡಿಸಿರುವ ಅನುದಾನದ ಮಿತಿಗೆ ಒಳಪಟ್ಟು ಅಗತ್ಯವಿರುವಂತಹ ಕಾಮಗಾರಿ ಕೆಲಸಗಳ ಕಾರ್ಯಕ್ರಮ ಪಟ್ಟಿ (Programme of Works) ಯನ್ನು ತಯಾರಿಸುವುದು. ಸದರಿ ಕಾರ್ಯಕ್ರಮ ಪಟ್ಟಿಯಲ್ಲಿ ಚರಂಡಿ ಹೂಳು ತೆಗೆಯುವುದು, ರಸ್ತೆ ಗುಂಡಿಗಳನ್ನು ಮುಚ್ಚುವುದು, ಸಿಲ್ಟ್ ಮತ್ತು ಟ್ರಾಕ್ಟರ್ ಕಾಮಗಾರಿಗಳು ಹಾಗೂ ಶೇ.22.75 ರ ಕಾಮಗಾರಿಗಳನ್ನು ಸಹ ಒಳಗೊಂಡಿರಬೇಕು. ಈ ಎಲ್ಲಾ ಕಾಮಗಾರಿಗಳಿಗೆ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆದು, ಸಂಬಂಧಪಟ್ಟ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯುವಂತೆ ಸೂಚಿಸಲಾಗಿರುತ್ತದೆ. ಅದರಂತೆ, ಅಪರ ಆಯುಕ್ತರು (ರಾಜರಾಜೇಶ್ವರಿ ನಗರ ವಲಯ) ರವರು ರಾಜರಾಜೇಶ್ವರಿ ನಗರ ವಲಯದ ಬಿ.ಇ.ಎಂ.ಎಲ್. ಬಡಾವಣೆಯಲ್ಲಿ ಇಂಡೋರ್ ಮತ್ತು ಔಟ್‌ಡೋರ್ ಸ್ಪೋರ್ಟ್ಸ್ ಸ್ಟೇಡಿಯಂ ನಿರ್ಮಾಣ ಕಾಮಗಾರಿಯ ಪ್ರಸ್ತಾವನೆಯನ್ನು ಅನುಮೋದನೆಗೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾಪಿತ ಕಾಮಗಾರಿಗೆ 2009-10 ನೇ ಸಾಲಿನ ಆಯವ್ಯಯದಲ್ಲಿ ರೂ.373.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಲಾಗಿದ್ದು, 2010-11 ನೇ ಸಾಲಿನ ಆಯವ್ಯಯದಲ್ಲಿ ರೂ.280.00 ಲಕ್ಷಗಳ ಅನುದಾನವು ಲಭ್ಯವಿರುವುದಾಗಿ ತಿಳಿಸಿರುತ್ತಾರೆ ಹಾಗೂ ಪ್ರಸ್ತಾಪಿತ ಕಾಮಗಾರಿಯ ಮೊತ್ತ ರೂ.520.00 ಲಕ್ಷಗಳಾಗಿದ್ದು, ಸದರಿ ಕಾಮಗಾರಿಗೆ ಕಾಮಗಾರಿ ಸಂಕೇತವನ್ನು ಸಹ ಪಡೆಯಲಾಗಿದ್ದು, ಈ ಕಾಮಗಾರಿಗೆ ಡಿಪಿಆರ್ ತಯಾರಿಸಲಾಗಿ ರೂ.1184.00 ಲಕ್ಷಗಳೆಂದು ತಿಳಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ರಾಜರಾಜೇಶ್ವರಿ ನಗರ ವ್ಯಾಪ್ತಿಯಲ್ಲಿ ಬರುವ ಬಿ.ಇ.ಎಂ.ಎಲ್. ಬಡಾವಣೆಯಲ್ಲಿ ಇಂಡೋರ್ ಮತ್ತು ಔಟ್‌ಡೋರ್ ಸ್ಪೋರ್ಟ್ಸ್ ಸ್ಟೇಡಿಯಂ ನಿರ್ಮಾಣದ ರೂ.1184.00 ಲಕ್ಷಗಳ ಕಾಮಗಾರಿಗೆ ಅನುಮೋದನೆ ಕೋರಿ, ವಾರ್ಡ್‌ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20-11-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ವಾರ್ಡ್‌ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:08-12-2010 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:08-12-2010 ರ ನಿರ್ಣಯವನ್ನು ಒಪ್ಪುತ್ತಾ, ಸರ್ಕಾರದ ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆಯಲು ಹಾಗೂ ಆರ್ಥಿಕ ಅನುದಾನಕ್ಕೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿ ಮಂಡಿಸಲು ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಿತು".

ಶ್ರೀ.ಪಿ.ಎನ್.ಸದಾಶಿವ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

..........................2

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:08–12–2010 ರ ನಿರ್ಣಯವನ್ನು ಒಪ್ಪುತ್ತಾ, ಸರ್ಕಾರದ ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆಯಲು ಹಾಗೂ ಆರ್ಥಿಕ ಅನುದಾನಕ್ಕೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿ ಮಂಡಿಸಲು ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಿತು".

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:30-12-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 16 (162)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಆಯುಕ್ತರ ಕಛೇರಿಯ ದಿನಾಂಕ:08-10-2010 ರ ಸುತ್ತೋಲೆಯಲ್ಲಿ 2010-11 ನೇ ಸಾಲಿನ ಆಯವ್ಯಯದಲ್ಲಿ ನಿಗಧಿಪಡಿಸಿರುವ ಅನುದಾನದ ವಾರ್ಡ್‌ವಾರು ಅನುದಾನದಲ್ಲಿ ವಾರ್ಡ್ ಸದಸ್ಯರು ಸೂಚಿಸುವ ಹಾಗೂ ವಾರ್ಡ್‌ವಾರು ನಿಗಧಿಪಡಿಸಿರುವ ಅನುದಾನದ ಮಿತಿಗೆ ಒಳಪಟ್ಟು ಅಗತ್ಯವಿರುವಂತಹ ಕಾಮಗಾರಿ ಕೆಲಸಗಳ ಕಾರ್ಯಕ್ರಮ ಪಟ್ಟಿಯನ್ನು ತಯಾರಿಸುವುದು. ಸದರಿ ಕಾರ್ಯಕ್ರಮ ಪಟ್ಟಿಯಲ್ಲಿ ಚರಂಡಿ ಹೂಳು ತೆಗೆಯುವುದು, ರಸ್ತೆ ಗುಂಡಿಗಳನ್ನು ಮುಚ್ಚುವುದು, ಸಿಲ್ಟ್ ಮತ್ತು ಟ್ರಾಕ್ಟರ್ ಕಾಮಗಾರಿಗಳು ಹಾಗೂ ಶೇ.22.75 ರ ಕಾಮಗಾರಿಗಳನ್ನು ಸಹ ಒಳಗೊಂಡಿರಬೇಕು. ಈ ಎಲ್ಲಾ ಕಾಮಗಾರಿಗಳಿಗೆ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆದು ಸಂಬಂಧಪಟ್ಟ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯುವಂತೆ ಸೂಚಿಸಲಾಗಿರುತ್ತದೆ. ಅದರಂತೆ, ಅಪರ ಆಯುಕ್ತರು (ರಾಜರಾಜೇಶ್ವರಿ ನಗರ ವಲಯ) ರವರು ರಾಜರಾಜೇಶ್ವರಿ ನಗರ ವಲಯದಲ್ಲಿ ಸಮುದಾಯ ಭವನ ನಿರ್ಮಾಣ ಕಾಮಗಾರಿಯ ಪ್ರಸ್ತಾವನೆಯನ್ನು ಅನುಮೋದನೆಗೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾಪಿತ ಕಾಮಗಾರಿಗೆ 2009-10 ನೇ ಸಾಲಿನ ಆಯವ್ಯಯದಲ್ಲಿ ರೂ.283.00 ಲಕ್ಷಗಳ ಅನುದಾನವು ಲಭ್ಯವಿದ್ದು, ಅದರಂತೆ ಈ ಕಾಮಗಾರಿಗೆ ಕಾಮಗಾರಿ ಸಂಕೇತವನ್ನು ಸಹ ಪಡೆಯಲಾಗಿದ್ದು ಹಾಗೂ ಈ ಕಾಮಗಾರಿಗೆ ಡಿಪಿಆರ್ ಸಹ ತಯಾರಿಸಲಾಗಿರುತ್ತದೆ. ಈ ಕಾಮಗಾರಿಗೆ 2010-11 ನೇ ಸಾಲಿನ ಆಯವ್ಯಯದಲ್ಲಿ ರೂ.280.00 ಲಕ್ಷಗಳ ಅನುದಾನವು ಲಭ್ಯವಿದ್ದು, ಕಾಮಗಾರಿಯ ಮೊತ್ತ ರೂ.520.00 ಲಕ್ಷಗಳಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ರಾಜರಾಜೇಶ್ವರಿ ನಗರ ವ್ಯಾಪ್ತಿಯಲ್ಲಿ ಸಮುದಾಯ ಭವನ ನಿರ್ಮಾಣದ ರೂ.520.00 ಲಕ್ಷಗಳ ಕಾಮಗಾರಿಗೆ ಅನುಮೋದನೆ ಕೋರಿ ವಾರ್ಡ್‌ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:22-11-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ವಾರ್ಡ್‌ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:08-12-2010 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:08-12-2010 ರ ನಿರ್ಣಯವನ್ನು ಒಪ್ಪುತ್ತಾ, ಸರ್ಕಾರದ ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆಯಲು ಹಾಗೂ ಆರ್ಥಿಕ ಅನುದಾನಕ್ಕೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿ ಮಂಡಿಸಲು ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಿತು".

ಶ್ರೀ.ಪಿ.ಎನ್.ಸದಾಶಿವ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

.........................2

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:08-12-2010 ರ ನಿರ್ಣಯವನ್ನು ಒಪ್ಪುತ್ತಾ, ಸರ್ಕಾರದ ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆಯಲು ಹಾಗೂ ಆರ್ಥಿಕ ಅನುದಾನಕ್ಕೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿ ಮಂಡಿಸಲು ಆಯುಕ್ತರು ಕ್ರಮಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಿತು".

ಎಸ್.ಕೆ. ನಟರಾಜ
(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:30-12-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 17 (163)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಆಯುಕ್ತರ ಕಛೇರಿಯ ದಿನಾಂಕ:08-10-2010 ರ ಸುತ್ತೋಲೆಯಲ್ಲಿ 2010-11 ನೇ ಸಾಲಿನ ಆಯವ್ಯಯದಲ್ಲಿ ನಿಗಧಿಪಡಿಸಿರುವ ಅನುದಾನದ ವಾರ್ಡ್‌ವಾರು ಅನುದಾನದಲ್ಲಿ ವಾರ್ಡ್ ಸದಸ್ಯರು ಸೂಚಿಸುವ ಹಾಗೂ ವಾರ್ಡ್‌ವಾರು ನಿಗಧಿಪಡಿಸಿರುವ ಅನುದಾನದ ಮಿತಿಗೆ ಒಳಪಟ್ಟು ಅಗತ್ಯವಿರುವಂತಹ ಕಾಮಗಾರಿ ಕೆಲಸಗಳ ಕಾರ್ಯಕ್ರಮ ಪಟ್ಟಿ (Programme of Works) ಯನ್ನು ತಯಾರಿಸುವುದು. ಸದರಿ ಕಾರ್ಯಕ್ರಮ ಪಟ್ಟಿಯಲ್ಲಿ ಚರಂಡಿ ಹೂಳು ತೆಗೆಯುವುದು, ರಸ್ತೆ ಗುಂಡಿಗಳನ್ನು ಮುಚ್ಚುವುದು, ಸಿಲ್ಟ್ ಮತ್ತು ಟ್ರಾಕ್ಟರ್ ಕಾಮಗಾರಿಗಳು ಹಾಗೂ ಶೇ.22.75 ರ ಕಾಮಗಾರಿಗಳನ್ನು ಸಹ ಒಳಗೊಂಡಿರಬೇಕು. ಈ ಎಲ್ಲಾ ಕಾಮಗಾರಿಗಳಿಗೆ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆದು ಸಂಬಂಧಪಟ್ಟ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯುವಂತೆ ಸೂಚಿಸಲಾಗಿರುತ್ತದೆ. ಅದರಂತೆ, ಅಪರ ಆಯುಕ್ತರು (ರಾಜರಾಜೇಶ್ವರಿ ನಗರ ವಲಯ) ರವರು ರಾಜರಾಜೇಶ್ವರಿ ನಗರ ವಲಯದ ಬಿ.ಇ.ಎಂ.ಎಲ್. ಬಡಾವಣೆಯಲ್ಲಿ ರಂಗಮಂದಿರ ನಿರ್ಮಾಣ ಕಾಮಗಾರಿಯ ಪ್ರಸ್ತಾವನೆಯನ್ನು ಅನುಮೋದನೆಗೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾಪಿತ ಕಾಮಗಾರಿಗೆ 2009-10 ನೇ ಸಾಲಿನ ಆಯವ್ಯಯದಲ್ಲಿ ರೂ.150.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಲಾಗಿದ್ದು, 2010-11 ನೇ ಸಾಲಿನ ಆಯವ್ಯಯದಲ್ಲಿ ಬಾಲಣ್ಣ ರಂಗಮಂದಿರ ನಿರ್ಮಾಣಕ್ಕಾಗಿ ಒಟ್ಟು ರೂ.200.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ. ಈ ಮೇರೆಗೆ ಸದರಿ ಕಾಮಗಾರಿಗೆ ಕಾಮಗಾರಿ ಸಂಕೇತವನ್ನು ಸಹ ಪಡೆಯಲಾಗಿದ್ದು, ಈ ಕಾಮಗಾರಿಗೆ ಡಿಪಿಆರ್ ತಯಾರಿಸಲಾಗಿರುತ್ತದೆ ಹಾಗೂ ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.1034.00 ಲಕ್ಷಗಳಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ರಾಜರಾಜೇಶ್ವರಿ ನಗರ ವ್ಯಾಪ್ತಿಯಲ್ಲಿ ಬರುವ ಬಿ.ಇ.ಎಂ.ಎಲ್. ಬಡಾವಣೆಯಲ್ಲಿ ರಂಗಮಂದಿರ ನಿರ್ಮಾಣಕ್ಕಾಗಿ ರೂ.1034.00 ಲಕ್ಷಗಳ ಕಾಮಗಾರಿಗೆ ಅನುಮೋದನೆ ಕೋರಿ ವಾರ್ಡ್‌ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:22-11-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ವಾರ್ಡ್‌ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:08-12-2010 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:08-12-2010 ರ ನಿರ್ಣಯವನ್ನು ಒಪ್ಪುತ್ತಾ, ಸರ್ಕಾರದ ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆಯಲು ಹಾಗೂ ಆರ್ಥಿಕ ಅನುದಾನಕ್ಕೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿ ಮಂಡಿಸಲು ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಿತು".

ಶ್ರೀ.ಪಿ.ಎನ್.ಸದಾಶಿವ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

..........................2

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:08–12–2010 ರ ನಿರ್ಣಯವನ್ನು ಒಪ್ಪುತ್ತಾ, ಸರ್ಕಾರದ ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆಯಲು ಹಾಗೂ ಆರ್ಥಿಕ ಅನುದಾನಕ್ಕೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿ ಮಂಡಿಸಲು ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಿತು".

ಎಸ್.ಕೆ. ನಟರಾಜ

**(ಎಸ್.ಕೆ.ನಟರಾಜ)**
**ಮಹಾಪೌರರು**

## ದಿನಾಂಕ:29-12-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

### ವಿಷಯದ ಸಂಖ್ಯೆ: 18 (164)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಚಲ್ಲಘಟ್ಟ ಕಣಿವೆಯ ಎಸ್.ಕೆ.ಗಾರ್ಡನ್‌ನಲ್ಲಿರುವ 106 ಇನ್‌ಫಾಂಟ್ರಿ ಬೆಟಾಲಿಯನ್ ಜಾಗದ ಚೈ:1560 ರಿಂದ ಚೈ:1905 ಚ:200 ರವರೆಗೆ ಆರ್.ಸಿ.ಸಿ. "ಯು" ಮಾದರಿ ಮಳೆ ನೀರು ಚರಂಡಿ ನಿರ್ಮಿಸುವ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಕಾಮಗಾರಿಯ ಸಂಕೇತ ಪಡೆದು ಟೆಂಡರ್ ಕರೆಯಲಾಗಿರುತ್ತದೆ. ಅದರಂತೆ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಇಬ್ಬರೂ ಟೆಂಡರ್‌ದಾರರ ತಾಂತ್ರಿಕ ಬಿಡ್ ಸಿಂಧುವಾಗಿದ್ದು, ಸದರಿಯವರುಗಳ ಆರ್ಥಿಕ ಬಿಡ್‌ಗಳ ಮೌಲ್ಯಮಾಪನದಲ್ಲಿ ಶ್ರೀ. ಬಿ.ಎನ್.ಗಿರೀಶ್ ರವರು ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು, ಮೊತ್ತವು ಶೇಕಡ 49.98 ರಷ್ಟಿದ್ದು, ಇದನ್ನು 2007-08 ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಹೆಚ್ಚುವರಿಯಾಗಿರುತ್ತದೆ. ಗುತ್ತಿಗೆದಾರರು ನಮೂದಿಸಿರುವ ದರಗಳಿಗೆ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ತದನಂತರ ಗುತ್ತಿಗೆದಾರರು ಸಂಧಾನಕ್ಕೆ ಒಪ್ಪಿ, 2008-09 ನೇ ಸಾಲಿನ ಎರಡನೇ ತ್ರೈಮಾಸಿಕ ಪರಿಷ್ಕೃತ ಉಕ್ಕು ಮತ್ತು ಸಿಮೆಂಟ್ ದರಗಳಿಗೆ ಹೋಲಿಸಿದಂತೆ ಶೇಕಡ 14.99 ರಷ್ಟು ಹೆಚ್ಚುವರಿಗೆ ಕಾಮಗಾರಿ ನಿರ್ವಹಿಸುವುದಾಗಿ ಒಪ್ಪಿಗೆ ಸಹಿತ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ. ಅದನ್ನು ಪರಿಗಣಿಸಿ ಸರ್ಕಾರವು ಸದರಿ ಟೆಂಡರ್ ಅನುಮೋದನೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ನಿಯಮಗಳನ್ವಯ ಕ್ರಮ ಜರುಗಿಸಿ ಅನುಮೋದನೆ ನೀಡುವ ಕುರಿತು ನಿರ್ದೇಶಿಸಿ ಪ್ರಸ್ತಾವನೆಯನ್ನು ಹಿಂತಿರುಗಿಸಿರುತ್ತಾರೆ.

ಈ ಹಿನ್ನಲೆಯಲ್ಲಿ, ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ. ಬಿ.ಎನ್.ಗಿರೀಶ್ ರವರು ನಮೂದಿಸಿರುವ ಮೊತ್ತವನ್ನು 2008-09ನೇ ಸಾಲಿನ ಎರಡನೇ ತ್ರೈಮಾಸಿಕ ಪರಿಷ್ಕೃತ ಉಕ್ಕು ಮತ್ತು ಸಿಮೆಂಟ್ ದರಗಳಿಗೆ ಹೋಲಿಸಿದಾಗ ಬಂದಂತಹ ಶೇಕಡ 14.99 ರಷ್ಟು ಹೆಚ್ಚುವರಿ ದರಗಳು ಅಥವಾ ರೂ..4,47,06,039.00 (ರೂಪಾಯಿ ನಾಲ್ಕು ಕೋಟಿ ನಲವತ್ತೇಳು ಲಕ್ಷದ ಆರು ಸಾವಿರದ ಮೂವತ್ತೊಂಭತ್ತು ಮಾತ್ರ) ಗಳ ಟೆಂಡರ್‌ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:26-11-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:18-12-2010 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:18-12-2010 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

.........................2

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:18–12–2010 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:29-12-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ: 170/2010-11

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 198 ವಾರ್ಡ್‌ಗಳನ್ನು ಒಳಗೊಂಡ ಅತಿ ವಿಸ್ತಾರವಾದ ಪ್ರದೇಶವನ್ನು ಹೊಂದಿದ್ದು, ನಗರ ಪಾಲಿಕೆ ಸದಸ್ಯರುಗಳು ತಮ್ಮ ವಾರ್ಡ್‌ನ ನಾಗರೀಕರುಗಳ ವೈದ್ಯಕೀಯ ಪರಿಹಾರಕ್ಕಾಗಿ ಕೋರಿಕೆ ಸಲ್ಲಿಸುತ್ತಿದ್ದು ಹಾಗೂ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಸಹ ವೈದ್ಯಕೀಯ ಪರಿಹಾರಕ್ಕಾಗಿ ಮನವಿ ಸಲ್ಲಿಸಲಾಗುತ್ತಿದ್ದು, ಪಾಲಿಕೆ ಸದಸ್ಯರುಗಳ ಹಾಗೂ ಸಾರ್ವಜನಿಕರ ಕೋರಿಕೆ ಹಿತದೃಷ್ಟಿಯಿಂದ 2010-11ನೇ ಸಾಲಿನ ಆಯವ್ಯಯದ ಕೌನ್ಸಿಲ್-ಸಾಮಾನ್ಯ ವೆಚ್ಚಗಳು-ಪೂಜ್ಯ ಮಹಾಪೌರರು ಆಜ್ಞೆ ಮಾಡಿದ ಕಾಮಗಾರಿಗಳು ಶೀರ್ಷಿಕೆ ಅಡಿಯಲ್ಲಿ ಕಾದಿರಿಸಿರುವ ರೂ.150.00 ಕೋಟಿ ಅನುದಾನದಲ್ಲಿ ರೂ.1.00 ಕೋಟಿಗಳನ್ನು ಕಟಾವು ಮಾಡಿಕೊಂಡು, ಕಟಾವು ಮಾಡಿಕೊಂಡ ಮೊತ್ತವನ್ನು 2010-11ನೇ ಸಾಲಿನ ಆಯವ್ಯಯದ-ಕೌನ್ಸಿಲ್-ಸಾಮಾನ್ಯ ವೆಚ್ಚಗಳು-ಪೂಜ್ಯ ಮಹಾಪೌರರ ವಿವೇಚನಾಧೀನಕ್ಕೆ ಒಳಪಟ್ಟು ವೈದ್ಯಕೀಯ ಅನುದಾನಗಳ ಶೀರ್ಷಿಕೆಗೆ ವರ್ಗಾಯಿಸುವ ಮೂಲಕ ಮರು ಹೊಂದಾಣಿಕೆ ಮಾಡಿಕೊಳ್ಳುವುದೆಂದು ಸಭೆಯು ತೀರ್ಮಾನಿಸಿತು.

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 198 ವಾರ್ಡ್‌ಗಳನ್ನು ಒಳಗೊಂಡ ಅತಿ ವಿಸ್ತಾರವಾದ ಪ್ರದೇಶವನ್ನು ಹೊಂದಿದ್ದು, ನಗರ ಪಾಲಿಕೆ ಸದಸ್ಯರುಗಳು ತಮ್ಮ ವಾರ್ಡ್‌ನ ನಾಗರೀಕರುಗಳ ವೈದ್ಯಕೀಯ ಪರಿಹಾರಕ್ಕಾಗಿ ಕೋರಿಕೆ ಸಲ್ಲಿಸುತ್ತಿದ್ದು ಹಾಗೂ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಸಹ ವೈದ್ಯಕೀಯ ಪರಿಹಾರಕ್ಕಾಗಿ ಮನವಿ ಸಲ್ಲಿಸಲಾಗುತ್ತಿದ್ದು, ಪಾಲಿಕೆ ಸದಸ್ಯರುಗಳ ಹಾಗೂ ಸಾರ್ವಜನಿಕರ ಕೋರಿಕೆ ಹಿತದೃಷ್ಟಿಯಿಂದ 2010-11ನೇ ಸಾಲಿನ ಆಯವ್ಯಯದ ಕೌನ್ಸಿಲ್-ಸಾಮಾನ್ಯ ವೆಚ್ಚಗಳು-ಪೂಜ್ಯ ಮಹಾಪೌರರು ಆಜ್ಞೆ ಮಾಡಿದ ಕಾಮಗಾರಿಗಳು ಶೀರ್ಷಿಕೆ ಅಡಿಯಲ್ಲಿ ಕಾದಿರಿಸಿರುವ ರೂ.150.00 ಕೋಟಿ ಅನುದಾನದಲ್ಲಿ ರೂ.1.00 ಕೋಟಿಗಳನ್ನು

..........................2

ಕಟಾವು ಮಾಡಿಕೊಂಡು, ಕಟಾವು ಮಾಡಿಕೊಂಡ ಮೊತ್ತವನ್ನು 2010-11ನೇ ಸಾಲಿನ ಆಯವ್ಯಯದ-ಕೌನ್ಸಿಲ್-ಸಾಮಾನ್ಯ ವೆಚ್ಚಗಳು-ಪೂಜ್ಯ ಮಹಾಪೌರರ ವಿವೇಚನಾಧೀನಕ್ಕೆ ಒಳಪಟ್ಟು ವೈದ್ಯಕೀಯ ಅನುದಾನಗಳ ಶೀರ್ಷಿಕೆಗೆ ವರ್ಗಾಯಿಸುವ ಮೂಲಕ ಮರು ಹೊಂದಾಣಿಕೆ ಮಾಡಿಕೊಳ್ಳುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

ಎಸ್.ಕೆ. ನಟರಾಜ

**(ಎಸ್.ಕೆ. ನಟರಾಜ)**
ಮಹಾಪೌರರು

# ದಿನಾಂಕ:29-12-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ: 171/2010-11

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ವಾರ್ಡ್ ಸಂಖ್ಯೆ:168, ಪಟ್ಟಾಭಿರಾಮನಗರ ವ್ಯಾಪ್ತಿಯ ಜಯನಗರ 4ನೇ 'ಟಿ' ಬಡಾವಣೆಯ 28ನೇ ಮುಖ್ಯ ರಸ್ತೆ ಹಾಗೂ 35ನೇ ಅಡ್ಡ ರಸ್ತೆಗಳ ನಡುವೆ ಇರುವ "ವಿಶ್ರಾಂತಿ ವನ" ಕ್ಕೆ ಸದರಿ ವಿಶ್ರಾಂತಿ ವನದ ಪಕ್ಕದಲ್ಲೇ ವಾಸವಾಗಿದ್ದ ಕನ್ನಡ ಖ್ಯಾತ ಚಲನಚಿತ್ರ ನಟರಾದ ದಿವಂಗತ ಡಾ॥ ವಿಷ್ಣುವರ್ಧನ್‌ರವರ ಪುಣ್ಯ ಸ್ಮರಣೆಗಾಗಿ "ಡಾ॥ ವಿಷ್ಣುವರ್ಧನ ವಿಶ್ರಾಂತಿ ವನ" ಎಂದು ನಾಮಕರಣ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಆಯುಕ್ತರವರಿಗೆ ಸೂಚಿಸಲು ಸಭೆಯು ತೀರ್ಮಾನಿಸಿತು.

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ವಾರ್ಡ್ ಸಂಖ್ಯೆ:168, ಪಟ್ಟಾಭಿರಾಮನಗರ ವ್ಯಾಪ್ತಿಯ ಜಯನಗರ 4ನೇ 'ಟಿ' ಬಡಾವಣೆಯ 28ನೇ ಮುಖ್ಯ ರಸ್ತೆ ಹಾಗೂ 35ನೇ ಅಡ್ಡ ರಸ್ತೆಗಳ ನಡುವೆ ಇರುವ "ವಿಶ್ರಾಂತಿ ವನ" ಕ್ಕೆ, ಸದರಿ ವಿಶ್ರಾಂತಿ ವನದ ಪಕ್ಕದಲ್ಲೇ ವಾಸವಾಗಿದ್ದ ಕನ್ನಡ ಖ್ಯಾತ ಚಲನಚಿತ್ರ ನಟರಾದ ದಿವಂಗತ ಡಾ॥ ವಿಷ್ಣುವರ್ಧನ್ ರವರ ಪುಣ್ಯ ಸ್ಮರಣೆಗಾಗಿ "ಡಾ॥ ವಿಷ್ಣುವರ್ಧನ ವಿಶ್ರಾಂತಿ ವನ" ಎಂದು ನಾಮಕರಣ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಆಯುಕ್ತರವರಿಗೆ ಸೂಚಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

ಎಸ್.ಕೆ. ನಟರಾಜ

(ಎಸ್.ಕೆ. ನಟರಾಜ)
ಮಹಾಪೌರರು

# ದಿನಾಂಕ:29–12–2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ: 172/2010–11

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಕನ್ನಡ ಖ್ಯಾತ ಚಲನಚಿತ್ರ ನಟರಾದ ದಿವಂಗತ ಡಾ॥ ವಿಷ್ಣುವರ್ಧನ್ ರವರ ಪುಣ್ಯ ಸ್ಮರಣೆಗಾಗಿ ಸರ್ಜಾಪುರದಿಂದ ಕೆಂಗೇರಿ ಮಾರ್ಗಕ್ಕೆ "ಡಾ॥ ವಿಷ್ಣುವರ್ಧನ ರಸ್ತೆ" ಎಂದು ನಾಮಕರಣ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಆಯುಕ್ತರವರಿಗೆ ಸೂಚಿಸಲು ಸಭೆಯು ತೀರ್ಮಾನಿಸಿತು.

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಕನ್ನಡ ಖ್ಯಾತ ಚಲನಚಿತ್ರ ನಟರಾದ ದಿವಂಗತ ಡಾ॥ ವಿಷ್ಣುವರ್ಧನ್ ರವರ ಪುಣ್ಯ ಸ್ಮರಣೆಗಾಗಿ ಸರ್ಜಾಪುರದಿಂದ ಕೆಂಗೇರಿ ಮಾರ್ಗಕ್ಕೆ "ಡಾ॥ ವಿಷ್ಣುವರ್ಧನ ರಸ್ತೆ" ಎಂದು ನಾಮಕರಣ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಆಯುಕ್ತರವರಿಗೆ ಸೂಚಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ. ನಟರಾಜ)
ಮಹಾಪೌರರು

# ದಿನಾಂಕ:29-12-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ: 173/2010-11

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

4ನೇ ದರ್ಜೆ ನೌಕರರ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಾವಳಿ ನಿಯಮದಲ್ಲಿ ಬದಲಾವಣೆ ತರಬೇಕಿದ್ದು, ಗರಿಷ್ಠ ವಿದ್ಯಾರ್ಹತೆ ನಿಗಧಿಪಡಿಸುವುದು ಅವಶ್ಯವಿರುತ್ತದೆ. ನೇರ ನೇಮಕಾತಿ ಸಂದರ್ಭದಲ್ಲಿ ವೇತನ ಶ್ರೇಣಿ ರೂ.4800-7275 ಹುದ್ದೆಗಳಿಗೆ (Peons, Maalis, Special Gangman, MC Gangman, ALO Gangman, Disinfectant Gangman, Sweepers (Poura Karmika) ಕನಿಷ್ಠ 5ನೇ ತರಗತಿ ಉತ್ತೀರ್ಣ, ಗರಿಷ್ಠ 7ನೇ ತರಗತಿ ಉತ್ತೀರ್ಣರಾಗಿರಬೇಕು ಹಾಗೂ ವೇತನ ಶ್ರೇಣಿ ರೂ.5200-8200 ರ ನಾಲ್ಕನೇ ದರ್ಜೆ ನೌಕರರಲ್ಲಿ ಲ್ಯಾಬ್ ಅಟೆಂಡರ್ಸ್ ಮತ್ತು ಸಮಾನಾಂತರ ಹುದ್ದೆಗಳಿಗೆ ಕನಿಷ್ಠ 7ನೇ ತರಗತಿ ಉತ್ತೀರ್ಣ ಹಾಗೂ ಗರಿಷ್ಠ 9ನೇ ತರಗತಿ ಉತ್ತೀರ್ಣರಾಗಿರಬೇಕೆಂಬ ಷರತ್ತುಗಳನ್ನು ಅಳವಡಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ಕೈಗೊಂಡ ನಿರ್ಣಯವನ್ನು ಒಪ್ಪುತ್ತಾ, ಸರ್ಕಾರದ ಅನುಮೋದನೆಗೆ ಕಳುಹಿಸುವುದು.

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "4ನೇ ದರ್ಜೆ ನೌಕರರ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಾವಳಿ ನಿಯಮದಲ್ಲಿ ಬದಲಾವಣೆ ತರಬೇಕಿದ್ದು, ಗರಿಷ್ಠ ವಿದ್ಯಾರ್ಹತೆ ನಿಗಧಿಪಡಿಸುವುದು ಅವಶ್ಯವಿರುತ್ತದೆ. ನೇರ ನೇಮಕಾತಿ ಸಂದರ್ಭದಲ್ಲಿ ವೇತನ ಶ್ರೇಣಿ ರೂ.4800-7275 ಹುದ್ದೆಗಳಿಗೆ (Peons, Maalis, Special Gangman, MC Gangman, ALO Gangman, Disinfectant Gangman, Sweepers (Poura Karmika) ಕನಿಷ್ಠ 5ನೇ ತರಗತಿ ಉತ್ತೀರ್ಣ, ಗರಿಷ್ಠ 7ನೇ ತರಗತಿ ಉತ್ತೀರ್ಣರಾಗಿರಬೇಕು ಹಾಗೂ ವೇತನ ಶ್ರೇಣಿ ರೂ.5200-8200 ರ ನಾಲ್ಕನೇ ದರ್ಜೆ ನೌಕರರಲ್ಲಿ ಲ್ಯಾಬ್ ಅಟೆಂಡರ್ಸ್ ಮತ್ತು ಸಮಾನಾಂತರ ಹುದ್ದೆಗಳಿಗೆ ಕನಿಷ್ಠ 7ನೇ ತರಗತಿ ಉತ್ತೀರ್ಣ ಹಾಗೂ ಗರಿಷ್ಠ 9ನೇ ತರಗತಿ

..........................2

ಉತ್ತೀರ್ಣರಾಗಿರಬೇಕೆಂಬ ಷರತ್ತುಗಳನ್ನು ಅಳವಡಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ಕೈಗೊಂಡ ನಿರ್ಣಯವನ್ನು ಒಪ್ಪುತ್ತಾ, ಸರ್ಕಾರದ ಅನುಮೋದನೆಗೆ ಕಳುಹಿಸಲು ಸಭೆಯು ತೀರ್ಮಾನಿಸಲಾಯಿತು".

ಎಸ್.ಕೆ. ನಟರಾಜ್

**(ಎಸ್.ಕೆ. ನಟರಾಜ)**
ಮಹಾಪೌರರು

# ದಿನಾಂಕ:29–12–2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ: 174/2010–11

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

2010–11ನೇ ಸಾಲಿನ ಆಯವ್ಯಯದಲ್ಲಿ ಕೌನ್ಸಿಲ್–ಸಾಮಾನ್ಯ ವೆಚ್ಚಗಳು ಶೀರ್ಷಿಕೆ ಅಡಿಯಲ್ಲಿ ಕಾರ್ಪೋರೇಟರ್‌ಗಳಿಗೆ ವೈದ್ಯಕೀಯ ವಿಮೆ ಎಂಬುದನ್ನು ಹಾಲಿ ಕಾರ್ಪೋರೇಟರ್ ಹಾಗೂ ಅವರ ಕುಟುಂಬ ಸದಸ್ಯರುಗಳು ಒಳಗೊಂಡಂತೆ ವೈದ್ಯಕೀಯ ವೆಚ್ಚಕ್ಕಾಗಿ ಎಂದು ತಿದ್ದುಪಡಿ ಮಾಡಿಕೊಳ್ಳುವುದು.

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "2010–11ನೇ ಸಾಲಿನ ಆಯವ್ಯಯದಲ್ಲಿ ಕೌನ್ಸಿಲ್–ಸಾಮಾನ್ಯ ವೆಚ್ಚಗಳು ಶೀರ್ಷಿಕೆ ಅಡಿಯಲ್ಲಿ ಕಾರ್ಪೋರೇಟರ್‌ಗಳಿಗೆ ವೈದ್ಯಕೀಯ ವಿಮೆ ಎಂಬುದನ್ನು ಹಾಲಿ ಕಾರ್ಪೋರೇಟರ್ ಹಾಗೂ ಅವರ ಕುಟುಂಬ ಸದಸ್ಯರುಗಳು ಒಳಗೊಂಡಂತೆ ವೈದ್ಯಕೀಯ ವೆಚ್ಚಕ್ಕಾಗಿ ಎಂದು ತಿದ್ದುಪಡಿ ಮಾಡಿಕೊಳ್ಳುವುದು ಎಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ. ನಟರಾಜ)
ಮಹಾಪೌರರು

# ದಿನಾಂಕ:29-12-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ: 165/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಿಕ್ಷಣ ಇಲಾಖೆಯ ಅಡಿ 78 ಶಿಶುವಿಹಾರಗಳು, 12 ಪ್ರಾಥಮಿಕ ಶಾಲೆಗಳು, 33 ಪ್ರೌಢಶಾಲೆಗಳು ಹಾಗೂ 13 ಸಂಯುಕ್ತ ಪದವಿ ಪೂರ್ವ ಕಾಲೇಜುಗಳು ಕಾರ್ಯ ನಿರ್ವಹಿಸುತ್ತಿದ್ದು, ಇವುಗಳಲ್ಲಿ ಹಲವಾರು ಹುದ್ದೆಗಳು ನಿವೃತ್ತಿ, ಮುಂಬಡ್ತಿ, ಮರಣ ಇತ್ಯಾದಿ ಕಾರಣಗಳಿಂದ ಖಾಲಿಯಾಗಿದ್ದು, ಪ್ರಸ್ತುತ 60 ವರ್ಷಗಳ ನಿವೃತ್ತಿಯಿಂದ ಇತ್ತೀಚೆಗೆ ಹಲವಾರು ಹುದ್ದೆಗಳು ಖಾಲಿಯಾಗುತ್ತಿವೆ.

ಮುಂದುವರೆದು ಪ್ರಸ್ತುತ ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ಮಂಜೂರಾತಿಯಾಗಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಹುದ್ದೆಗಳ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರ ಸಂ. | ಶಾಲಾ ವರ್ಗ | ಪದನಾಮ | ಮಂಜೂರಾತಿ ಹುದ್ದೆಗಳು | ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|---|
| 1 | ಶಿಶುವಿಹಾರ | ಸಹ ಶಿಕ್ಷಕರು | 160 | 58 | 102 |
| 2 | ಪ್ರಾಥಮಿಕ ಶಾಲೆ | ಸಹ ಶಿಕ್ಷಕರು | 149 } 334 | 51 } 133 | 98 } 201 |
| 3 | ಪ್ರೌಢಶಾಲೆ | ಮುಖ್ಯೋಪಾಧ್ಯಾಯರು | 25 | 24 | 1 |
| | | ಕನ್ನಡ | 43 | 14 | 29 |
| | | ತಮಿಳು | 16 | 1 | 15 |
| | | ತೆಲುಗು | 3 | 1 | 2 |
| | | ಉರ್ದು | 7 | 3 | 4 |
| | | ಹಿಂದಿ | 29 | 17 | 12 |
| | | ಕಲಾ | 100 | 32 | 68 |
| | | ಪಿ.ಸಿ.ಎಂ. | 93 | 44 | 49 |
| | | ಸಿ.ಬಿ.ಜೆಡ್ | 41 | 15 | 26 |
| | | ಸಂಸ್ಕೃತ | 4 | 1 | 3 |
| | | ದೈಹಿಕ | 36 | 13 | 23 |
| | | ತೋಟಗಾರಿಕೆ | 7 | 4 | 3 |
| | | ಕರಕುಶಲ | 22 | 2 | 20 |
| | | ಚಿತ್ರಕಲಾ | 17 | 5 | 12 |
| | | ಸಂಗೀತ | 5 | 0 | 5 |
| ಒಟ್ಟು | | | **423** | **152** | **271** |
| 4 | ಕಿರಿಯ ಕಾಲೇಜು | ಪ್ರಾಂಶುಪಾಲರು | 11 | 11 | 0 |
| | | ಉಪನ್ಯಾಸಕರು | 129 | 122 | 7 |
| ಒಟ್ಟು | | | **140** | **133** | **7** |

ಪಾಲಿಕೆಯ ಶಾಲಾ/ಕಾಲೇಜುಗಳಿಗೆ ಅವಶ್ಯಕವಿರುವ 89 ಶಿಶುವಿಹಾರ ಶಿಕ್ಷಕರು, 90 ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ 122 ಪ್ರೌಢಶಾಲಾ ಶಿಕ್ಷಕರ ಒಟ್ಟು 301 ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಸರ್ಕಾರದಿಂದ ಮಂಜೂರಾತಿ ಬಂದಿದ್ದು, ಅದರಲ್ಲಿ ಈಗಾಗಲೇ 23 ಶಿಶುವಿಹಾರ ಶಿಕ್ಷಕರು, 19 ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ 4 ಪ್ರಾಥಮಿಕ ಶಾಲಾ ದೈಹಿಕ ಶಿಕ್ಷಕರನ್ನು ಬ್ಯಾಕ್‌ಲಾಗ್ ಅಡಿಯಲ್ಲಿ ನೇಮಕ ಮಾಡಿಕೊಳ್ಳುವ ಪ್ರಸ್ತಾವನೆಯು ಪ್ರಗತಿಯಲ್ಲಿರುವುದರಿಂದ, ಸದರಿ ಹುದ್ದೆಗಳನ್ನು ಸರ್ಕಾರದಿಂದ ಮಂಜೂರಾಗಿ ಬಂದಿರುವ ಹುದ್ದೆಗಳಲ್ಲಿ ಕಳೆದು ಉಳಿದಂತೆ 66 ಶಿಶುವಿಹಾರ ಶಿಕ್ಷಕರು, 66 ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ 1 ಪ್ರಾಥಮಿಕ ಶಾಲಾ ದೈಹಿಕ ಶಿಕ್ಷಕರು, 122 ಪ್ರೌಢಶಾಲಾ ಶಿಕ್ಷಕರ ಒಟ್ಟು 255 ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲು ಈ ಕೆಳಕಂಡಂತೆ ನೇಮಕಾತಿ ವಿಭಾಗಕ್ಕೆ ಕಳುಹಿಸಲಾಗಿದ್ದು, ಸದರಿ ಪ್ರಕ್ರಿಯೆಯು ನೇಮಕಾತಿ ವಿಭಾಗದಲ್ಲಿ ಪ್ರಸ್ತಾವನೆಯಲ್ಲಿರುತ್ತದೆ. ಪಾಲಿಕೆಯಿಂದ ಇದುವರೆವಿಗೂ ಖಾಲಿ ಹುದ್ದೆಗಳನ್ನು ನೇಮಕ ಮಾಡಿರುವುದಿಲ್ಲ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹೊರಗುತ್ತಿಗೆ ಆಧಾರದ ಮೇಲೆ ಕಳೆದ 4-5 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುತ್ತಾರೆ.

<table>
<tr><th>ಕ್ರ. ಸಂ.</th><th>ಶಾಲಾ ವರ್ಗ</th><th>ಪದನಾಮ</th><th>ಪ್ರಸ್ತುತ ಭರ್ತಿ ಮಾಡಬೇಕಾಗಿರುವ ಸಂಖ್ಯೆ</th><th>ಬ್ಯಾಕ್‌ಲಾಗ್ ಅಡಿಯಲ್ಲಿ ಕರೆದಿರುವ ಹುದ್ದೆಗಳ ಸಂಖ್ಯೆ</th></tr>
<tr><td>1</td><td>ಶಿಶುವಿಹಾರ</td><td>ಸಹ ಶಿಕ್ಷಕರು</td><td>66</td><td>23</td></tr>
<tr><td rowspan="2">2</td><td rowspan="2">ಪ್ರಾಥಮಿಕ ಶಾಲೆ</td><td>ಸಹ ಶಿಕ್ಷಕರು</td><td>66</td><td>19</td></tr>
<tr><td>ದೈಹಿಕ ಶಿಕ್ಷಕರು</td><td>1</td><td>4</td></tr>
<tr><td rowspan="9">3</td><td rowspan="9">ಪ್ರೌಢಶಾಲೆ</td><td>ಕನ್ನಡ</td><td>20</td><td></td></tr>
<tr><td>ತಮಿಳು</td><td>8</td><td></td></tr>
<tr><td>ತೆಲುಗು</td><td>1</td><td></td></tr>
<tr><td>ಉರ್ದು</td><td>3</td><td></td></tr>
<tr><td>ಹಿಂದಿ</td><td>8</td><td></td></tr>
<tr><td>ಕಲಾ</td><td>30</td><td></td></tr>
<tr><td>ಪಿ.ಸಿ.ಎಂ.</td><td>25</td><td></td></tr>
<tr><td>ಸಿ.ಬಿ.ಜೆಡ್.</td><td>12</td><td></td></tr>
<tr><td>ದೈಹಿಕ</td><td>15</td><td></td></tr>
<tr><td colspan="3">ಒಟ್ಟು</td><td>255</td><td></td></tr>
</table>

ದಿನಾಂಕ:14-12-2010 ರಂದು ಶಿಕ್ಷಣ ಮತ್ತು ಕ್ರೀಡಾ ಸ್ಥಾಯಿ ಸಮಿತಿಯಲ್ಲಿ ಹಾಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 301 ಶಿಕ್ಷಕರ ಹುದ್ದೆಗಳು ಖಾಲಿ ಇದ್ದು, ಇದರಿಂದಾಗಿ ವಿದ್ಯಾರ್ಥಿಗಳ ಪಾಠ-ಪ್ರವಚನಗಳಿಗೆ ತೊಂದರೆಯಾಗುತ್ತಿದ್ದು, ಸದರಿ ಹುದ್ದೆಗಳನ್ನು ಅತೀ ಶೀಘ್ರವಾಗಿ ಭರ್ತಿ ಮಾಡಬೇಕಾಗಿರುತ್ತದೆ. ತಪ್ಪಿದ್ದಲ್ಲಿ, ಬರುವ ಶೈಕ್ಷಣಿಕ ವರ್ಷದಲ್ಲಿ ಶಾಲಾ/ಕಾಲೇಜುಗಳನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಲು ಸಾಧ್ಯವಾಗದ ಪರಿಸ್ಥಿತಿ ಉಂಟಾಗುವುದನ್ನು ಮನಗೊಂಡು, ಸಮಿತಿಯ ಎಲ್ಲಾ ಸದಸ್ಯರು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಅಗತ್ಯವಿರುವ ಎಲ್ಲಾ ಪ್ರಕ್ರಿಯೆಗಳನ್ನು 2011 ರ ಮಾರ್ಚ್ 31ರ ಒಳಗಾಗಿ ಪೂರೈಸಿ ಏಪ್ರಿಲ್ 2011 ರ ಮಾಹೆಯಿಂದ ಹೊಸದಾಗಿ ನೇಮಕಾತಿ ಹೊಂದಿರುವ ಶಿಕ್ಷಕರು ಕಾರ್ಯನಿರ್ವಹಿಸುವಂತಾಗಬೇಕು. ಈಗಾಗಲೇ ನೇಮಕಾತಿ ಸಮಿತಿಯನ್ನು ರಚಿಸುವಂತೆ ಸರ್ಕಾರಕ್ಕೆ

..........................3

ಪ್ರಸ್ತಾವನೆಯನ್ನು ಕಳುಹಿಸಿರುವ ಸಂಗತಿಯು ಸಮಿತಿಯ ಗಮನಕ್ಕೆ ಬಂದಿದ್ದು, ಅಂದರೆ, ಸದರಿ ಸಮಿತಿಯಿಂದ ನೇಮಕಾತಿ ರಚನೆಯು ವಿಳಂಭವಾಗುವ ಸಾಧ್ಯತೆ ಇರುವುದರಿಂದ ಖಾಲಿ ಇರುವ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗ ಮುಖಾಂತರ ಅಥವಾ ಉದ್ಯೋಗ ವಿನಿಮಯ ಕೇಂದ್ರ ಮುಖಾಂತರ ನೇಮಕಾತಿಗೆ ಕ್ರಮ ತೆಗೆದುಕೊಳ್ಳುವುದೆಂದು ಹಾಗೂ ಹಾಲಿ ನಗರಪಾಲಿಕೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಸುಮಾರು 4-5 ವರ್ಷಗಳಿಂದ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ನೇಮಕಾತಿ ಸಮಯದಲ್ಲಿ ಶೇ.10 ರಷ್ಟು ವೈಟೇಜ್ ನೀಡಿ, ಪರಿಗಣಿಸಬಹುದೆಂದು ತೀರ್ಮಾನಿಸಿದ್ದು, ಈ ಎಲ್ಲಾ ಪ್ರಕ್ರಿಯೆಗಳು ಮಾರ್ಚ್ 2010 ರ ಒಳಗಾಗಿ ಪೂರ್ಣಗೊಳಿಸಬೇಕಾಗಿರುವುದರಿಂದ, ಈ ಬಗ್ಗೆ ಕೂಡಲೇ ಕ್ರಮ ತೆಗೆದುಕೊಂಡು ಟಿಪ್ಪಣಿಯನ್ನು ಅನುಮೋದನೆಗಾಗಿ ನಗರಪಾಲಿಕೆ ಸಭೆಯ ಮುಂದೆ ಮಂಡಿಸುವಂತೆ ಆಯುಕ್ತರವರನ್ನು ಕೋರಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಅವಶ್ಯಕವಿರುವ 301 ಶಿಕ್ಷಕರನ್ನು ಶೀಘ್ರ ನೇಮಕಾತಿ ಮಾಡಿಕೊಳ್ಳುವ ಕುರಿತು ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:21-12-2010 ರ ಟಿಪ್ಪಣಿ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:21-12-2010 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**<u>ನಿರ್ಣಯ:</u>** "ಆಯುಕ್ತರವರ ದಿನಾಂಕ:21-12-2010ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು

## ದಿನಾಂಕ:29-12-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ: 166/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಿಕ್ಷಣ ಇಲಾಖೆಯ ಅಡಿ 78 ಶಿಶುವಿಹಾರಗಳು, 12 ಪ್ರಾಥಮಿಕ ಶಾಲೆಗಳು, 33 ಪ್ರೌಢಶಾಲೆಗಳು ಹಾಗೂ 13 ಸಂಯುಕ್ತ ಪದವಿ ಪೂರ್ವ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ.

ಸರ್ಕಾರದ ಮಟ್ಟದಲ್ಲಿ ಹಾಲಿ ಪ್ರತಿ ಶಾಲೆಗೂ ಶಾಲಾ ಅಭಿವೃದ್ಧಿ ಸಮಿತಿ ರಚಿಸಲಾಗಿದ್ದು, ಅದೇ ಮಾದರಿಯಲ್ಲಿ ಪ್ರತಿ ವಾರ್ಡ್‌ಗೂ ಸಂಬಂಧಪಟ್ಟ ವಾರ್ಡ್ ಸದಸ್ಯರ ಅಧ್ಯಕ್ಷತೆಯಲ್ಲಿ ಶಾಲಾಭಿವೃದ್ಧಿ ಸಮಿತಿಯನ್ನು ರಚಿಸಲು ಪ್ರಸ್ತಾಪಿಸಲಾಗಿದ್ದು, ಈ ಬಗ್ಗೆ ಸಮಿತಿಯಲ್ಲಿ ಸುದೀರ್ಘವಾಗಿ ಚರ್ಚೆ ನಡೆಸಲಾಗಿದ್ದು, ಇದಕ್ಕೆ ಎಲ್ಲಾ ಸದಸ್ಯರು ತಮ್ಮ ಸಮ್ಮತಿಯನ್ನು ಸೂಚಿಸಿದ್ದು, ಸದರಿ ಸಮಿತಿಯಲ್ಲಿ 11 ಜನ ಸದಸ್ಯರು ಮೀರದಂತೆ, ಇದರಲ್ಲಿ ಪೋಲೀಸ್ ಇನ್ಸ್‌ಪೆಕ್ಟರ್, ಶಾಲಾ ಮುಖ್ಯಸ್ಥರು, ವಿದ್ಯಾರ್ಥಿ ಪ್ರತಿನಿಧಿಗಳನ್ನೊಳಗೊಂಡ ಹಾಗೂ ಆ ಪ್ರದೇಶದ ಪ್ರಮುಖ ವ್ಯಕ್ತಿಗಳು ಸದರಿ ಅಭಿವೃದ್ಧಿ ಸಮಿತಿಯಲ್ಲಿ ಇರುವುದೆಂದು ಹಾಗೂ ವಾರ್ಡ್ ಸದಸ್ಯರೇ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಾ, ಶಾಲಾ ಕಟ್ಟಡವನ್ನು ಆಕರ್ಷಿಸುವ ರೀತಿಯಲ್ಲಿ ಬಣ್ಣದೊಂದಿಗೆ ತಮ್ಮ ಶಾಲೆ ಎಂಬ ಭಾವನೆಗಳೊಂದಿಗೆ, ಅನುದಾನದಲ್ಲಿ ಶೇ.10 ರಷ್ಟು ಅನುದಾನವನ್ನು ಶಾಲಾಭಿವೃದ್ಧಿಗೆ ಮೀಸಲಿಡುವಂತೆ, ಮಾನ್ಯ ಸದಸ್ಯರುಗಳು ಸಲಹೆಯನ್ನು ನೀಡಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲಾ/ಕಾಲೇಜುಗಳಿಗೆ ಶೈಕ್ಷಣಿಕ ಗುಣಮಟ್ಟ/ಅಭಿವೃದ್ಧಿ ಮತ್ತು ಮೂಲಭೂತ ಸೌಕರ್ಯ ಒದಗಿಸಲು ವಾರ್ಡ್ ಮಟ್ಟದಲ್ಲಿ ಅಭಿವೃದ್ಧಿ ಸಮಿತಿ ರಚನೆ ಮಾಡಲು ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:21-12-2010 ರ ಟಿಪ್ಪಣಿ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:21-12-2010 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ದಿನಾಂಕ:21-12-2010ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:29–12–2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ: 167/2010–11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಿಕ್ಷಣ ಇಲಾಖೆಯ ಅಡಿ 78 ಶಿಶುವಿಹಾರಗಳು, 12 ಪ್ರಾಥಮಿಕ ಶಾಲೆಗಳು ಮತ್ತು 33 ಪ್ರೌಢಶಾಲೆಗಳು ಹಾಗೂ 13 ಸಂಯುಕ್ತ ಪದವಿ ಪೂರ್ವ ಕಾಲೇಜುಗಳನ್ನು ನಡೆಸಲಾಗುತ್ತಿದ್ದು, ಸದರಿ ಕಾಲೇಜುಗಳಲ್ಲಿ ಹೆಚ್ಚಿನ ಮಟ್ಟಿಗೆ ಬಡ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಪಿ.ಯು.ಸಿ. ನಂತರದ ವಿದ್ಯಾಭ್ಯಾಸಕ್ಕೆ ಅನಾನುಕೂಲವಾಗುತ್ತಿರುವುದು ಸಮಿತಿಯ ಗಮನಕ್ಕೆ ಬಂದಿದ್ದು, ಈ ದಿಸೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರಥಮ ಬಾರಿಗೆ ಒಂದು ಪದವಿ ಕಾಲೇಜನ್ನು ತೆರೆಯುವುದು ಸೂಕ್ತವೆಂದು ಹಾಗೂ ಇದಕ್ಕೆ ಸಂಬಂಧಪಟ್ಟ ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಳ್ಳುವ ಜವಾಬ್ದಾರಿಯನ್ನು ಶಿಕ್ಷಣಾಧಿಕಾರಿ ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿಗಳು ಕೈಗೊಳ್ಳುವುದೆಂದು ಸಭೆಯಲ್ಲಿ ಹಾಜರಿದ್ದ, ಶ್ರೀಮತಿ ಸುಕಂದಾ ರಾಮಚಂದ್ರರೆಡ್ಡಿ, ಶ್ರೀಮತಿ ರೂಪಾದೇವಿ, ಶ್ರೀಮತಿ ಸವಿತಾ ರಮೇಶ್, ಶ್ರೀಮತಿ ದೇವಿಕಾರಾಣಿ ಶ್ರೀಧರ್, ಶ್ರೀಮತಿ ಕೆ.ಪೂರ್ಣಿಮ, ಶ್ರೀಮತಿ ಇಂದಿರಾ, ಶ್ರೀಮತಿ ನಾಜೀನಿ ಬೇಗಂ ಹಾಗೂ ಎಂ.ಮುನಿಸ್ವಾಮಿ ರವರುಗಳು ಒಟ್ಟಾರೆ ಅಭಿಪ್ರಾಯವನ್ನು ಸೂಚಿಸಿದ್ದು ಹಾಗೂ ಪದವಿ ಕಾಲೇಜು ತೆರೆಯಲು ಸೂಕ್ತ ಕಟ್ಟಡವನ್ನು ಗುರುತಿಸಬೇಕಾದ ಅಗತ್ಯವನ್ನು ಮಾನ್ಯ ಸದಸ್ಯರುಗಳು ಅಧ್ಯಕ್ಷರ ಗಮನಕ್ಕೆ ತಂದಿದ್ದು, ಈ ಕಾರ್ಯವನ್ನು ಶಿಕ್ಷಣಾಧಿಕಾರಿಗಳಿಗೆ ಜವಾಬ್ದಾರಿಯನ್ನು ವಹಿಸುವುದೆಂದು, ಈ ಎಲ್ಲಾ ಪ್ರಕ್ರಿಯೆಯು ಮಾರ್ಚ್ 2011 ರ ಒಳಗಾಗಿ ಪೂರ್ಣಗೊಳಿಸಿ ಮುಂದಿನ ಶೈಕ್ಷಣಿಕ ವರ್ಷದಿಂದ ಪದವಿ ಕಾಲೇಜು ಕಾರ್ಯಾರಂಭಗೊಳ್ಳಬೇಕೆಂದು ತೀರ್ಮಾನಿಸಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪದವಿ ಕಾಲೇಜು ತೆರೆಯಲು ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:21–12–2010 ರ ಟಿಪ್ಪಣಿ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:21–12–2010 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ದಿನಾಂಕ:21–12–2010ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:29-12-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ: 168/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಒಟ್ಟು 198 ವಾರ್ಡ್‌ಗಳನ್ನು ಹೊಂದಿದ್ದು, ಕೆಲಸ ಕಾರ್ಯಗಳು ದ್ವಿಗುಣಗೊಂಡಿದ್ದು, ಕೆಲವೊಮ್ಮೆ ಪೂಜ್ಯ ಮಹಾಪೌರರು ವಾರ್ಡ್‌ಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಪತ್ರಿಕಾ ಪ್ರಕಟಣೆ ಬಿಡುಗಡೆ ಮಾಡಬೇಕಾದ ಹಲವಾರು ವಿಷಯಗಳಿದ್ದು, ಕೆಲವೊಮ್ಮೆ ವಾರ್ಡ್ ಕಛೇರಿಯಿಂದಲೇ ಪತ್ರಿಕಾ ಪ್ರಕಟಣೆ ಬಿಡುಗಡೆ ಮಾಡಬೇಕಾದ ಸಂದರ್ಭ ಒದಗಿ ಬರುವುದರಿಂದ, ಪಾಲಿಕೆಯಲ್ಲಿ ಪ್ರಸ್ತುತ ಕೇವಲ ಒಬ್ಬ ಸಾರ್ವಜನಿಕ ಸಂಪರ್ಕಾಧಿಕಾರಿ ಇದ್ದು, ಪಾಲಿಕೆಯಲ್ಲಿ ಹೆಚ್ಚಿನ ಕೆಲಸ ಕಾರ್ಯಗಳ ಒತ್ತಡ ಇರುವುದರಿಂದ ಪೂಜ್ಯ ಮಹಾಪೌರರ ಕೆಲಸ ಕಾರ್ಯಗಳಿಗೆ ಆದ್ಯತೆ ನೀಡಲಾಗುವುದಿಲ್ಲ. ಆದ್ದರಿಂದ, ಪೂಜ್ಯ ಮಹಾಪೌರರ ಕಛೇರಿಗಾಗಿಯೇ ಒಬ್ಬ ಪತ್ರಿಕಾ ಕಾರ್ಯದರ್ಶಿ ಇರುವುದು ಸೂಕ್ತವಾಗಿರುವ ಹಿನ್ನಲೆಯಲ್ಲಿ, ಶ್ರೀ. ಲಿಂಗರಾಜು ರವರು ಈ ಹಿಂದೆ ಸಂಜೆವಾಣಿ ದಿನಪತ್ರಿಕೆಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿ ಒಳ್ಳೆಯ ಅನುಭವ ಹೊಂದಿರುವುದರಿಂದ, ಪತ್ರಿಕಾ ಕಾರ್ಯದರ್ಶಿಯನ್ನಾಗಿ ನೇಮಿಸುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿ ಕೊಡುವಂತೆ ಪೂಜ್ಯ ಮಹಾಪೌರರು ದಿನಾಂಕ:17-05-2010 ಮತ್ತು ದಿನಾಂಕ:15-07-2010 ರ ಟಿಪ್ಪಣಿಗಳಲ್ಲಿ ಕೋರಿರುತ್ತಾರೆ.

ಈ ಸಂಬಂಧ ಶ್ರೀ.ಲಿಂಗರಾಜು ರವರನ್ನು ನೇಮಿಸಿಕೊಳ್ಳುವ ಬಗ್ಗೆ ಕಾನೂನು ಕೋಶದ ಮುಖ್ಯಸ್ಥರು ವರದಿಯನ್ನು ಮಂಡಿಸಿದ್ದು, ಸದರಿ ವರದಿಯನ್ವಯ 1977 ರ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ನಿಯಮಾವಳಿಗಳ ನಿಯಮ-20(ಬಿ) ರನ್ವಯ ಪೂಜ್ಯ ಮಹಾಪೌರರ ಪತ್ರಿಕಾ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿಕೊಳ್ಳಲು ಸರ್ಕಾರದ ಪೂರ್ವಾನುಮತಿ ಪಡೆದ ನಂತರ, ಸದರಿಯವರನ್ನು ಸಂಚಿತ ವೇತನದ ಮೇಲೆ ನೇಮಿಸಿಕೊಳ್ಳಬಹುದು ಎಂದು ಅಭಿಪ್ರಾಯ ನೀಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಶ್ರೀ. ಲಿಂಗರಾಜು ರವರನ್ನು ಪೂಜ್ಯ ಮಹಾಪೌರರ ಪತ್ರಿಕಾ ಕಾರ್ಯದರ್ಶಿಯನ್ನಾಗಿ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ನಿಯಮ-20(ಬಿ) ರೀತ್ಯಾ ನೇಮಿಸಿಕೊಳ್ಳಲು ಸರ್ಕಾರದ ಅನುಮೋದನೆ ಕೋರುವ ಬಗ್ಗೆ ಸ್ಥಾಯಿ ಸಮಿತಿಗಳು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:26-11-2010 ರ ಟಿಪ್ಪಣಿ ಹಾಗೂ ಹಾಲಿ ಪೂಜ್ಯ ಮಹಾಪೌರರ ಅವಧಿಯವರೆವಿಗೂ ಶ್ರೀ. ಲಿಂಗರಾಜು ರವರ ಸೇವೆಯನ್ನು ಸಂಚಿತ ಆಧಾರದ ಮೇಲೆ ನೇಮಿಸಿಕೊಳ್ಳುವಂತೆ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ ತೀರ್ಮಾನಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:08-12-2010 ರ ನಿರ್ಣಯ ಹಾಗೂ ಆಯುಕ್ತರ ದಿನಾಂಕ:26-11-2010 ರ ಟಿಪ್ಪಣಿಯನ್ನು ಒಪ್ಪುತ್ತಾ, ಎಲ್ಲಾ ಭತ್ಯೆಗಳು ಸೇರಿ ಮಾಸಿಕ ರೂ.15,000/- ಗಳ ಸಂಚಿತ ವೇತನ ನೀಡುವಂತೆ ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:27-12-2010 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

..........................2

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:27-12-2010 ರ ನಿರ್ಣಯವನ್ನು ಭಾಗಶ: ಒಪ್ಪುತ್ತಾ, ಕರ್ತವ್ಯಕ್ಕೆ ಹಾಜರಾದ ದಿನಾಂಕ:20-05-2010 ರಿಂದ ಅನ್ವಯವಾಗುವಂತೆ ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:27-12-2010 ರ ನಿರ್ಣಯವನ್ನು ಭಾಗಶ: ಒಪ್ಪುತ್ತಾ, ಕರ್ತವ್ಯಕ್ಕೆ ಹಾಜರಾದ ದಿನಾಂಕ:20-05-2010 ರಿಂದ ಅನ್ವಯವಾಗುವಂತೆ ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ. ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

## ದಿನಾಂಕ:30–12–2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

### ವಿಷಯದ ಸಂಖ್ಯೆ: 169/2010–11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕಾಮಗಾರಿ ಇಲಾಖೆಗೆ ಸಂಬಂಧಪಟ್ಟಂತೆ ವಲಯ ಮಟ್ಟದ ಅಧಿಕಾರಿಗಳಿಗೆ ಹಾಗೂ ಕೇಂದ್ರ ಕಛೇರಿಯಲ್ಲಿನ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನೆಯನ್ನು ನೀಡುವ ಕುರಿತಂತೆ ಮಾನ್ಯ ಆಡಳಿತಗಾರರು ವಿಷಯದ ಸಂಖ್ಯೆ ಃ 589 ಃ 2009–2010, ದಿನಾಂಕ:03–03–2010 ರಂದು ಕೆಳಕಂಡಂತೆ ತೀರ್ಮಾನ ನೀಡಿರುತ್ತಾರೆ.

*Proposals for authorizing commissioner to invite tenders is approved. However in respect of authorizing the commissioner to further delegate the power to other officers to invite tenders may be examined especially and specific proposal be submitted for specific authorization.*

*It may not out of place to mention, as already mentioned several times by me in other files, that the finances of BBMP are stretching at this point of time. Work codes have been given beyond possibly what can be paid and the result has been that there are pending bills to the extent of more than 1000 crores at present. I believe that the budget for 2010-11 is under preparation and a realistic budget has to be prepared this time around so that the receipts are inconformity what is budgeted unlike at present where the receipts are falling short of amount anticipated in the budget vide B12(1) 394 / 06-07 dated : 25-1-2010, delegations of powers have been given to the lower level officers like Executive Engineers and Chief Engineer for inviting tenders and approval of tenders. As mentioned above BBMP is having heavy pendency of bills and therefore such delegation of powers will result in further stretching of the organization and will cause even more difficulty. Further this delegation of powers has not been apparently approved by the administrator before consideration of the proposal.*

*Further under condition column it has been observed as follows :*

1) ಅಧಿಕಾರ ಪ್ರತ್ಯಾಯೋಜಿತ ಅಧಿಕಾರಿಗಳು ಆಡಳಿತಾತ್ಮಕ ಒಪ್ಪಿಗೆ, ತಾಂತ್ರಿಕ ಮಂಜೂರಾತಿ ಮತ್ತು ವಿವಿಧ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಮಂಜೂರು ಮಾಡುವಾಗ ಮಿತವ್ಯಯಗಳನ್ನು ಗಮನದಲ್ಲಿಟ್ಟುಕೊಂಡು ವಿವೇಕದಿಂದ ಮತ್ತು ಪಾಲಿಕೆ ಆರ್ಥಿಕ ಹಿತದೃಷ್ಟಿಯಿಂದ ಎಲ್ಲ ನೀತಿ ನಿಯಮಗಳನ್ನು ಪಾಲಿಸತಕ್ಕದ್ದು. ತಾವು ಒಪ್ಪಿಗೆ ಃ ಮಂಜೂರಾತಿ ನೀಡುವ ಎಲ್ಲ ಕಾಮಗಾರಿಗಳು ಅನುಮೋದನೆಗೊಂಡಿರುವ budget ಮತ್ತು ಆರ್ಥಿಕ ಸಂಪನ್ಮೂಲದ ಪರಿಮಿತಿಯೊಳಗೆ ಇದೆಯೇ ಎಂಬುದನ್ನು ನೋಡಿಕೊಳ್ಳತಕ್ಕದ್ದು.

2) ಅಧಿಕಾರ ಪ್ರತ್ಯಾಯೋಜಿತ ಅಧಿಕಾರಿಗಳು ಆಡಳಿತಾತ್ಮಕ ಒಪ್ಪಿಗೆ, ತಾಂತ್ರಿಕ ಮಂಜೂರಾತಿ ಮತ್ತು ವಿವಿಧ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಮಂಜೂರು ಮಾಡುವಾಗ ಕೆಟಿಟಿಪಿ ಕಾಯ್ದೆ 1999 ಮತ್ತು ನಿಯಮಗಳಿಗೆ ಬದ್ಧವಾಗಿರತಕ್ಕದ್ದು

.........................2

***The above conditions are vague and amenable to misuse and misinterpretation. Unless the works are included in the annual programme approved by the council, the question of giving administrative sanction does not arise.***

***Therefore the delegation of powers kept in obeyance for the present, until the financial situation of BBMP shows significant improvement.***

ಮೇಲ್ಕಂಡ ತೀರ್ಮಾನದ ಅನ್ವಯ ಆಯುಕ್ತರವರ ಕಛೇರಿ ಆದೇಶದ ಸಂಖ್ಯೆಃ ಆಯುಕ್ತರು ಃ ಪಿಆರ್ ಃ 778 ಃ 2009–2010, ದಿನಾಂಕ ಃ 6–3–2010 ರಲ್ಲಿ ಟೆಂಡರ್ ಆಹ್ವಾನಿಸುವ ಅಧಿಕಾರ ಪ್ರತ್ಯಾಯೋಜಿತ ಅಡಿಯಲ್ಲಿ ಕಾರ್ಯಪಾಲಕ ಅಭಿಯಂತರರಿಗೆ ಅಧಿಕಾರ ಪ್ರತ್ಯಾಯೋಜನೆ ಮಾಡಿರುವ ಅಧಿಕಾರವನ್ನು ಸದ್ಯಕ್ಕೆ ತಡೆ ಹಿಡಿಯಲಾಗಿದೆ ಎಂದು ಆದೇಶ ಹೊರಡಿಸಲಾಗಿದೆ.

2010–2011ನೇ ಸಾಲಿನ ಆಯವ್ಯಯದಲ್ಲಿ ಎಲ್ಲಾ ವಲಯ ವಾರ್ಡ್‌ಗಳ ಕಾರ್ಯಕ್ರಮದ ಪಟ್ಟಿಗೆ ಅನುಮೋದನೆ ದೊರೆತಿದ್ದು ಈ ಕಾಮಗಾರಿಗಳಿಗೆ ಟೆಂಡರ್ ಕರೆಯುವ ಪ್ರಕ್ರಿಯೆಗೆ ಚಾಲನೆ ನೀಡಬೇಕಾಗಿದ್ದು ಕಾರ್ಯಪಾಲಕ ಅಭಿಯಂತರರಿಗೆ ಈ ಹಿಂದೆ ನೀಡಿದ್ದ ಅಧಿಕಾರಿ ಪ್ರತ್ಯಾಯೋಜನೆಯನ್ನು ಮಾಡಿರುವ ಅಧಿಕಾರವನ್ನು ನೀಡುವುದು ಅವಶ್ಯಕವೆಂದು ಅಭಿಪ್ರಾಯಪಡಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಕೆಳಕಂಡ ಅಂಶಗಳಿಗೆ ಅನುಮೋದೆ ಕೋರಿದೆ;

ಅ) ಮಾನ್ಯ ಆಡಳಿತಗಾರರು ವಿಷಯದ ಸಂಖ್ಯೆ ಃ 589 ಃ 2009–2010 ರಲ್ಲಿ ಕೈಗೊಳ್ಳಲಾದ ತೀರ್ಮಾನಕ್ಕೆ ಮಾರ್ಪಾಡು ಮಾಡಿ, ಆಯುಕ್ತರ ಕಛೇರಿ ಪ್ರತ್ಯಾಯೋಜನೆ ಮಾಡಿರುವ ನಡವಳಿಗಳ ಸಂಖ್ಯೆ:ಬಿ12(1)/394/06–07, ದಿ:25–01–2010 ರಲ್ಲಿನ ನಡವಳಿಯಂತೆ ಕಾರ್ಯಪಾಲಕ ಅಭಿಯಂತರರಿಗೆ ಅಧಿಕಾರ ಪ್ರತ್ಯಾಯೋಜನೆಯನ್ನು ಮಾಡಿರುವ ಅಧಿಕಾರವನ್ನು ಮುಂದುವರೆಸಿಕೊಂಡು ಹೋಗಲು ಅನುಮೋದನೆ.

ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾಮಗಾರಿಗಳಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ಪಡೆದುಕೊಂಡು ತದನಂತರ, ಕಾಮಗಾರಿಯ ಎಷ್ಟೇ ಮೊತ್ತದ್ದಾದರೂ ಎಲ್ಲಾ ಮೊತ್ತಕ್ಕೂ ಕಾರ್ಯಪಾಲಕ ಅಭಿಯಂತರರೇ ಟೆಂಡರ್ ಆಹ್ವಾನಿಸಿ ಕ್ರಮ ಕೈಗೊಳ್ಳುವ ಬಗ್ಗೆ ಅನುಮೋದನೆ.

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:27–12–2010 ರ ಟಿಪ್ಪಣಿ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

............................3

"ಆಯುಕ್ತರವರ ದಿನಾಂಕ:27-12-2010 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಪಿ.ಎನ್.ಸದಾಶಿವ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ದಿನಾಂಕ:27-12-2010ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು